ಆದಿಲಶಾಹಿ ಸಾಹಿತ್ಯ ಸಂಪುಟ : ೧೧

ಎರಡನೆಯ ಇಬ್ರಾಹಿಂ ಆದಿಲಶಾಹ ವಿರಚಿತ

ಕಿತಾಬೆ ನವರಸ

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೧೧

ಎರಡನೆಯ ಇಬ್ರಾಹಿಂ ಆದಿಲಶಾಹ
ವಿರಚಿತ

ಕಿತಾಬೆ ನವರಸ

ಆದಿಲಶಾಹಿ ಸಾಹಿತ್ಯ ಸಂಪುಟ : ೧೧

ಎರಡನೆಯ ಇಬ್ರಾಹಿಂ ಆದಿಲಶಾಹ
ವಿರಚಿತ

ಕಿತಾಬೆ ನವರಸ

ಅನುವಾದಕರು
ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

Kitabe Navaras – Dakhani Urdu work of Ibrahim Adilshah II
Kannada Translation by – **Dr. Krishna Kolharkulkarni**

Published by : **Dr. P.G.Halakatti Research Centre,**
B.L.D.E. Association, Vijayapur, Karnataka

Edition : **2016**

Pages : **xx + 164 = 184**

Copies : **1000**

Price : **Rs. 200.00**

Typeset : **Dr. P. G. Halakatti Research Centre,** Vijayapur

Printed : **Print Point,** Bengaluru. Mob : 9739067359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ಕಿತಾಬೆ ನವರಸ : ಪರ್ಶಿಯನ್ ಕೃತಿಗಳು
ಅನುವಾದಕರು : **ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆವೃತ್ತಿ : ಪ್ರಥಮ ೨೦೧೬

ಪುಟಗಳು : xx + ೧೬೪ = ೧೮೪

ಪ್ರತಿಗಳು : ೧೦೦೦

ಬೆಲೆ : ರೂ. ೨೦೦.೦೦

ಡಿ.ಟಿ.ಪಿ. : ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ವಿಜಯಪುರ

ಮುದ್ರಣ : ಪ್ರಿಂಟ್ ಪಾಯಿಂಟ್, ಬೆಂಗಳೂರು
ಮೊ. ೯೭೩೯೦೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ವಿಜಯಪುರ

ಸಹಾಯಕ ನಿರ್ದೇಶಕರು,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯಪುರ

*

ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಾಪುರದ ಬಿ.ಎಲ್.ಡಿ. ಶಿಕ್ಷಣಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣ ಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು–ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಾಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ–ಸಮನ್ವಯದಿಂದ ೧೪೮೯–೧೬೮೬ರ ವರೆಗೆ ರಾಜ್ಯಭಾರಮಾಡಿದ ರಾಜಮನೆತನವಿದು. 'ದಿನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕಬರನಂತೆ 'ದಾದೇ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಶಹನು ಸಮನ್ವಯಸಮಾಜ ಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು–ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ–ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ. ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ–ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ.

ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯ ಪರ್ಶಿಯನ್, ದಖನಿ-ಉರ್ದು ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ. ಗು. ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಭಿನ್ನತೆ ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ-ನೆರವುಗಳಿಗೆ, ಈ ಯೋಜನೆಯ ಸಲಹಾಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು. ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ-ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ-ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ-ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫಗು. ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ॥ ಎಂ.ಎಸ್. ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ವಿಜಾಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ವಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ. ೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ಇಲ್ಲಿ ಆಳಿದ ೮ ಜನ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಗುಲ್ಶನೆ–ಇಬ್ರಾಹಿಮಿ ಇತಿಹಾಸದ ಕರ್ತೃ ಮಹಮ್ಮದ ಕಾಸಿಮ ಫರಿಸ್ತಾ, ಎರಡನೆಯ ಇಬ್ರಾಹಿಮ ಆದಿಲಶಹ(ಕ್ರಿ.ಶ. ೧೫೮೦–೧೬೨೬)ನ ಆಸ್ಥಾನದಲ್ಲಿದ್ದುಕೊಂಡು ಆ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖಣಿ ಹಿಂದಿ ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಬಿಜಾಪುರ ಇತಿಹಾಸದ ವಿಷಯದಲ್ಲಿ ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಮೂಲ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ

ಮೂಲ ಆಕರಗಳು ವಿಶ್ವದಾದ್ಯಂತ ಚದುರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖಣಿ ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದ ಮೂಲಕ ಪ್ರಕಟಿಸುವ ಪ್ರಯತ್ನವಾಗಿದೆ. 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ. ಗು. ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಚ್.ಡಿ ಪದವಿಗಳನ್ನು ಪಡೆದಿದ್ದಾರೆ. ಇನ್ನು ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯ ಕರಡು ಪ್ರತಿಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ, ಈ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಯೋಜನೆಗೆ ಅನುಮತಿ ನೀಡಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಕಾಲದ ಬಿಜಾಪುರ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಭಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಗುರುತಿಸಲಾಯಿತು.

೧. **ಮುಹಮ್ಮದ ಕಾಸೀಮ ಫರಿಶ್ತಾ** : ತಾರೀಖೆ ಫರಿಶ್ತಾ [ಪರ್ಶಿಯನ್].
ಇಂಗ್ಲಿಷ್‌ಗೆ ಅನುವಾದ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ. ೧೮೯೧], ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ** : ಇಬ್ರಾಹಿಮನಾಮಾ [ದಖನಿ].
ಪ್ರಕಟವಾಗಿದೆ. ಮೂಲ ದಖನಿ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಸಾತಾರಾದ ಔಂಧ ಅರ್ಕೀವ್ಸದಲ್ಲಿವೆ.

೩. **ಅಸದಬೇಗ** : ವಾಕಿಯಾತೆ ಅಸದಬೇಗ [ಪರ್ಶಿಯನ್].
ಚಾಪ್‌ಮನ್‌ನಿಂದ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿಯೂ ಭಾಗಶಃ ಅನುವಾದ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ** : ತಾರೀಖೆ ಅಲಿ ಆದಿಲಶಹ [ಪರ್ಶಿಯನ್].
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ(ಹೈದರಾಬಾದ್)ಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ** : ಮುಹಮ್ಮದನಾಮಾ [ಪರ್ಶಿಯನ್].
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ವಿಜಯಪುರದಲ್ಲಿ ಲಭ್ಯ ಭಾಗಶಃ ಬಿ.ಡಿ. ವರ್ಮಾರಿಂದ ಇಂಗ್ಲಿಷನಲ್ಲಿ ಅನುವಾದ.

೬. **ನುಸ್ರತಿ** : ಅಲಿನಾಮಾ [ದಖನಿ].
ಪ್ರಕಟವಾಗಿದೆ. ಪ್ರತಿ ದುರ್ಲಭ.

೭. **ಮೌಲ್ವಿ ಬಶೀರುದ್ದೀನ ಅಹ್ಮದ** : ವಾಕಿಯಾತೆ ಮಮಲಿಕತ್ ವಿಜಯಪುರ [ಉರ್ದು].
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶೀಮ ಘುಜೂನಿ**: ಫುತುಹತೆ ಆದಿಲಶಾಹಿ [ಪರ್ಶಿಯನ್].
ಮುಂಬಯಿ ಅರ್ಕೀವ್ಸ ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ** : ತಜ್ಕಿದತುಲ್ ಮುಲೂಕ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್ ಜೈನುದ್ದೀನ ಅಲ್ ಮಾಬಾರಿ** : ತುಹಫತುಲ್ ಮುಜಾಹಿದೀನ [ಅರೇಬಿಕ್].
ಇಂಗ್ಲಿಷ್ ಅನುವಾದ ಪ್ರಕಟವಾಗಿದೆ.

೧೧. **ಸೈಯದ ಅಲಿ ಬಿಲಗ್ರಾಮಿ** : ತಾರೀಖೆ ದಖನ್ ೪ ಸಂಪುಟಗಳು [ಉರ್ದು].

೧೨. **ಸಯ್ಯದ ಮೊಹಿಯುದ್ದೀನ ಪೀರಜಾದಾ:** ಅಹವಾಲೆ ಸಲಾತೀನ ವಿಜಯಪುರ [ಪರ್ಶಿಯನ್]. ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

೧೩. **ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ** : ತಾರೀಖೆ ಹಪ್ತಕುರ್ಸೀ [ಪರ್ಶಿಯನ್]. ಸಾಲಾರಜಂಗ ವಸ್ತು ಸಂಗ್ರಹಾಲಯ, ಹೈದರಾಬಾದ. ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. **೨ನೆಯ ಇಬ್ರಾಹಿಮ ಆದಿಲಶಹ** : ಕಿತಾಬೆ ನವರಸ [ದಖನಿ]. ಪ್ರಕಟವಾಗಿದೆ.

೧೫. **ಮುಹಮ್ಮದ್ ಇಬ್ರಾಹಿಮ್ ಜುಬೇರಿ** : ರೌಜತುಲ್ ಔಲಿಯಾ ಎ ವಿಜಯಪುರ [ಪರ್ಶಿಯನ್].
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೪೮೧೩.

೧೬. **ಮುಹಮ್ಮದ್ ಇಬ್ರಾಹಿಮ್ ಜುಬೇರಿ** : ಬಸಾತೀನೆ ಸಲಾತೀನ [ಪರ್ಶಿಯನ್]. ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಶಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. **ಮೀರ ಅಹಮದ ಅಲಿಖಾನ** : ಗುಲದಸ್ತಾ ಎ ವಿಜಯಪುರ [ದಖನಿ]. ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. **ಅಬುಲ ಹಸನ ಕಾದಿರಿ** : ಶಾಹಿಪತ್ ಇ ಹುದಾ [ಪರ್ಶಿಯನ್]. ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. **ಆದಿಲಶಾಹಿಕಾಲದ ಫರ್ಮಾನುಗಳು ಮತ್ತು ಸನದುಗಳು** : ಭಾರತ ಇತಿಹಾಸ ಸಂಶೋಧಕ ಮಂಡಳ ಪುಣೆ, ವಿಜಯಪುರ ವಸ್ತುಸಂಗ್ರಹಾಲಯ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿ ಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತು ಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತು ಸಂಗ್ರಹಾಲಯ, ಗೋಳಗುಮ್ಮಟ ಬಿಜಾಪುರ ಈ ಕೇಂದ್ರಗಳಲ್ಲಿ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : **ತಾರೀಖೆ ಅಲಿ ಆದಿಲಶಹ [ದಖಣಿ]**

೨. ಮೀರ್ ರಫೀಯುದ್ದೀನ ಶಿರಾಜಿ : **ತದ್ಕಿರಾತ-ಅಲ್-ಮುಲ್ಕ [ಪರ್ಶಿಯನ್]**

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : **ಹಪ್ತ ಕುರ್ಸೀ [ಪರ್ಶಿಯನ್]**

೪. ಮೀರ ಅಹಮದ ಅಲಿ ಖಾನ : **ಗುಲದಸ್ತಾ ಎ ಬಿಜಾಪುರ [ದಖಣಿ]**

೫. ಜುಹೂರ್ ಬಿನ್ ಜುಹೂರಿ : **ಮಹಮ್ಮದನಾಮಾ [ಪರ್ಶಿಯನ್]**

ಇದಲ್ಲದೆ, ಫೆರಿಸ್ತಾನ ತಾರೀಖ–ಇ–ಫೆರಿಸ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದ, ಅಬ್ದುಲ್ಲಾ ದೇಹಲವಿ ವಿರಚಿತ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದ, ಕವಿ ನುಸ್ರತಿಯ 'ಅಲಿನಾಮಾ' ಘುತೂಹತ್ ಅಲಂಗೀರದ ಇಂಗ್ಲಿಶ್ ಅನುವಾದ ಮತ್ತು ಹಲವು ನೂರು ಪರ್ಶಿಯನ್ ಮೂಲ ಮತ್ತು ಮರಾಠೀ ಅನುವಾದದ ಆದಿಲಶಾಹೀ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದದ ಕೆಲಸ ಪ್ರಾರಂಭ ಮಾಡಲಾಯಿತು. ಕನ್ನಡ ಭಾಷೆಗೆ ಅನುವಾದ ಮಾಡುವ ಪರ್ಶಿಯನ್, ದಖಣಿ ಮತ್ತು ಉರ್ದು ಭಾಷೆಗಳನ್ನು ಬಲ್ಲ ಈ ಕೆಳಗಿನ ವಿದ್ವಾಂಸರನ್ನು ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಿಬೂಬುರ್ ರಹಮಾನ ಮದನಿ ವಿಜಯಪುರ.

೨. ಶ್ರೀ ಬಿ. ಜಯಾಚಾರ್ಯ, ನ್ಯಾಯವಾದಿಗಳು ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್ ನ್ಯಾಯವಾದಿಗಳು ಹಾಸನ.

೪. ಡಾ. ಅಬ್ದುಲ್ ಹಮೀದ, ಶಿಕ್ಷಣ ತಜ್ಞರು, ತಿಪಟೂರು.

೫. ಶ್ರೀ ಎಂ.ಎನ್ ನದಾಫ, ವಿಜಯಪುರ.

೬. ಪ್ರೊ ವಸಂತ ಕುಷ್ಟಗಿ, ಸಾಹಿತಿಗಳು ಕಲಬುರಗಿ.

೭. ಶ್ರೀಮತಿ ರತ್ನಾ ಮಣ್ಣೂರ, ಕಲಬುರಗಿ.

೮. ಡಾ. ಅಮೀರುದ್ದೀನ ಕಾಜಿ ವಿಜಯಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ವಿಜಯಪುರ.

೧೨. ಡಾ. ಆರ್.ಕೆ.ಕುಲಕರ್ಣಿ, ವಿಜಯಪುರ.

೧೩. ಡಾ. ಮುಹಮ್ಮದ ಸಿಬ್ಘತ್‌ಉಲ್ಲಾಹ್, ಬೆಂಗಳೂರು

೧೪. ಶ್ರೀ ಬೋಡೆ ರಿಯಾಜ಼್ ಅಹ್ಮದ್ ತಿಮ್ಮಾಪುರಿ, ಕಲಬುರಗಿ.

ಇವರ ಸಹಕಾರದಿಂದ ಮೊದಲ ಹಂತವಾಗಿ ಈ ಕೆಳಗಿನ

೧. ತಾರೀಖ–ಇ–ಫೆರಿಸ್ತಾ : ೪ ಸಂಪುಟಗಳು.

೨. ಬುಸಾತಿನೆ ಸಲಾತೀನ : ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖಣಿ], ಗುಲದಸ್ತಾಯೆ ಬಿಜಾಪುರ [ದಖಣಿ], ಹಪ್ತ ಕುರ್ಸಿ [ಪರ್ಶಿಯನ್], ಭಾಗಶಃ ಫುತುಹತೆ ಅಲಂಗೀರ ಮತ್ತು ಕೆಲವು ಫರ್ಮಾನುಗಳು, ಇವೆಲ್ಲ ಸೇರಿ ೬ನೆಯ ಸಂಪುಟ.

೪. ಮೊಹಮ್ಮದನಾಮಾ, ೭ ನೆಯ ಸಂಪುಟ

೫. ಅಲಿನಾಮಾ–ತಾರೀಖೇ ಸಿಕಂದರಿ ೮ ನೆಯ ಸಂಪುಟ

೬. 'ಊರುಸೇ–ಇರ್ಫಾನ್' (ಮನ್ ಲಗನ್) ೯ನೆಯ ಸಂಪುಟ

೭. 'ತಝ್ಕಿರತುಲ್ ಮುಲೂಕ್(ಬಾದಶಾಹರ ಚರಿತ್ರೆ)'

ಹೀಗೆ ೧೦ ಸಂಪುಟಗಳು ಪ್ರಕಟವಾಗಿವೆ. ಇದೀಗ ೧೧ ನೆಯ ಸಂಪುಟವಾಗಿ ಎರಡನೆಯ ಇಬ್ರಾಹಿಮ ಆದಿಲಶಾಹ ವಿರಚಿತ 'ಕಿತಾಬೆ ನವರಸ' ಕವನ ಸಂಕಲನವನ್ನು ಈ ಸಮಿತಿಯ ನಿರ್ದೇಶಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಗೆ ಅನುದಾನ ನೀಡಿದ ಕರ್ನಾಟಕ ಸರ್ಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರಿಗೆ, ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಈ ಹಿಂದೆ ವಿಜಯಪುರ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಶ್ರೀ ರಿತ್ವಿಕ್ ರಂಜನ್ ಪಾಂಡೆ ಮತ್ತು ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ಡಿ. ರಂದೀಪ ಅವರನ್ನು, ಈ ಯೋಜನೆಯ ಸಮಿತಿಯ ಅಧ್ಯಕ್ಷರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸೋಮಶೇಖರ ವಾಲಿ ಹಾಗೂ ಬಿ.ಎಲ್.ಡಿ.ಇ. ಸಂಸ್ಥೆಯ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ

ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಅವರ ಶ್ರಮವನ್ನು ಪ್ರೀತಿಯಿಂದ ನೆನೆಯುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ಪರಿವಿಡಿ

ಎರಡನೆಯ ಇಬ್ರಾಹಿಮ ಆದಿಲಶಹನ

ಕಿತಾಬೆ – ನೌರಸ

*

೧. ಪೀಠಿಕೆ

೧೪ನೆಯ ಶತಮಾನದ ಪ್ರಾರಂಭದಲ್ಲಿ ದಕ್ಷಿಣ ಭಾರತದಲ್ಲಿಯ ದೇವಗಿರಿಯ ಯಾದವರನ್ನು ಮುಸಲ್ಮಾನರು ಸೋಲಿಸಿ ರಾಜ್ಯವನ್ನು ದೆಹಲಿಯ ಸಾಮ್ರಾಜ್ಯಕ್ಕೆ ಸೇರಿಸಿದರು. ಈ ಯಾದವರ ರಾಜ್ಯದಲ್ಲಿದ್ದ ತರ್ದವಾಡಿ –೧೦೦೦ದ ವಿಜಾಪುರದ ಪ್ರದೇಶಕ್ಕೆ ಕರೀಮುದ್ದೀನನು ಕ್ರಿ.ಶ.೧೩೦೭ರಲ್ಲಿ ಬಂದು ಪ್ರಥಮ ರಾಜ್ಯಪಾಲನಾಗಿ ಅಧಿಕಾರ ವಹಿಸಿಕೊಂಡನು. ಮುಂದಿನ ದಿನಗಳಲ್ಲಿ ದಕ್ಷಿಣ ಭಾರತದ ತುಂಬ ಮುಸಲ್ಮಾನರ ಪ್ರವೇಶವಾಯಿತು. ಮುಹಮ್ಮದ–ಬಿನ್–ತುಘಲಕನ ಹೊತ್ತಿಗೆ ಇಡೀ ದಕ್ಷಿಣ ಭಾರತವೆಲ್ಲ ಮುಸ್ಲಿಮರ ಅಧಿಪತ್ಯಕ್ಕೆ ಒಳಪಟ್ಟಿತು. ಕೆಲವೇ ದಿನಗಳಲ್ಲಿ ಅವನ ಅರಾಜಕತೆಯಿಂದ ಸರದಾರರು ಬಂಡೆದ್ದರು. ತಂತಮ್ಮ ಸ್ವಾತಂತ್ರ್ಯವನ್ನು ಸಾರಹತ್ತಿದರು. ಪ್ರಥಮವಾಗಿ ಬಂಗಾಲದಲ್ಲಿ ಬಂಡೆದ್ದಿತು. ಮರುವರುಷ (ಕ್ರಿ.ಶ.೧೩೩೫) ತೀರ ದಕ್ಷಿಣದ ಮಾಬಾರದಲ್ಲಿಯ ಸುಲ್ತಾನ ಜಲಾಲುದ್ದೀನ ಅಶನಖಾನನು ಬಂಡೆದ್ದು ತನ್ನ ಸ್ವಾತಂತ್ರ್ಯವನ್ನು ಸಾರಿದನು.[೧] ಇದುವೆ ದಕ್ಷಿಣ ಹಿಂದುಸ್ತಾನದಲ್ಲಿಯ ಪ್ರಥಮ ಮುಸ್ಲಿಂ ರಾಜ್ಯವೆನಿಸಿತು.

ಈ ಹೊಸರಾಜ್ಯವು ಮಧ್ಯದಲ್ಲಿಯ ಹಿಂದುಗಳಿಗೆ ತಮ್ಮ ಅಸ್ತಿತ್ವವನ್ನು ಯೋಚಿಸಲು ಒಂದು ಹೊಸ ಸೂಚನೆಯಾಯಿತು. ಈಗ ಹಿಂದುಗಳು ಮುಸಲ್ಮಾನರು ಅಧೀನದಲ್ಲಿರಬೇಕು. ಇಲ್ಲವೆ ಪ್ರತಿಭಟಿಸಿ ಅವರ ಅಧಿಕಾರವನ್ನು ಕಿತ್ತೊಗೆದು ಸ್ವತಂತ್ರ ಹಿಂದೂ ರಾಜ್ಯವನ್ನು ಕಟ್ಟಬೇಕು. ಎರಡರಲ್ಲಿಯ ಒಂದರ ನಿರ್ಣಯ ಆಗಲೇಬೇಕಾಯಿತು. ಅದರ ಪರಿಣಾಮವಾಗಿಯೇ ಮರುವರುಷ ಅಂದರೆ ಕ್ರಿ. ಶ. ೧೩೩೬ರಲ್ಲಿ ಕಂಪಲಿಯ ರಾಜ್ಯಪಾಲ ಸಂಗಮ ವಂಶದ ಹರಿಹರನು ತನ್ನ ಸ್ವಾತಂತ್ರ್ಯವನ್ನು ಘೋಷಿಸಿ ತುಂಗಭದ್ರೆಯ ತಟದಲ್ಲಿ ಒಂದು ಹೊಸ ಹಿಂದೂ ರಾಜ್ಯವನ್ನು ಸ್ಥಾಪಿಸಿದನು. ಅದುವೆ ವಿಜಯನಗರ ರಾಜ್ಯವೆನಿಸಿತು.

ತೀರ ದಕ್ಷಿಣದಲ್ಲಿಯ ಮಾಬಾರ (ಮಧುರೆ)ದಲ್ಲಿಯ ಮುಸಲ್ಮಾನರ ರಾಜ್ಯ ಮಧ್ಯದಲ್ಲಿಯ ಹಿಂದುಗಳ ವಿಜಯನಗರ ರಾಜ್ಯ ತುಂಗಭದ್ರೆಯ ಉತ್ತರದಿಂದ ದೆಹಲಿಯ ಮಧ್ಯ ತುಂಬ ಅಂತರವಾಯಿತು. ಅಲ್ಲಿ ಮತ್ತೊಂದು ಹೊಸ ರಾಜ್ಯಕ್ಕೆ ನಾಂದಿಯಾಯಿತು. ಮುಂದಿನ ಹತ್ತು ವರುಷಗಳಲ್ಲಿ ಕ್ರಿ. ಶ. ೧೩೪೬ರಲ್ಲಿ ದೇವಗಿರಿಯೂ ಸ್ವತಂತ್ರವಾಗಿ ತನ್ನ ಹೊಸ ರಾಜಧಾನಿ ಕಲಬುರ್ಗಿಯಲ್ಲಿ 'ಬಹಮನಿ' ರಾಜ್ಯ ಸ್ಥಾಪನೆಯಾಯಿತು.

ಈ ಮೊದಲೆ ದೆಹಲಿಯ ಆಡಳಿತದಲ್ಲಿ ಒಂದು ಸುಬೆಯಾಗಿ ಮಾರ್ಪಟ್ಟ ವಿಜಾಪುರವು ಬಹಮನಿ ರಾಜ್ಯಕ್ಕೊಳಪಟ್ಟಿತು. ವಿಭಾಗ ಮಟ್ಟದ ರಾಜಧಾನಿ ಎನಿಸಿತು. ನೂರೈವತ್ತು ವರುಷಗಳ ತನ್ನ ಆಡಳಿತದಲ್ಲಿ ಬಹಮನಿ ರಾಜ್ಯವು ಅನೇಕ ಏರಿಳಿತಗಳನ್ನು ಕಂಡಿತು.

೧೫ನೆಯ ಶತಮಾನದ ಉತ್ತರಾರ್ಧದಲ್ಲಿ ಬಹಮನಿ ರಾಜ್ಯವು 'ಬೀದರ' ರಾಜಧಾನಿಯಿಂದ ನಡೆಯುತ್ತಿತ್ತು. ಧೀರ ಶೂರ ಮುತ್ಸದ್ದಿ ಎಂದೇ ಇತಿಹಾಸದಲ್ಲಿ ವರ್ಣಿತನಾದ ಮಹಮೂದ ಗವಾನನು ಬಹಮನಿ ರಾಜ್ಯದ ಮುಖ್ಯಮಂತ್ರಿಯಾಗಿದ್ದನು. ಆಂತರಿಕ ತಿಕ್ಕಾಟದಲ್ಲಿ ಕ್ರಿ. ಶ. ೧೪೭೧ರಲ್ಲಿ ಆತನನ್ನು ಕೊಂದರು. ಆತನ ವಧೆಯ ಅನಂತರ ಬಹಮನಿ ರಾಜ್ಯದಲ್ಲಿ ತುಂಬ ಗಲಭೆಯಾಯಿತು. ಅದು ವಿಕೋಪಕ್ಕೆ ಹೋಗಿ ಅಹ್ಮದನಗರದ ರಾಜ್ಯಪಾಲ ಭೈರಿ ನಿಜಾಮಶಹನು ಬಂಡೆದ್ದು ಬಹಮನಿ ರಾಜ್ಯದಿಂದ ಹೊರಬಿದ್ದನು. ಅಹ್ಮದನಗರದಿಂದಲೆ ತನ್ನ ಸ್ವಾತಂತ್ರ್ಯವನ್ನು ಸಾರಿ ಹೊಸ 'ನಿಜಾಮಶಾಹಿ' ರಾಜ್ಯವನ್ನು ಪ್ರಾರಂಭಿಸಲು ಕಾರಣನಾದನು. ಆ ದಿನಗಳಲ್ಲಿ ವಿಜಾಪುರದಲ್ಲಿ ತುರ್ಕ ವಂಶದ ಯುಸುಫಖಾನನು ರಾಜ್ಯಪಾಲನಾಗಿದ್ದನು. ಆತನೂ ನಿಜಾಮಶಾಹನ ಹೆಜ್ಜೆಯನ್ನು ತುಳಿದು ಕ್ರಿ.ಶ. ೧೪೮೯ರಲ್ಲಿ ತನ್ನ ಸ್ವಾತಂತ್ರ್ಯವನ್ನು ಸಾರಿದನು. ವಿಜಾಪುರದಲ್ಲಿ ಹೊಸ ಆದಿಲಶಾಹಿ ರಾಜ್ಯವನ್ನು ಪ್ರಾರಂಭಿಸಿದನು.

೧. ಆದಿಲಶಾಹಿ ರಾಜ್ಯ (ಕ್ರಿ.ಶ. ೧೪೮೯-೧೬೮೬) :

ರಾಜ್ಯಪಾಲ ಯುಸುಫಖಾನನು ರಾಜನಾಗಿ ಯುಸುಫ ಆದಿಲಖಾನನಾದಮೇಲೆ ಸಹ್ಯಾದ್ರಿ ಪರ್ವತದ ಒಂದು ಕೋಟೆಯಲ್ಲಿ ಸ್ವತಂತ್ರವಾಗಿ ರಾಜ್ಯ ನಿರ್ವಹಿಸುತ್ತಿದ್ದ ಮುಕುಂದರಾವ ಎಂಬ ಮರಾಠಾ ಸರದಾರನನ್ನು ಸೋಲಿಸಿ ಅವನ ತಂಗಿಯನ್ನು ಮದುವೆಯಾದನೆಂದು ಖ್ಯಾತ ಇತಿಹಾಸಕಾರ 'ಮಹ್ಮದ ಕಾಶೀಮ ಫರಿಶ್ತಾ' ಹೇಳುತ್ತಾನೆ. ಆತನು ಎರಡನೆಯ ಇಬ್ರಾಹಿಮ ಆದಿಲಶಹನ ಆಸ್ಥಾನದ ಪಂಡಿತ ಇತಿಹಾಸಕಾರನಾಗಿದ್ದ ವಿಜಾಪುರದ ಆದಿಲಶಾಹಿ ರಾಜ್ಯದ ಕುರಿತು ದೊರೆಯುವ ಸಮಕಾಲೀನ ಪ್ರಥಮ ದಾಖಲೆ, ಆತ ಬರೆದ 'ಗುಲ್ಶನೆ – ಇಬ್ರಾಹಿಮ' ಅಥವಾ 'ಭಾರತದಲ್ಲಿ ಮಹ್ಮದೀಯರ ರಾಜ್ಯ' ಎಂಬ ಇತಿಹಾಸದ ಗ್ರಂಥವೇ ಆಗಿದೆ.

ಯುಸುಫ ಹಾಗೂ ಮುಕುಂದರಾಯನ ತಂಗಿ, ಇವರಿಬ್ಬರ ಸಂತತಿ ಮುಂದಿನ ದಿನಗಳಲ್ಲಿ ಸುಮಾರು ಎರಡು ಶತಕಗಳಷ್ಟು ಕಾಲ ವಿಜಾಪುರ ರಾಜಧಾನಿಯಿಂದ ಆದಿಲ್‌ಶಾಹಿ ರಾಜ್ಯವನ್ನು ಆಳಿತು. 'ಆದಿಲ್' ಎಂಬುದು ಪರ್ಶಿಯನ್ ಶಬ್ದ. ಅದರ ಅರ್ಥ 'ನ್ಯಾಯ'. ಮುಕುಂದರಾಯನ ತಂಗಿಯ ಮೊದಲ ಹೆಸರು ಏನಿತ್ತೆಂಬುದು ಗೊತ್ತಾಗಿಲ್ಲ. ಆದರೆ ಯುಸುಫನು ಮದುವೆಯಾದ ಮೇಲೆ ಅವಳಿಗೆ 'ಬುಬೂಜಿ ಖಾನುಮ್' ಎಂದು ಹೆಸರಿಟ್ಟನು.

ಯುಸುಫಖಾನನು ವಿಜಾಪುರದಲ್ಲಿ ತನ್ನ ಸ್ವತಂತ್ರ ರಾಜ್ಯವನ್ನು ಪ್ರಾರಂಭಿಸಿದರೂ ಕೂಡ ಆತನು ತನ್ನ ರಾಜ್ಯಾರೋಹಣ ಸಮಾರಂಭವನ್ನು ನಡೆಸಲಿಲ್ಲ. ಬಹಮನಿ ರಾಜ್ಯ ಇನ್ನೂ ಜೀವಂತವಾಗಿತ್ತು. ಅದು ಜೀವಂತವಾಗಿ ಇರುವವರೆಗೂ (ಕ್ರಿ.ಶ.೧೫೨೬) ಇಲ್ಲಿಯ ರಾಜರು ತಮ್ಮ ಹೆಸರಿನ ಮುಂದೆ 'ಶಾಹ' ಎಂಬ ಪದವನ್ನು ಬಳಸಲಿಲ್ಲ. 'ಖಾನ' ರಾಗಿಯೇ ಉಳಿದರು ಎಂದು ಇಲ್ಲಿಯ ಹಲವಾರು ಶಾಸನಗಳು ಹೇಳುತ್ತವೆ.

ಯುಸುಫ ಖಾನನು ವಿಜಾಪುರದಲ್ಲಿ ತನ್ನ ಸ್ವತಂತ್ರ ರಾಜ್ಯವನ್ನು ಪ್ರಾರಂಭಿಸುವ ಹೊತ್ತಿಗೆ ತುಂಗಭದ್ರೆಯ ದಡದಲ್ಲಿಯ ವಿಜಯನಗರ ಸಾಮ್ರಾಜ್ಯವು ತನ್ನ ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದಿತು. ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ರಂಗಗಳಲ್ಲಿ ತನ್ನದೇ ಆದ ವೈಶಿಷ್ಟ್ಯಗಳೊಂದಿಗೆ ಮೆರೆಯುತ್ತಿತ್ತು. ಸಾಹಿತ್ಯ, ಶಿಲ್ಪ, ಸಂಗೀತ ಕಲೆಗಳು ಕೂಡ ಅಭಿವೃದ್ಧಿ ಹೊಂದಿದ್ದುವು. ಇಂಥದೇ ಒಂದು ಸಾಮ್ರಾಜ್ಯ ಉತ್ತರ ಭಾರತದಲ್ಲಿ 'ಮೊಘಲ'ರದ್ದಾಗಿತ್ತು. ವಿಜಾಪುರ ರಾಜ್ಯವು ಸ್ವತಂತ್ರ ರಾಜ್ಯವಾಗಿದ್ದರೂ ಸಾಮ್ರಾಜ್ಯವಾಗಿರಲಿಲ್ಲ. ಅದೊಂದು ಪುಟ್ಟ ಸಂಸ್ಥಾನದಷ್ಟಿತ್ತು. ಯುಸುಫ (ಕ್ರಿ. ಶ. ೧೪೮೯–೧೫೧೦) ಆತನ ಮಗ ಇಬ್ರಾಹಿಮ (ಕ್ರಿ. ಶ. ೧೫೧೦–೧೫೩೪) ಮೊಮ್ಮಗ ಮೊದಲ ಇಬ್ರಾಹಿಮ (ಕ್ರಿ.ಶ. ೧೫೩೪–೧೫೫೭)ರು ಆಗೀಗ ಪರಸ್ಪರ ಶಾಹೀ ರಾಜರುಗಳೊಂದಿಗೆ ಹತ್ತೆಂಟು ಹಳ್ಳಿಗಳಿಗಾಗಿ ಬಡಿದಾಡುವಲ್ಲಿ ಯಾವಾಗಾದರೊಮ್ಮೆ ವಿಜಯನಗರದವರೊಡನೆ ಕಾಲು ಕೆದರಿ ಯುದ್ಧ ಮಾಡಿ ಒಂದು ಕೋಟೆಯನ್ನು ಗೆಲ್ಲುವಲ್ಲಿ ಅಥವಾ ಸೋಲುವಲ್ಲಿ ತೃಪ್ತಿ ಪಡುತ್ತಿದ್ದರು. ಗೆದ್ದಾಗ ಸಿಕ್ಕಷ್ಟನ್ನು ದೋಚಿಕೊಂಡು ಬಂದು ವಿಜಾಪುರದ ಭಾಂಡಾರವನ್ನು ತುಂಬಿಕೊಳ್ಳುತ್ತಿದ್ದರು.

ಮುಕ್ಕಾಲು ಶತಮಾನ ಹೀಗೆ ಕುಂಟುತ್ತ ಸಾಗಿದ್ದ ಆದಿಲಶಾಹಿ ರಾಜ್ಯದ ದೈವ ತೆರೆದದ್ದು ಕ್ರಿ. ಶ. ೧೫೬೫ರ ರಕ್ಕಸಗಿ ತಂಗಡಗಿ ಕಾಳಗದಲ್ಲಿ! ಈ ಘನಘೋರ ಕಾಳಗದಲ್ಲಿ ಎಲ್ಲ ಶಾಹಿ ರಾಜರು ಒಗ್ಗಟ್ಟಾಗಿ ವಿಜಯನಗರದ ರಾಜನನ್ನು ಸೋಲಿಸಿದರು. ಅಳಿಯರಾಮರಾಯನನ್ನು ಕಾಳಗದಲ್ಲಿಯೇ ಕೊಂದರು. ಈ ಕಾಳಗದ ರೂವಾರಿ ವಿಜಾಪುರದ ಆದಿಲಶಾಹಿ ರಾಜ್ಯದ ನಾಲ್ಕನೆಯ (ವಾಸ್ತವದಲ್ಲಿ ಐದನೆಯ) ಬಾದಶಹ ಮೊದಲ ಅಲಿ ಆದಿಲಶಾಹನೇ ಆಗಿದ್ದ. ಆತನ ಕಾಲ ಕ್ರಿ. ೧೫೫೭–೧೫೮೦.

ಆದಿಲಶಾಹಿ ರಾಜ್ಯದ ಉಚ್ಛ್ರಾಯ ಕಾಲ ಪ್ರಾರಂಭವಾದದ್ದು ಇಲ್ಲಿ. ಆ ವರೆಗೆ "ಕೃಷ್ಣಾ ಮಲಪ್ರಭಾ ನದಿಗಳ ಮಧ್ಯಕ್ಕೆ ಸೀಮಿತವಾಗಿದ್ದ ಆದಿಲಶಾಹಿ ರಾಜ್ಯ ಈ ಕಾಳಗದಿಂದಾಗಿ ಒಮ್ಮೆಲೆ ಪಶ್ಚಿಮ ಪೂರ್ವಗಳಲ್ಲಿ ಕೊಂಕಣದಿಂದ ಕೃಷ್ಣಾ ತುಂಗಭದ್ರೆಯರ ಸಂಗಮದ ಪ್ರದೇಶದವರೆಗೂ ರಾಜ್ಯ ವಿಸ್ತಾರವಾಯಿತು. ಹೀಗೆ ದೊರೆತ ಫಲವತ್ತಾದ ಪ್ರದೇಶ ಹಾಗೂ ಕಾಳಗದ ಅನಂತರ ಕೊಳ್ಳೆ ಹೊಡೆದು ತಂದ ವಿಜಯನಗರದ ಅಗಣಿತ ಸಂಪತ್ತು ಮುಂದಿನ ದಿನಗಳಲ್ಲಿ ವಿಜಾಪುರ ನಗರ ಹಾಗೂ ರಾಜ್ಯದ ಅದ್ಭುತ ಪ್ರಗತಿಗೆ ದಾರಿಯಾಯಿತು.

ಮುಂದಿನ ಸುಮಾರು ನೂರಾಇಪ್ಪತ್ತು ವರುಷಗಳಲ್ಲಿ ವಿಜಾಪುರವನ್ನು ಆಳಿದವರು ನಾಲ್ವರು ಆದಿಲಶಾಹಿ ರಾಜರು. ಅವರಲ್ಲಿ ಮೊದಲ ಅಲಿಯ ಅಣ್ಣನ ಮಗ ಎರಡನೆಯ ಇಬ್ರಾಹಿಮ ಆದಿಲಶಾಹ (ಕ್ರಿ. ಶ. ೧೫೮೦-೧೬೨೬) ಅವನ ಮಗ ಮಹ್ಮದ ಆದಿಲಶಾಹ (ಕ್ರಿ.ಶ. ೧೬೨೬-೧೬೫೬) ಅವರುಗಳ ಕಾಲದಲ್ಲಿ ಆದಿಲಶಾಹಿ ರಾಜ್ಯವು ಸಾಮ್ರಾಜ್ಯವಾಗಿ ವೈಭವದ ತುತ್ತ ತುದಿಯನ್ನು ಮುಟ್ಟಿತು. ಕ್ರಿ ಶ. ೧೬೫೬ರಲ್ಲಿ ಮಹ್ಮದ ಆದಿಲಶಾಹನು ಮರಣ ಹೊಂದಿದಾಗ ದಕ್ಷಿಣೋತ್ತರ ತಂಜಾವುರದಿಂದ ಮುಂಬಯಿ ಹಾಗೂ ಪಶ್ಚಿಮದಿಂದ ಪೂರ್ವಕ್ಕೆ ಗೋವೆಯಿಂದ ಕೃಷ್ಣೆ-ತುಂಗೆಯರ ಸಂಗಮದವರೆಗೂ ಆದಿಲಶಾಹಿ ರಾಜ್ಯ ಹಬ್ಬಿಕೊಂಡಿತ್ತು. ಮಹ್ಮದನ ಮಗ ಎರಡನೆಯ ಅಲಿಯ ಕಾಲದಲ್ಲಿ (ಕ್ರಿ. ಶ. ೧೬೫೬-೧೬೭೨) ಆದಿಲಶಾಹಿ ರಾಜ್ಯದ ಅವನತಿಗೆ ಪ್ರಾರಂಭವಾಗಿ ಅವನ ಮಗ ಸಿಕಂದರ (ಕ್ರಿ.ಶ. ೧೬೭೨-೧೬೮೬)ನ ಕಾಲದಲ್ಲಿ ಕ್ರಿ.ಶ. ೧೬೮೬ರಲ್ಲಿ ವಿಜಾಪುರವು ಔರಂಗಜೇಬನ ವಶವಾಗಿ ದೆಹಲಿಯು ಮೊಘಲ ಸಾಮ್ರಾಜ್ಯದಲ್ಲಿ ಸೇರಿಕೊಂಡಿತು.

೩. ಸಾಹಿತ್ಯ ಸಂಗೀತ ಕಲಾಪ್ರಿಯ ರಾಜರು :

ವಿಜಾಪುರದ ಬಾದಶಹರು ಹಾಗೂ ಕೆಲವು ರಾಣಿಯರು ಅಕ್ಷರಪ್ರಿಯರಾಗಿದ್ದರು. ಸಂಗೀತದಲ್ಲಿ ಆಸಕ್ತಿಯನ್ನು ಹೊಂದಿದವರಾಗಿದ್ದರು. ಲಲಿತಕಲೆ-ಶಿಲ್ಪಕಲೆಗಳಲ್ಲೂ ಅವರ ಅದಮ್ಯ ಆಸಕ್ತಿ ಇದ್ದುದು ಕಂಡು ಬರುತ್ತದೆ.

ಆದಿಲಶಾಹಿ ಬಾದಶಹರು ಶ್ರೇಷ್ಠ ಯೋಧರಾಗಿದ್ದಂತೆ ಸಾಮಾಜಿಕ ಕಳಕಳಿ ಉಳ್ಳವರೂ ಆಗಿದ್ದರು. ಸಾಹಿತ್ಯ, ಸಂಗೀತ ಕಲೆಗಳ ಪೋಷಕರೂ ಆಗಿದ್ದರು. ಸ್ವತಃ ಸಾಹಿತಿಗಳೂ, ಸಂಗೀತಗಾರರೂ, ಕಲಾವಿದರೂ ಆಗಿದ್ದರು. ಆದರೆ ಖ್ಯಾತ ಇತಿಹಾಸಕಾರರಾದ ಕಜಿನ್, ಟೇಲರ್, ಫರ್ಗ್ಯೂಸನ್, ಶೇರವಾನಿ, ವರ್ಮಾ, ನಯೀಮ, ಸಿದ್ದಿಕಿ, ಜೋಶಿ ಮೊದಲವಾದರು ವಿಜಾಪುರದ ರಾಜಕೀಯ ಹಾಗೂ ವಾಸ್ತುಶಿಲ್ಪದ ಇತಿಹಾಸವನ್ನಷ್ಟೆ ಕೆದಕಿದರು. ಸಾಮಾಜಿಕ ಹಾಗೂ ಧಾರ್ಮಿಕ ಇತಿಹಾಸವನ್ನು

ಅಲ್ಲಲ್ಲಿ ಕಿಂಚಿತ್ ಕಣ್ಣು ಹಾಯಿಸಿದರಾದರೂ ಅವರ ಕಾಲದ ಸಾಂಸ್ಕೃತಿಕ ಇತಿಹಾಸದತ್ತ ವಿಶೇಷ ಗಮನವನ್ನು ಹರಿಸದೇ ಇದ್ದದು ಅಚ್ಚರಿ!

ಆದಿಲಶಾಹಿ ರಾಜ್ಯದ ಸ್ಥಾಪಕ ಯುಸುಫ್ ಆದಿಲ್ ಖಾನನು ಕಾವ್ಯಪ್ರೇಮಿಯಾಗಿದ್ದನು. ಸ್ವತಃ ಕವಿಯಾಗಿದ್ದನು. ಕೃತಿಗಳನ್ನು ರಚಿಸಿದ್ದನು. ಮತ್ತು ಪರ್ಶಿಯದಿಂದ ಹೆಸರಾಂತ ಕವಿ ಸಾಹಿತಿಗಳನ್ನು ಕರೆಸಿಕೊಂಡಿದ್ದನು. ಯುಸುಫ್, ಸ್ವತಃ ಸಂಗೀತಗಾರನೂ ಆಗಿದ್ದನು. ಅವನ ಕುರಿತು ಹೇಳುತ್ತ, ಸಂಗೀತದಲ್ಲಿಯ ಆತನ ಅಭಿರುಚಿ ಹಾಗೂ ಪರಿಣತಿಗಳು ಸಮಕಾಲೀನ ಸಂಗೀತಗಾರರಿಗಿಂತ ಶ್ರೇಷ್ಠವಾಗಿದ್ದುವು. ಸ್ವತಃ ಎರಡು-ಮೂರು ಬೇರೆ ಬೇರೆ ತೆರನಾದ ವಾದ್ಯಗಳನ್ನು ನುಡಿಸುತ್ತಿದ್ದನು. ಆತ ತನ್ನ ಕೃತಿಗಳನ್ನು ಸ್ವತಃ ಹಾಡುತ್ತಿದ್ದನು." ಎಂದಿದ್ದಾನೆ, ಫರಿಶ್ತಾ "ಯುಸೂಫನು ತಂಬೂರಿ ಹಾಗೂ 'ಉದ' ಎಂಬ ವಾದ್ಯಗಳಲ್ಲಿ ಪರಿಣತನಾಗಿದ್ದ"ನೆಂದು ಇನ್ನೊಬ್ಬ ಇತಿಹಾಸಕಾರ ಬಶೀರುದ್ದೀನ ಅಹ್ಮದ ಹೇಳುತ್ತಾನೆ. ಆತನ ಆಸ್ಥಾನದಲ್ಲಿ ಹಲವಾರು ಜನ ಸಂಗೀತಗಾರರಿದ್ದರು. ಅವರಲ್ಲಿ ಉಸ್ತಾದ ಗಿಲಾನಿ ಹಾಗೂ ಹುಸೇನ ಕಾಜಿವಿನಿ ಎಂಬವರು ಖ್ಯಾತ ಗಾಯಕರಾಗಿದ್ದರು. ಅವರು ಯಾವಾಗಲೂ ಯುಸುಫಖಾನನ ಜೊತೆಗೆ ಇರುತ್ತಿದ್ದರು. ಅವರು ಹಾಡುವ ಗಜಲ್‌ಗಳಿಗೆ ಆರುಸಾವಿರ 'ಹಂಸ' (ಹೊನ್ನು)ಗಳನ್ನು ಕೊಡುತ್ತಿದ್ದನು. ಹುಸೇನ ಕಾಜವಿನಿ 'ಕಾನುನ್' ಎಂಬ ವಾದ್ಯವನ್ನು ಚೆನ್ನಾಗಿ ನುಡಿಸುತ್ತಿದ್ದನು.

ಯುಸುಫನ ಮಗ ಇಸ್ಮಾಯಿಲ್ ಕೂಡ ಕಾವ್ಯ ಸಂಗೀತಗಳಲ್ಲಿ ನಿರತನಾಗಿರುತ್ತಿದ್ದನು. ಇತಿಹಾಸದ ಪುಟಗಳಲ್ಲದೆ ಸಮಕಾಲೀನ ಕೆಲವು ಬಣ್ಣದ ಚಿತ್ರಗಳೂ ಇದನ್ನು ದೃಢಪಡಿಸುತ್ತವೆ. ಒಂದು ಚಿತ್ರದಲ್ಲಿ ಇಸ್ಮಾಯಿಲ್ ಆದಿಲ್‌ಖಾನನು ಸಿತಾರ ವಾದ್ಯವನ್ನು ನುಡಿಸುತ್ತ ಕುಳಿತಿದ್ದನ್ನು ಕಾಣಿಸಲಾಗಿದೆ. ಅವನಿಗೆ ತುರ್ಕಿ ಸಂಗೀತದಲ್ಲಿ ಬಹಳ ಆಸಕ್ತಿ ಇದ್ದಿತು.

ಇಸ್ಮಾಯಿಲನ ಮಗ ಮೊದಲ ಇಬ್ರಾಹಿಮನ ಕಾಲದಲ್ಲಿ ದಖಣಿ ಸಾಹಿತ್ಯಕ್ಕೆ ರಾಜಾಶ್ರಯ ದೊರೆಯಿತು. ಆತನ ಕಾಲದಲ್ಲಿ ಧರ್ಮ ಪ್ರಚಾರಕ್ಕೆಂದೇ ಬಂದ ಸೂಫಿ ಸಂತ ಶಾಹ ಮಿರಾಂಜಿಯು ದಖಣಿ ಭಾಷೆಯಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಅವನ ಖುಶ್‌ನಾಮಾ ಎಂಬ ಕಾವ್ಯ ಬಹು ಪ್ರಸಿದ್ಧವಾಗಿದೆ. ಇಲ್ಲಿಯ 'ಖುಶ್' ನಿಷ್ಕಾಮ ವಿರಕ್ತೆ ಹಾಗೂ ದೈವಭಕ್ತ ತರುಣ ಯುವತಿಯ ಹೆಸರು. ಖುಶ್ ಎಂದರೆ ಸಂತೋಷ ಸಂತುಷ್ಟಿ ಎಂಬ ಅರ್ಥವೂ ಉಂಟು. ಈ 'ಖುಶ್'ದ ಇತಿಹಾಸವೆ 'ಖುಶ್‌ನಾಮಾ' ಕಾವ್ಯದ ವಿಷಯ. ಕಾವ್ಯದಲ್ಲಿ ಒಂದೆಡೆ ಈ ಜಗದ ವಿಷಮತೆಯನ್ನು ವೈಚಿತ್ರ್ಯವನ್ನು ಚಿತ್ರಿಸುತ್ತ ಕವಿ ಹೀಗೆ ಹೇಳುತ್ತಾನೆ.

'ಏಕಸ ಮಾಟೀ ಮೋಲೀ ದೇವೆ ಏಕಸ ಮಾಟೀ ಬಾಜ'
ಕೀತೋ ಭೀಕ ಮಾಂಗಾವೆ ಕೀತೋ ದೇವೇ ರಾಜ"

ಎಂದು ಮುಂದುವರಿಸುತ್ತ ಈ ಒಂದೇ ನೆಲದಲ್ಲಿ ಹುಟ್ಟಿದ ಒಬ್ಬ ಭಿಕ್ಷೆ ಬೇಡುತ್ತಾನೆ. ಇನ್ನೊಬ್ಬ ರಾಜ್ಯವಾಳುತ್ತಾನೆ ಎಂದು ಅನೇಕ ಉದಾಹರಣೆಗಳನ್ನು ಕೊಡುತ್ತ ಈ ವಿಷಮತೆಯನ್ನು ದೇವರೆ ನಿರ್ಮಾಣ ಮಾಡಿರುವನೆಂದೂ ಆತನ ಶಕ್ತಿ 'ಕರ್ತುಮ್ ಕರ್ತುಮ್‌ನ್ಯಥಾ ಕರ್ತುಮ್' ಎಂಬಂತೆ ಇದೆ ಎಂದು ಹೇಳುತ್ತಾನೆ. ಈ ಭಾವನೆ ಭಾರತೀಯ ತತ್ವಜ್ಞಾನದ ತಳಹದಿಯಿಂದ ಬಂದುದೆಂದು ಬೇರೆ ಹೇಳಬೇಕಾಗಿಲ್ಲ.

ಮೊದಲ ಇಬ್ರಾಹಿಮನ ಮಗ ಮೊದಲ ಅಲಿ ಆದಿಲ ಶಹನು ಸಂನ್ಯಾಸಿಯಂತೆ ಬಟ್ಟೆಂiುನ್ನು ತೊಡುತ್ತಿದ್ದನಂತೆ. ಹಿಂದು ಮುಸ್ಲಿಂ ಸಂತರೊಡನೆ ನಿರತನಾಗಿರುತ್ತಿದ್ದನೆಂದೂ ಫಕೀರನಂತೆಯೇ ಇರುತ್ತಿದ್ದನೆಂದು ಫಿರಿಶ್ತಾ ಹೇಳುತ್ತಾನೆ. ಅವನ ಹೆಂಡತಿ ಚಾಂದಬೀಬಿ ಸುಪ್ರಸಿದ್ಧ ಕಲಾವಿದೆ ಕವಯಿತ್ರಿ, ಅವಳ ಕಣ್ಣರಿಕೆಯಲ್ಲಿ ಈ ಹಿನ್ನೆಲೆಯನ್ನೊಳಗೊಂಡು ಬೆಳೆದವನು ಎರಡನೆಯ ಇಬ್ರಾಹಿಮ ಆದಿಲಶಾಹ. ಕಿತಾಬೆ ನವರಸ ಕಾವ್ಯದ ಕರ್ತೃ!

೨. ಎರಡನೆಯ ಇಬ್ರಾಹಿಮ ಆದಿಲಶಾಹ (ಕ್ರಿ. ಶ. ೧೫೮೦-೧೬೨೭) :

ಕ್ರಿ. ಶ. ೧೫೮೦ರಲ್ಲಿ ಒಬ್ಬ ಅಜ್ಞಾತ ಸೇವಕನಿಗೆ ಬಲಿಯಾಗಿ ಮೊದಲನೆಯ ಅಲಿ ಆದಿಲಶಾಹನು ತೀರಿಕೊಂಡಾಗ ಆತನಿಗೆ ಮಕ್ಕಳಿರಲಿಲ್ಲ. ಆತನ ಅಣ್ಣನ ಮಕ್ಕಳಲ್ಲಿಯ 'ಇಬ್ರಾಹಿಮ' ಮೊದಲ ಅಲಿ ಆದಿಲಶಹನ ಪ್ರೀತಿ ಪಾತ್ರನಾಗಿದ್ದನು. ಆತನನ್ನೇ ಪಟ್ಟಕ್ಕೆ ಕುಳ್ಳಿರಿಸಿದರು. ಆಗ ಅವನು ೯ ವರುಷದ ಬಾಲಕನು. ಮುಂದಿನ ಸುಮಾರು ಹತ್ತು ವರುಷಗಳಷ್ಟು ಕಾಲ ವಿಜಾಪುರ ರಾಜ್ಯವು ನಾಲ್ಕು ಪ್ರಮುಖ ರಾಜ ಪ್ರತಿನಿಧಿಗಳಿಂದಲೇ ಆಳಲ್ಪಟ್ಟಿತು.

ಬಾಲಕ ಇಬ್ರಾಹಿಮನು ರಾಜ್ಯಾಡಳಿತ ನಡೆಸಲು ಅಸಮರ್ಥನಾದಾಗ, ಆಡಳಿತದ ಸೂತ್ರಗಳೆಲ್ಲ ಪ್ರಧಾನ ಮಂತ್ರಿಯ ಕೈಯಲ್ಲಿ ಇರುವುದು ಸಹಜವಾಗಿತ್ತು ಹಾಗೂ ಆತನೇ ಬಾದಶಹನ 'ಪಾಲನಕರ್ತ'ನಾಗಿಯೂ ಇರುತ್ತಿದ್ದನು. ಬಾದಶಹನ ಸುರಕ್ಷತೆ ಹಾಗೂ ಆತನ ಅಭ್ಯಾಸ ಇತ್ಯಾದಿಗಳ ಭಾರ ಕೂಡ ಮುಖ್ಯಮಂತ್ರಿಯದಾಗಿರುತ್ತಿತ್ತು. ವಿಜಾಪುರ ರಾಜ್ಯದ ಆಸ್ಥಾನದಲ್ಲಿ ಮುಸಲ್ಮಾನರಲ್ಲಿಯೇ ಎರಡು ಮುಖ್ಯ ಪಂಗಡಗಳಿದ್ದುವು. ಒಂದು ವಿದೇಶಿಯರದ್ದು. ಅವರು ಸಾಮಾನ್ಯವಾಗಿ ಇರಾಣ, ತುರ್ಕಸ್ಥಾನಗಳಿಂದ ಬಂದ ಮುಸಲ್ಮಾನರಾಗಿದ್ದು ಅವರದೇ ಒಂದು ಗುಂಪು ಇತ್ತು. ಅದಕ್ಕೆ ವಿದೇಶೀ ಗುಂಪು ಎಂದು ಕರೆಯುತ್ತಿದ್ದರು. ಇನ್ನೊಂದು ಗುಂಪು ಬಹಳ ದಿನಗಳಿಂದ ಇಲ್ಲಿಯೇ ಉಳಿದು ಬೆಳೆದವರಾಗಿದ್ದರು. ಅವರಿಗೆ ಸಾಮಾನ್ಯವಾಗಿ

'ದಖಣಿ' ಎಂದು ಕರೆಯಲಾಗುತ್ತಿತ್ತು. ಈ ದಖಣಿ ಮುಸಲ್ಮಾನರಲ್ಲಿಯೇ ಬಹಳ ದಿನಗಳ ಹಿಂದೆ ಭಾರತಕ್ಕೆ ಬಂದು ನೆಲೆಸಿದ 'ಹಬಶೀ' ಗಳು ಅಂದರೆ ಅಬಿಸಿನೀಯಾದಿಂದ ಬಂದ ಮುಸಲ್ಮಾನರು ಸೇರಿಕೊಂಡಿದ್ದರು. ಆದ್ದರಿಂದಲೇ ಈ ಗುಂಪಿಗೆ ದಖಣಿಯ ಜೊತೆಗೆ ಹಬಶೀ ಎಂಬ ಹೆಸರೂ ಬಂದಿತ್ತು. ಈ ಎರಡೂ ಗುಂಪುಗಳ ಉಗಮ ಬಹಮನಿ ರಾಜ್ಯದಲ್ಲಿಯೇ ಆದದ್ದು ಮುಂದೆ 'ಶಾಹಿ' ರಾಜ್ಯಗಳಲ್ಲೂ ಮುಂದುವರಿದಿದೆ. ಮತ್ತು ಅಂದಿನಿಂದಲೇ ಪರಸ್ಪರ ಒಬ್ಬರನ್ನೊಬ್ಬರು ದ್ವೇಷಿಸುತ್ತಲೂ ಬಂದಿದ್ದಾರೆ. ಸಂದರ್ಭಾನುಸಾರ ಒಂದು ಗುಂಪಿನ ವ್ಯಕ್ತಿಗೆ ಅಧಿಕಾರ ಸೂತ್ರಗಳು ದೊರೆತರೆ ಇನ್ನೊಂದು ಗುಂಪಿನ ಜಹಗೀರುಗಳನ್ನು, ಇನಾಮುಗಳನ್ನು ರದ್ದು ಮಾಡುತ್ತಿದ್ದರು. ಮತ್ತು ಅವುಗಳನ್ನು ತಮ್ಮ ಗುಂಪಿನ ಜನರಿಗೆ ಕೊಡುತ್ತಿದ್ದರು. ವಿಜಾಪುರದ ಇತಿಹಾಸದ ತುಂಬ ಇಂಥ ಹಲವಾರು ಸನ್ನಿವೇಶಗಳು ಉಂಟಾದದ್ದನ್ನು ಕಾಣುತ್ತೇವೆ. ಇಂಥ ಒಂದು ಪರಸ್ಪರ ತಿಕ್ಕಾಟದ ವಾತಾವರಣದಲ್ಲಿಯೇ ಎರಡನೆಯ ಇಬ್ರಾಹಿಮನು ಸಿಂಹಾಸನವನ್ನೇರಿ ಬಾದಶಹನಾದನು.

ಬಾಲಕ ಇಬ್ರಾಹಿಮನನ್ನು ಪಟ್ಟಕ್ಕೆ ಕುಳ್ಳಿರಿಸಿ ರಾಜ್ಯದ ಸೂತ್ರಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡ ಮೊದಲ ಮುಖ್ಯಮಂತ್ರಿ ಕಾಮಿಲ್‌ಖಾನನು ದಖಣೀ ಸರದಾರನಾಗಿದ್ದನು. ಸೂತ್ರಗಳನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳುತ್ತಿದ್ದಂತೆಯೇ ಆತನು ಸರ್ವಾಧಿಕಾರಿಯಾಗಲು ಪ್ರಯತ್ನಿಸಹತ್ತಿದನು. ಆದರೆ ಮೊದಲ ಅಲಿ ಆದಿಲಶಹನ ಹೆಂಡತಿ ಇತಿಹಾಸದಲ್ಲಿ 'ಧೀರೋದಾತ್ತ ರಾಣಿ' ಎಂದೇ ಹೆಸರಾದ ಚಾಂದಬೀಬಿ ಕಾಮಿಲಖಾನನಿಗೆ ಸರ್ವಾಧಿಕಾರಿಯಾಗಲು ಆಸ್ಪದ ಕೊಡಲಿಲ್ಲ. ನಾಲ್ಕು ತಿಂಗಳಲ್ಲಿ ದೊರೆತಷ್ಟು ಹಣವನ್ನು ದೋಚಿಕೊಂಡು ತನ್ನ ಜಹಗೀರು ಸ್ಥಳವಾದ ಕರಾಡಕ್ಕೆ ಓಡಿಹೋಗಬೇಕೆನ್ನುವಾಗಲೇ 'ಕಿಶ್ವರಖಾನ' ಎಂಬ ಸರದಾರನನ್ನು ಚಾಂದಬೀಬಿಯು ಬೆನ್ನಟ್ಟಿಸಿದಳು. ದಾರಿಯಲ್ಲಿ ಆತನನ್ನು ಹಿಡಿದು ಕೊಂದು ಮರಳಿದ ಕಿಶ್ವರಖಾನನು ವಿಜಾಪುರ ರಾಜ್ಯದ ಮುಖ್ಯಮಂತ್ರಿಯಾದನು.

ಕಿಶ್ವರಖಾನನು ಕೂಡ ಕಾಮಿಲ್‌ಖಾನನ ದಾರಿಯನ್ನೇ ತುಳಿದು ತುಸು ದಿನಗಳಲ್ಲಿಯೆ ಸರ್ವಾಧಿಕಾರಿಯಾಗಲು ಪ್ರಯತ್ನಿಸಿದ. ರಾಜ್ಯದ ಉಳಿದ ಸರದಾರರು ಇದರ ಸುಳಿವನ್ನು ಚಾಂದಬೀಬಿಗೆ ನೀಡಿದರು ಹಾಗೂ ಬಂಕಾಪುರದ ರಾಜ್ಯಪಾಲ ಮುಸ್ತಾಫಾಖಾನ ಅರ್ದಿಸ್ತಾನಿಯನ್ನು ಕರೆಯಿಸಿ ಕಿಶ್ವರಖಾನನಿಗೆ ತಕ್ಕ ಶಾಸ್ತಿಯನ್ನು ಮಾಡಲು ಯೋಜನೆಗಳನ್ನು ಹಾಕುತ್ತಿರುವಾಗಲೇ ಕಿಶ್ವರಖಾನನು ತನ್ನ ಸೈನ್ಯವನ್ನು ಕಳಿಸಿ ಬಂಕಾಪುರದಲ್ಲಿಯೇ ಮುಸ್ತಾಫಾಖಾನನನ್ನು ಕೊಂದನು ಹಾಗೂ ಚಾಂದಬೀಬಿಯು ತನ್ನ ಅಣ್ಣ ಅಹ್ಮದನಗರದ ಮುರ್ತುಜಾ ನಿಜಾಮ ಶಾಹನಿಗೆ ವಿಜಾಪುರವನ್ನು ಆಕ್ರಮಿಸಲು ಸಂದೇಶ ಕಳಿಸಿದ್ದಾಳೆ ಎಂಬ ಅಪವಾದವನ್ನು ರಾಜ್ಯದ ಜನಮನದಲ್ಲಿ

ಬಿತ್ತರಿಸಿದನು. ಬಾಲಕ ಇಬ್ರಾಹಿಮ ಬಾದಶಹನ ಅಪ್ಪಣೆ ಪಡೆದು ಅವಳನ್ನು ಸಾತಾರೆಯ ಜೇಲಿಗೆ ಅಟ್ಟಿದನು.

ಮುಸ್ತಾಫಖಾನನ ವಧೆ ಹಾಗೂ ಚಾಂದಬೀಬಿಯನ್ನು ಸೆರೆಮನೆಗೆ ಕಳಿಸಿದ ಎರಡೂ ಘಟನೆಗಳು ಕಿಶ್ವರಖಾನನ ಅವನತಿಗೆ ಕಾರಣಗಳಾದವು. ರಾಜಧಾನಿಯ ಜನರು ಇವುಗಳನ್ನು ಒಪ್ಪಲಿಲ್ಲ. ಬೀದಿ ಬೀದಿಗಳಲ್ಲಿ ಆತನ ವಿರುದ್ಧ ಮತಪ್ರದರ್ಶನ ನಡೆಯಿತು. ಇದರ ಸದುಪಯೋಗವನ್ನು ಪಡೆದ ಹಬಶೀ ಸರದಾರ ಇಖಲಾಸಖಾನನು ಕಿಶ್ವರಖಾನನ್ನು ಮುಂದಿನ ಎರಡೇ ತಿಂಗಳುಗಳಲ್ಲಿ ಪದಚ್ಯುತಗೊಳಿಸುವಲ್ಲಿ ಸಫಲನಾದನು. ಹೀಗೆ ಸಿಂಹಾಸನವೇರಿದ ಏಳು ತಿಂಗಳುಗಳಲ್ಲಿ ಇಬ್ರಾಹಿಮನ ರಾಜ್ಯದಲ್ಲಿ ಇಬ್ಬರು ಮುಖ್ಯಮಂತ್ರಿಗಳ ಬದಲಾವಣೆಯಾಯಿತು.

ಇಖಲಾಸಖಾನನು ರಾಜ್ಯಸೂತ್ರಗಳನ್ನು ವಹಿಸಿಕೊಂಡ ತಕ್ಷಣ ಮೊದಲು ಮಾಡಿದ ಕೆಲಸವೆಂದರೆ ಚಾಂದಬೀಬಿಯನ್ನು ಸಾತಾರೆಯ ಜೈಲಿನಿಂದ ಮುಕ್ತಗೊಳಿಸಿ ಮರಳಿ ವಿಜಾಪುರಕ್ಕೆ ಕರೆತಂದನು ಹಾಗೂ ಬಾಲಕ ಇಬ್ರಾಹಿಮನ ಪಾಲನ ಪೋಷಣೆಯ ಭಾರವನ್ನು ಅವಳಿಗೆ ವಹಿಸಿದನು.

ಕಳೆದ ಏಳೆಂಟು ತಿಂಗಳುಗಳ ರಾಜ್ಯದ ಕಾರಭಾರಗಳಿಂದ ಚಾಂದಬೀಬಿ ಪಾಠ ಕಲಿತಿದ್ದಳು. ಒಂದು ಗುಂಪಿನ ಸರದಾರನ ಪ್ರಾಮುಖ್ಯತೆಗೆ ಅವಳು ಇಂಬುಗೊಡಲಿಲ್ಲ. ಹೀಗಾಗಿ ಇಖಲಾಸಖಾನ ಒಬ್ಬನನ್ನೇ ಮುಖ್ಯಮಂತ್ರಿಯನ್ನಾಗಿ ಮುಂದುವರಿಸಲು ಅವಳು ಇಷ್ಟಪಡಲಿಲ್ಲ. ಸಮತೋಲನವನ್ನು ಕಾಯ್ದುಕೊಳ್ಳುವುದಕ್ಕಾಗಿ ಅವಳು ಅಫಜಲಖಾನ ಶಿರಾಜಿ ಎಂಬ ವಿದೇಶಿ ಸರದಾರರನ್ನು ರಾಜ್ಯದ ಮಂತ್ರಿಯನ್ನಾಗಿ ನಿಯುಕ್ತಗೊಳಿಸಿದಳು. ಮತ್ತು ಪ್ರತಿಯೊಂದು ಕೆಲಸದಲ್ಲಿಯೂ ಹಬಶೀ ಸರದಾರ ಇಖಲಾಸಖಾನ ಹಾಗೂ ವಿದೇಶೀ ಸರದಾರ ಅಫಜಲಖಾನ ಇಬ್ಬರೂ ಪರಸ್ಪರ ಚರ್ಚಿಸಿ ಕಾರ್ಯಕೈಕೊಳ್ಳಲು ಸೂಚಿಸಿದಳು. ಇದು ಇಖಲಾಸಖಾನನಿಗೆ ತುಂಬ ಕಷ್ಟದ ಕೆಲಸವಾಯಿತು. ತುಸು ದಿನಗಳಲ್ಲಿಯೇ ಅಫಜಲಖಾನನ ಮೇಲೆ ರಾಜ್ಯ ವಿದ್ರೋಹದ ಆರೋಪ ಹೊರಿಸಿ ಇಖಲಾಸಖಾನನು ಆತನನ್ನು ಸೆರೆ ಹಿಡಿದು ಕೊಲ್ಲಿಸಿದನು. ಈ ಘಟನೆ ರಾಜ್ಯದಲ್ಲಿ ಎರಡು ಪರಸ್ಪರ ಬಣಗಳ ಮಧ್ಯ ನಾಗರಿಕ ದಂಗೆಗೆ ಕಾರಣವಾಯಿತು. ಉಭಯತರೂ ಬೀದಿ ಬೀದಿಗಳಲ್ಲಿ ಬಡಿದಾಡಿ ರಕ್ತದ ಕಾಲುವೆಯನ್ನು ಹರಿಸಿದರು. ಈ ಆಂತರಿಕ ದಂಗೆಯ ಕಾರಣದಿಂದಾಗಿ ದಕ್ಷಿಣದ ನಾಯಕರು ಸ್ವತಂತ್ರರಾದರು. ಅಹ್ಮದನಗರ ಹಾಗೂ ಗೋವಳಕೊಂಡದ ಬಾದಶಹರು ರಾಜ್ಯವನ್ನೇ ಆಕ್ರಮಿಸಲು ಸನ್ನದ್ಧರಾದರು.

ವಿಜಾಪುರದ ಆದಿಲಶಾಹಿ ರಾಜ್ಯ ಬಹುದೊಡ್ಡ ಆಪತ್ತಿನಲ್ಲಿ ಸಿಕ್ಕದ್ದನ್ನು ಗುರುತಿಸಿ ಪ್ರಧಾನ ಅಮಾತ್ಯ ಇಖಲಾಸಖಾನನು ತಾನೇ ಸ್ವತಃ ಚಾಂದಬೀಬಿಯ ಹತ್ತಿರ ಹೋಗಿ ತನ್ನ ಪದವಿಗೆ ರಾಜೀನಾಮೆಯನ್ನು ಇತ್ತನು. ಹಾಗೂ ಅವಳು ಸೂಚಿಸಿದ ಯಾವುದೇ ಅಧಿಕಾರಿಯ ಕೆಳಗೆ ಕೆಲಸ ಮಾಡುವುದಾಗಿ ಆಶ್ವಾಸನೆಯನ್ನು ಕೊಟ್ಟನು. ಚಾಂದಬಿಬಿಯು ಈಗ ಶಾಹ ತಾಹಿರನ ಮಗ ಶಾಹ ಅಬುಲ್‌ಹಸನನ್ನು ಹೊಸ ಮುಖ್ಯಮಂತ್ರಿಯನ್ನಾಗಿ ನಿಯುಕ್ತಗೊಳಿಸಿದಳು. ಹೊಸ ಅಧಿಕಾರಿ ಬಹು ಚಾಣಾಕ್ಷತನದಿಂದ ದಕ್ಷಿಣದ ನಾಯಕರನ್ನು ಅಧೀನಗೊಳಿಸಿದನಲ್ಲದೆ ರಾಜಧಾನಿಯಲ್ಲೂ ಶಾಂತಿಯನ್ನು ತರಲು ಸಫಲನಾದನು. ತಂದೆಯ ಪ್ರಭಾವದಿಂದಾಗಿ ಅಹ್ಮದನಗರದ ದಂಡನ್ನು ಹಿಂದೆಕಳಿಸಿದ. ಪ್ರತಿಭಟಿಸಿದ ಗೋವಳಕೊಂಡದ ಸೈನ್ಯವನ್ನು ಹತ್ತಿಕ್ಕಲು ದಿಲಾವರಖಾನನನ್ನು ಕಳಿಸಿದನು. ಆತ ಗೋವಳಕೊಂಡದ ಸೈನ್ಯವನ್ನು ಬೆನ್ನಟ್ಟಿ ರಾಜ್ಯದಿಂದ ಹೊರಹಾಕಿದನು.

ಈ ಎಲ್ಲ ಘಟನೆಗಳಿಂದ ರಾಜ್ಯದಲ್ಲಿ ಕೆಲ ಕಾಲ ಶಾಂತಿಯನ್ನು ತರುವಲ್ಲಿ ಶಾಹ ಅಬುಲ್ ಹಸನನು ಸಫಲನಾದರೂ ರಾಜ್ಯದ ಪರಿಸ್ಥಿತಿ ಸುಧಾರಿಸಲಿಲ್ಲ. ಗೋವಳಕೊಂಡದ ಸೈನ್ಯವನ್ನು ಸದೆಬಡೆದು ವಿಜಯಿಯಾಗಿ ಮರಳಿದ ದಿಲಾವರಖಾನನು ಶಾಹ ಅಬುಲ್ ಹಸನನೊಂದಿಗೆ ಅನುಕೂಲವಾಗಿ ವರ್ತಿಸುತ್ತಿದ್ದುದು ದಿಲಾವರಖಾನನಿಗೂ ಆತನ ಸಹಯೋಗಿ ಹಮೀದಖಾನನಿಗೂ ಸರಿ ಬರಲಿಲ್ಲ. ಯಾಕೆಂದರೆ ಇಖಲಾಸಖಾನನು ಈ ಉಭಯತರ ಬಣದವನಾಗಿರಲಿಲ್ಲ. ಆದ್ದರಿಂದ ಈ ದ್ವಂದ್ವ ನೀತಿಯ ರಾಜಕಾರಣವನ್ನು ದಿಲಾವರಖಾನ ಹಾಗೂ ಹಮೀದಖಾನರು ಬಹಿರಂಗವಾಗಿಯೇ ಟೀಕಿಸಿದರು. ಮತ್ತೆ ರಾಜಧಾನಿಯಲ್ಲಿ ಉದ್ವಿಗ್ನತೆ ಮುಂದುವರಿಯಿತು. ಎರಡು ತಿಂಗಳುಗಳು ಕಳೆಯುವಷ್ಟರಲ್ಲಿ ದಿಲಾವರಖಾನನು ಲಂಚ ರುಷುವತ್ತುಗಳ ಆಶೆಯಿಂದ ರಾಜಧಾನಿಯಲ್ಲಿಯ ಸೈನ್ಯವು ಇಖಲಾಸಖಾನನ್ನು ತೊರೆದು ತನ್ನ ಹತ್ತಿರ ಬಂದು ಕೂಡಿಕೊಳ್ಳುವಂತೆ ಮಾಡಿದನು. ಈಗ ಇಖಲಾಸಖಾನನು ದಿಲಾವರನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸಿದ್ಧನಾದನು. ಒಪ್ಪಂದದ ಕರಾರುಗಳನ್ನು ಸಿದ್ಧಪಡಿಸಲು ಇಖಲಾಸಖಾನನು ದಿಲಾವರನ ಮನೆಗೆ ಬಂದಾಗ ಆತನನ್ನು ದಿಲಾವರನ ಜನರು ಸೆರೆಹಿಡಿದರು. ಆನಂತರ ಆತನ ಜೊತೆಗಾರ ಅಬುಲ್ ಹಸನನನ್ನು ಸೆರೆಹಿಡಿದು ಕುರುಡನನ್ನಾಗಿ ಮಾಡಿದರು. ಮತ್ತೆ ಕೆಲದಿನಗಳಲ್ಲಿ ಆತನನ್ನು ಕೊಂದರು.

ದಿಲಾವರಖಾನ ಹಾಗೂ ಹಮೀದಖಾನರು ಈಗ ರಾಜ್ಯ ಪ್ರಮುಖರಾದರು. ಮತ್ತು ಹಲವು ದಿನಗಳವರೆಗೆ ಒಗ್ಗಟ್ಟಿನಿಂದ ಕೆಲಸ ಮಾಡಿದರು. ಆದರೆ ಹಮೀದಖಾನನನ್ನು ರಾಜ್ಯದ ಮುಖ್ಯ ಸೇನಾಧಿಪತಿಯನ್ನಾಗಿ ಮಾಡದೆ ದಿಲಾವರಖಾನನು ತನ್ನ ಮಗನನ್ನೇ ಆ ಸ್ಥಳಕ್ಕೆ ತಂದುದು ಹಮೀದಖಾನನಿಗೆ

ಸರಿಬೀಳಲಿಲ್ಲ. ಇದನ್ನು ಅರಿತ ದಿಲಾವರಖಾನನು ಇನ್ನೂ ಮುಂದೆ ಹೋಗಿ ಹಮೀದಖಾನನನ್ನು ಹಿಡಿದು ಸಾತಾರೆಯ ಸೆರೆಮನೆಯಲ್ಲಿ ಇಟ್ಟನು. ಈಗ ದಿಲಾವರಖಾನನು ವಿಜಾಪುರದ ಸರ್ವಾಧಿಕಾರಿಯಾದನು.

ದಿಲಾವರಖಾನನು ತನ್ನ ಅಧಿಕಾರವನ್ನು ದುರುಪಯೋಗಗೊಳಿಸಲಿಲ್ಲ. ಕಟ್ಟುನಿಟ್ಟಿನ ಆಡಳಿತದಿಂದ ರಾಜ್ಯವನ್ನು ನಡೆಸಿದನು. ಆತ ರಾಜ್ಯದ ಒಳ ಹೊರಗೆ ಶಾಂತಿಯನ್ನು ತರಲು ಪ್ರಯತ್ನಿಸಿದನು. ಆತ ಮೊದಲು ಸಮರ್ಥ ಸೈನ್ಯವನ್ನು ಕಳಿಸಿ ದಕ್ಷಿಣದಲ್ಲಿ ಬಂಡೆದ್ದ ನಾಯಕರನ್ನು ಹದ್ದು ಬಸ್ತಿನಲ್ಲಿಟ್ಟನು. ಅಹ್ಮದನಗರ ಹಾಗೂ ಗೋವಳಕೊಂಡದ ರಾಜ್ಯಗಳೊಂದಿಗೆ ಸ್ನೇಹವನ್ನು ಬೆಳೆಸಿಕೊಳ್ಳಲು ಆದಿಲಶಾಹಿ ರಾಜ್ಯದೊಂದಿಗೆ ಶರೀರಸಂಬಂಧವನ್ನು ಕುದುರಿಸುವಲ್ಲಿ ಯಶಸ್ವಿಯಾದನು. ಅಹ್ಮದನಗರದ ನಿಜಾಮ ಮುರ್ತಾಜಾ ನಿಜಾಮ ಶಾಹನ ಮಗ ಹುಸೇನನಿಗೆ ಇಬ್ರಾಹಿಮನ ಸೋದರಿ ಖದೀಜಾ ಸುಲ್ತಾನಳನ್ನು ಕೊಟ್ಟು ಮದುವೆ ಮಾಡುವಲ್ಲಿ ಹಾಗೂ ಗೋವಳಕೊಂಡದ ಮಹಮ್ಮದ ಕೂಲಿ ಕುತುಬಶಾಹನ ಸಹೋದರಿ ಚಾಂದಸುಲ್ತಾನಳನ್ನು ಇಬ್ರಾಹಿಮನಿಗೆ ತಂದು ಮದುವೆ ಮಾಡಿಸಿದನು. ಈ ಹಂತದಲ್ಲಿಯೇ ವಿಜಾಪುರದ ರಾಜಮಾತೆ ಚಾಂದಬೀಬಿಯು ತನ್ನ ಪ್ರಭಾವ ಕುಗ್ಗಿದ್ದನ್ನು ಗಮನಿಸಿ ಇಬ್ರಾಹಿಮನ ಸೋದರಿ ಖದೀಜಾ ಸುಲ್ತಾನಳ ಜೊತೆ ತನ್ನ ತವರು ಮನೆ ಅಹ್ಮದ ನಗರಕ್ಕೆ ಹೋಗಿ ಅಲ್ಲಿಯೇ ಉಳಿದುಕೊಂಡಳು.

ಅಂತು ಏಳೆಂಟು ವರುಷಗಳ ಕಾಲ ದಿಲಾವರನ ನೇತೃತ್ವದಲ್ಲಿ ರಾಜ್ಯ ಶಾಂತಿಯನ್ನು ಕಾಪಾಡಿಕೊಂಡು ಬಂದಿತು. ಕ್ರಿ. ಶ. ೧೫೮೮ರಲ್ಲಿ ಅಹ್ಮದನಗರದೊಂದಿಗಿನ ಯುದ್ಧದೊಂದಿಗೆ ಅಶಾಂತಿಯ ವಾತಾವರಣಕ್ಕೆ ಪ್ರಾರಂಭವಾಯಿತು. ಆ ವರುಷದ ಜೂನ ತಿಂಗಳಲ್ಲಿ ಅಹ್ಮದನಗರ ಮುರ್ತುಜಾ ನಿಜಾಮಶಾಹನನ್ನು ಆತನ ಮಗ ಹುಸೇನನೇ ಕೊಂದು ಪಟ್ಟಕ್ಕೆ ಬಂದನು. ಆದರೆ ಅವನನ್ನು ದಖಣಿ ಸರದಾರರು ಕೊಂದು ನಿಜಾಮಶಾಹಿ ಕುಟುಂಬದ ಇಸ್ಮಾಯಿಲನನ್ನು ಪಟ್ಟಕ್ಕೆ ಕುಳ್ಳಿರಿಸಿದರು. ಮುರ್ತಾಜಾನ ತಮ್ಮ ಬರ್ಹಾಣನು ಅಕಬರ ಚಕ್ರವರ್ತಿಯ ಸಹಾಯದೊಂದಿಗೆ ತಾನೂ ಗದ್ದುಗೆಗೆ ಪ್ರಯತ್ನಿಸಹತ್ತಿದನು. ಅವನಿಗೆ ವಿಜಾಪುರದ ದಿಲಾವರಖಾನನು ತನ್ನ ಸಹಕಾರವನ್ನು ತೋರಿಸಿ ಹರೆಯದ ಇಬ್ರಾಹಿಮನನ್ನು ಯುದ್ಧಕ್ಕೆ ಕರೆದೊಯ್ದನು. ಉಸ್ಮಾನಾಬಾದ ಜಿಲ್ಲೆಯ ಧಾರಾಶಿವದ ಹತ್ತಿರ ನಡೆದ ಘನಘೋರ ಕಾಳಗದಲ್ಲಿ ದಿಲಾವರನು ಸೋಲಬೇಕಾಯಿತು. ಈ ಸೋಲು ದಿಲಾವರನ ಅವನತಿಗೆ ಪ್ರಾರಂಭವಾಯಿತು. ಅವನ ವಿರೋಧಿಗಳು, ದಿಲಾವರನು ಉದ್ದೇಶಪೂರ್ವಕವಾಗಿ ಈ ಕಾಳಗವನ್ನು ಹೂಡಿ ನಿಜಾಮಶಾಹನೊಂದಿಗೆ ಕೈಗೂಡಿಸಿ ಸೋಲನ್ನು ಅನುಭವಿಸಿದ್ದಾನೆಂದು ಬಾದಶಹ ಇಬ್ರಾಹಿಮನಿಗೆ ಹೇಳಿದರು. ಮತ್ತು ಅವನನ್ನು

ಮುಖ್ಯಮಂತ್ರಿ ಪದವಿಯಿಂದ ಕೆಳಗಿಳಿಸಬೇಕೆಂದು ಒತ್ತಾಯಿಸಿದರು. ಈ ಹೊತ್ತಿಗೆ ಇಬ್ರಾಹಿಮನು ೧೪ ವರುಷದವನಾಗಿದ್ದನು. ಚಾಂದಬೀಬಿಯ ಕಣ್ಣರಿಕೆಯಲ್ಲಿ ಬೆಳೆದ ಇಬ್ರಾಹಿಮನಿಗೆ ರಾಜಕಾರಣದಲ್ಲಿಯೂ ಚದುರಂಗದ ಕಾಯಿಗಳ ಪರಿಚಯವಾಗತೊಡಗಿತ್ತು. ತನ್ನ ಅಧಿಕಾರವನ್ನು ನಡೆಸುವ ಹುನ್ನಾರದಲ್ಲಿದ್ದ. ಧಾರಾಶಿವದ ಕಾಳಗದಲ್ಲಿ ಸೋತ ದಿಲಾವರನ ಸೈನ್ಯ ಶಾಹದುರ್ಗದಲ್ಲಿ ಬೀಡು ಬಿಟ್ಟಿತ್ತು. ದಿಲಾವರನ ಸೈನಿಕರ ಕಟ್ಟಪ್ಪಣೆಯಲ್ಲಿ ಇಬ್ರಾಹಿಮನನ್ನು ಡೇರಿಯೊಂದರಲ್ಲಿ ಇರಿಸಲಾಗಿತ್ತು. ಹೇಗಾದರೂ ಮಾಡಿ ಆತನು ದಿಲಾವರನ ಆಧೀನದಿಂದ ತಪ್ಪಿಸಿಕೊಳ್ಳಬೇಕಾಗಿತ್ತು. ಅದಕ್ಕಾಗಿ ದಾರಿಯನ್ನು ಕಾಯತೊಡಗಿದ. ದಿಲಾವರನ ವಿರೋಧಿ ಸರದಾರ ಐನುಲ್‌ಮುಲ್ಕನಿಗೆ ಸಂದೇಶವನ್ನು ಕಳಿಸಿದನು. ಅಂದು ೧೫೯೦ರ ಮೇ ತಿಂಗಳ ೧೦ನೆಯ ತಾರೀಖಿನಂದು ಬೆಳಗಿನ ೧೦ ಗಂಟೆಗೆ ಐನುಲ್‌ಮುಲ್ಕನ ಸೈನಿಕರ ಸಹಾಯದೊಂದಿಗೆ ದಿಲಾವರನ ಡೇರೆಯಿಂದ ಪಾರಾಗಿ ಐನುಲ್‌ಮುಲ್ಕನ ಹತ್ತಿರ ಇಬ್ರಾಹಿಮನು ಸುರಕ್ಷಿತವಾಗಿ ಬಂದು ತಲುಪಿದನು. ಹಿಂದಿನ ರಾತ್ರಿ ಮದ್ಯ ಮಾನಿನಿಯರ ವಶದಲ್ಲಿದ್ದ ದಿಲಾವರನಿಗೆ ಸುದ್ದಿ ತಿಳಿದು ಅವನನ್ನು ಬೆನ್ನಟ್ಟಿ ಬಂದು ಬಾದಶಹನು ಹಾಗೆ ಓಡಿ ಬರಬಾರದೆಂದೂ ಅದು ಅವರ ಘನತೆಗೆ ತಕ್ಕುದಲ್ಲವೆಂದು ವಾದಿಸತೊಡಗಿದ. ಅನವಶ್ಯಕ ವಾದಬೇಡವೆಂದು ಐನುಲ್‌ಮುಲ್ಕನು ತಟಸ್ಥನಾಗಿ ಉಳಿದನು. ಆಗ ಬಾದಶಹ ಇಬ್ರಾಹಿಮನು ಸ್ವತಃ ಎತ್ತರದ ಧ್ವನಿಯಲ್ಲಿ 'ಈ ಸ್ವಾಮಿದ್ರೋಹಿಯನ್ನು ನಿಗ್ರಹಿಸುವ ಶಕ್ತಿ ನಮ್ಮ ಸೈನಿಕರಲ್ಲಿ ಇಲ್ಲವೆ?' ಎಂದು ಕೇಳುತ್ತಿರುವಂತೆ, ನೆರೆದಿದ್ದ ಸರದಾರರಲ್ಲಿಯ ಸಾಮಾನ್ಯ ಸರದಾರನೊಬ್ಬ ತನ್ನ ಕೈ ಬರ್ಚಿಯನ್ನು ದಿಲಾವರನತ್ತ ತೂರಿದ. ಸಂದರ್ಭವನ್ನು ಗಮನಿಸಿದ ದಿಲಾವರನು ತಕ್ಷಣ ಅಲ್ಲಿಂದ ಪಲಾಯನ ಗೈದ. ಇಬ್ರಾಹಿಮ ಆದಿಲಶಹನು ಇದೀಗ ತನ್ನ ಕೈಯಲ್ಲಿಯೆ ರಾಜ್ಯದ ಸೂತ್ರಗಳನ್ನು ಹಿಡಿದು ತನ್ನ ರಾಜಧಾನಿ ವಿಜಾಪುರಕ್ಕೆ ಮರಳಿದನು.

a. ಬಾಲಕ ಇಬ್ರಾಹಿಮನ ವ್ಯಕ್ತಿತ್ವ :

ಕ್ರಿ.ಶ. ೧೫೮೦ ರಿಂದ ಸುಮಾರು ಒಂಭತ್ತು ವರುಷಗಳಷ್ಟು ಕಾಲ ವಿಜಾಪುರದ ಆದಿಲಶಾಹಿ ರಾಜ್ಯವು ದಖಣಿ ಹಬಶೀ ಸರದಾರರಿಂದಲೇ ಆಳಲ್ಪಟ್ಟಿತು. ಮಧ್ಯ ಒಂದಿಷ್ಟು ಕಾಲ ರಾಜಮಾತೆ ಚಾಂದಬೀಬಿಯು ಆಡಳಿತ ನಡೆಸಿದಳಾದರೂ ಮೊತ್ತದಲ್ಲಿ ಸರದಾರರು ಪರಸ್ಪರ ಅಧಿಕಾರಕ್ಕಾಗಿ ಬಡಿದಾಡುವುದರಲ್ಲಿಯೇ ಈ ಸಮಯ ಕಳೆದಿದೆ. ಈ ಅವಧಿಯಲ್ಲಿಯೇ ಗದ್ದುಗೆಗೆ ಬಂದ ಒಂಬತ್ತು ವರುಷದ ಬಾಲಕ ಇಬ್ರಾಹಿಮನು ತನ್ನ ಶಿಕ್ಷಣ ಯುದ್ಧ ಕಲೆ ನ್ಯಾಯದಾನ ಇತ್ಯಾದಿಗಳನ್ನು ಕಲಿಯುತ್ತ ಬೆಳೆಯಬೇಕಾಯಿತು. ಈ ಅವಧಿಯಲ್ಲಿ ಅವನ ವ್ಯಕ್ತಿತ್ವ ಹೇಗೆ ರೂಪುಗೊಂಡಿತು ಎಂಬುದನ್ನು ಝುಬೇರಿಯು

ತನ್ನ 'ಬಸಾತಿನ ಉಸ್ ಸಲಾತಿನ' ಎಂಬ ಗ್ರಂಥದಲ್ಲಿ ಸಮಕಾಲೀನ ಇತಿಹಾಸಕಾರರ ಟಿಪ್ಪಣೆಗಳ ಆಧಾರಗಳಿಂದ ಅಲ್ಲಲ್ಲಿ ತೋರಿಸಿದ್ದಾನೆ.

ಬಾಲಕನಾಗಿದ್ದಾಗಿನಿಂದಲೇ ಇಬ್ರಾಹಿಮನು ತನ್ನ ಗಾಂಭೀರ್ಯತೆಯನ್ನು ತೋರಿಸುತ್ತಿದ್ದನಂತೆ. ಸಿಂಹಾಸನವನ್ನೇರಿದ ಮೊದಲ ದಿನದ ಘಟನೆಯನ್ನೆ ಆತ ಬಹು ರಸವತ್ತಾಗಿ ವರ್ಣಿಸಿದ್ದಾನೆ. ಪಟ್ಟಕ್ಕೆ ಬಂದಾಗ ಇನ್ನೂ ಹತ್ತು ವರುಷ ಪೂರ್ಣಗೊಂಡಿರಲಿಲ್ಲ. ಆದರೂ ಮುಖದ ಮೇಲೆ ಪ್ರೌಢತೆ ತುಂಬಿಕೊಂಡಿತ್ತು. ಅಂದು ಪ್ರಾತಃಕಾಲದಿಂದ ಸಾಯಂಕಾಲದವರೆಗೂ ಎಲ್ಲರ ಭೆಟ್ಟಿಯಾಗಿ ಅವರು ಕೊಡುವ ಕಪ್ಪ ಕಾಣಿಕೆಗಳನ್ನು ಹಸನ್ಮುಖಿಯಾಗಿಯೆ ಸ್ವೀಕರಿಸಿದ. ಸಾಯಂಕಾಲ ಎದ್ದು ತನ್ನ ಕೋಣೆಗೆ ಹೋಗುವಾಗ ಸೇವಕರು ಅವನ ಜೊತೆಗಿದ್ದರು. ಅವರಲ್ಲಿಯ ಒಬ್ಬ ಸೇವಕನು ಬಾಲ ಬಾದಶಹರು ಇಡೀ ದಿನ ಕುಳಿತಲ್ಲಿಯೇ ಕುಳಿತು. ಎಲ್ಲರ 'ಮುಜುರೆ'ಯನ್ನು ಸ್ವೀಕರಿಸುವಲ್ಲಿ ತುಂಬ ದಣಿದಿದ್ದಾರೆಂದು ಅವರಿಗೆ 'ಇನ್ನು ತುಸು ಹೊತ್ತು ವಿಶ್ರಾಂತಿ ಪಡೆಯಿರಿ' ಎಂದನಂತೆ. ಆಗ ಇಬ್ರಾಹಿಮನು ಅವನತ್ತ ಹೊರಳಿ "ನೋಡು ಇಂದಿನಿಂದ ನನಗೆ ಯಾವ ಕೆಲಸವನ್ನು ಕೊಟ್ಟಿದ್ದಾರೆಯೋ ಆ ಕೆಲಸದಲ್ಲಿ ವಿಶ್ರಾಂತಿ, ಅಥವ ಶರೀರಕ್ಕೆ ಸುಖ ಕೊಡುವುದು ಎಂಬ ಮಾತು ಸಾಧ್ಯವಾಗುವುದಿಲ್ಲ!" ಎಂದನಂತೆ

ಎರಡು ವರುಷಗಳ ಅನಂತರದ ಇನ್ನೊಂದು ಘಟನೆ, ಒಂದು ದಿನ ಇಬ್ರಾಹಿಮನ ತಾಯಿ ತುಂಬ ಸಿಟ್ಟಿನಿಂದ ಬಂದು 'ಮುಖ್ಯ ಮಂತ್ರಿಗಳು ನನಗೆ ನಕಲೀ ಆಭರಣಗಳನ್ನು, ಕಡಿಮೆ ಕಿಮ್ಮತ್ತಿನ ದಾಗೀನೆಗಳನ್ನು ಕಳಿಸಿದ್ದಾರೆ. ಇದಕ್ಕಿಂತ ಒಳ್ಳೆಯ ಅಧಿಕ ಬೆಲೆಯ ಆಭರಣಗಳನ್ನು ಕಳಿಸಿದ್ದರೆ ಅವನದೇನು ಗಂಟು ಹೋಗುತ್ತಿತ್ತು. ಅವನೇನು ತನ್ನ ಕೈಯಿಂದ ಕೊಡುತ್ತಾನೆಯೆ?" ಎಂದಳಂತೆ. ಅದಕ್ಕೆ ಹನ್ನೊಂದು ವರುಷದ ಬಾಲಕ ಇಬ್ರಾಹಿಮನು ಅವಳ ಕೋಪವು ಕಿಂಚಿತ್ ಶಾಂತವಾದ ಮೇಲೆ "ಹೇ ತಾಯಿ, ಎಷ್ಟು ರಾಜ್ಯ ನಮ್ಮದಿದೆಯೋ ಅದೆಲ್ಲ ನಿಮ್ಮದೇ ಆಗಿದೆ. ಅದಲ್ಲದೆ ಈವರೆಗೆ ಗಳಿಸಿದ ಹೊರ ರಾಜ್ಯಗಳ ಮೇಲೂ ನಮ್ಮ ಅಧಿಕಾರವೇ ಇದೆ. ಯಾಕೆ ಸಿಟ್ಟಾಗುತ್ತೀರಿ?" ಎಂದನಂತೆ.

ಮೊದಲ ಹತ್ತು ವರುಷಗಳವರೆಗೆ ಇಬ್ರಾಹಿಮನು ತನ್ನ ಕಕ್ಕ ಮೊದಲ ಅಲಿ ಆದಿಲಶಹನ ಕಣ್ಣರಿಕೆಯಲ್ಲಿ ಬೆಳೆದುದರ ಪರಿಣಾಮ ಇದಾಗಿರಬೇಕು. ಅಣ್ಣ ಥಮಾಸ್ಪನ ಕಣ್ಣು ಕಿತ್ತಿ ಸೆರೆಮನೆಯಲ್ಲಿ ಇಟ್ಟಿದ್ದನಾದರೂ ಆತನ ಇಬ್ಬರು ಗಂಡು ಮಕ್ಕಳಾದ ಇಬ್ರಾಹಿಮ ಹಾಗೂ ಇಸ್ಮಾಯಿಲ್‌ರನ್ನು ಮೊದಲ ಅಲಿ ಆದಿಲಶಹನು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನಂತೆ, ಅದಕ್ಕೆ ಕಾರಣ ಬಹುಶಃ ಆತನಿಗೆ ಮಕ್ಕಳಿಲ್ಲದುದೇ ಆಗಿರಬೇಕು. ಮೊದಲನೆ ಅಲಿ ಆದಿಲಶಹನ ಕುರಿತು ಬರೆಯುವಾಗ ಎಲ್ಲ

ಇತಿಹಾಸಕಾರರೂ ಆತನನ್ನು ಒಬ್ಬ ಸಂತನಿಗೆ ಹೋಲಿಸಿದ್ದಾರೆ. ಆತನ ಜೊತೆಗೆಯೇ ಇದ್ದ ರಫಿಯುದ್ದೀನ ಶಿರಾಜಿ ಹೇಳುವಂತೆ 'ಅಲಿ ಆದಿಲಶಹನು ಬಹಳ ಅಂತಃಕರುಣಿಯಾಗಿದ್ದ. ಫಕೀರರ ಹಾಗೆ ಇರುತ್ತಿದ್ದ. ಊಟ ಉಪಚಾರಗಳಲ್ಲಿ, ಸುಖಲೋಲುಪತೆಯಲ್ಲಿ ಆತನಿಗೆ ಎಳ್ಳಷ್ಟು ಆಸಕ್ತಿ ಇರಲಿಲ್ಲ. ಸರದಾರ ಸೇವಕರೊಂದಿಗೆ ಸರಿಸಮನಾಗಿ ವರ್ತಿಸುತ್ತಿದ್ದ. ಸೇವಕರೊಂದಿಗೆ ನೆಲದ ಮೇಲೆಯೇ ಕುಳಿತು ಊಟ ಮಾಡುತ್ತಿದ್ದ. ಊಟದ ವಿಷಯದಲ್ಲಿ ಎಂದೂ ತಕರಾರನ್ನು ತೆಗೆಯುತ್ತಿರಲಿಲ್ಲ. ಹಸಿವೆ ಆದಾಗ ಏನು ದೊರೆಯುತ್ತದೆಯೋ ಅದನ್ನೇ ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ. ಸೇವಕರಿಗೆ ಆರು ಹೊನ್ನುಗಳ ಬಟ್ಟೆಯನ್ನು ಹೊಲಿಸಿದರೆ ತನಗೆ ಎರಡು ಹೊನ್ನುಗಳ ಬಟ್ಟೆಯನ್ನು ಹೊಲಿಸುತ್ತಿದ್ದ. ಬಂಗಾರದ ಒಡವೆಗಳನ್ನು ಆತ ಎಂದೂ ಮುಟ್ಟಲಿಲ್ಲ. ಅಂತೆಯೇ ಅವನಿಗೆ ಅಲಿ ಆದಿಲಶಾಹ ಎಂದು ಹೆಸರಿದ್ದರೂ ಸಂತರ ಹಾಗೆ ಅವನನ್ನು 'ಅಲಿ ಶೇರ ಕಲಂದರ' ಎಂದು ಕರೆಯುತ್ತಿದ್ದರು. ಇಂಥ ಕಕ್ಕನ ಜೊತೆಗೆ ಇಬ್ರಾಹಿಮನು ತನ್ನ ತಿಳುವಳಿಕೆ ಬಂದಂದಿನಿಂದ ಸುಮಾರು ಐದಾರು ವರುಷಗಳನ್ನಾದರೂ ಕಳೆದಿದ್ದಾನೆಂದೇ ಈ ತರದ ನಡವಳಿಕೆ ಬಂದಿರಬೇಕು.

ದಿಲಾವರಖಾನನು ಮುಖ್ಯಮಂತ್ರಿಯಾದ ಅನಂತರ ಆತನು ಇಬ್ರಾಹಿಮನ ವಿದ್ಯಾಭ್ಯಾಸದ ಬಗ್ಗೆ ವ್ಯವಸ್ಥೆ ಮಾಡಿದುದರ ವಿವರ ದೊರೆಯುತ್ತವೆ. ಇಬ್ರಾಹಿಮನು ಪಟ್ಟಕ್ಕೆ ಬಂದಮೇಲೆ ಪ್ರಾರಂಭದ ವರುಷದಲ್ಲಿ ಕಾಮಿಲಖಾನ, ಕಿಶ್ವರಖಾನ ಇಖಲಾಸಖಾನರ ಘಟನೆಗಳಾದ ಅನಂತರ ಬಂದ ದಿಲಾವರಖಾನನು ಸುಮಾರು ಎಂಟು ವರುಷಗಳ ಕಾಲ ರಾಜ್ಯದ ಸೂತ್ರಗಳನ್ನು ನಡೆಸಿದ. ಇದು ಇಬ್ರಾಹಿಮನ ಬೆಳವಣಿಗೆಯ ಕಾಲವೂ ಆಗಿತ್ತು. ದಿಲಾವರಖಾನನ ಹಿರಿಯ ಮಗ ಮಹ್ಮದಖಾನನು ತುಂಬ ಓದಿಕೊಂಡವನಿದ್ದನು. ಆತನು ಇಬ್ರಾಹಿಮನಿಗೆ 'ಕುರಾನ ಷರೀಫ' ಹಾಗೂ 'ಗುಲಿಸ್ತಾನ ಬುಸ್ತಾನ' ಮೊದಲಾದ ಪುಸ್ತಕಗಳ ಅಭ್ಯಾಸ ಮಾಡಿಸಿದನಂತೆ. ಇನ್ನೊಬ್ಬ ಮಗ ಕಮಾಲಖಾನನು ಆಟಗಳನ್ನು ಕಲಿಸಿದ. ಮಹ್ಮದಖಾನನು ವಿದ್ವಾಂಸನಾಗಿದ್ದನಲ್ಲದೆ ಸ್ವತಃ ಕವಿಯೂ ಆಗಿದ್ದನು. ಆಗೀಗ ಕವಿಗಳ ಜೊತೆಗೆ ಬಾದಶಹ ಇಬ್ರಾಹಿಮನನ್ನೂ ಕರೆದುಕೊಳ್ಳುತ್ತಿದ್ದನು. ದಿಲಾವರಖಾನ ಕೂಡ ಸ್ವತಃ ತುಂಬ ಓದಿಕೊಂಡವನೂ, ಚಿಕಿತ್ಸಕ ಬುದ್ಧಿಯುಳ್ಳವನೂ ಆಗಿದ್ದನು. ತನ್ನ ಆಡಳಿತದ ಕಾಲದಲ್ಲಿ ಗುಜರಾತ ಲಾಹೋರಗಳಿಂದ ವಿದ್ವಾಂಸರನ್ನು ಕರೆಯಿಸಿ ಆಸ್ಥಾನದಲ್ಲಿಯೇ ಕುರಾನ ಷರೀಫದ ಚರ್ಚೆಯನ್ನು ಮಾಡುತ್ತಿದ್ದನು. ಕುರಾನದ ಟೀಕೆ 'ತಪಸಿರ ಕಾಹಿರ್' ಹಾಗೂ ಪೈಗಂಬರರ ವಾಕ್ಯಗಳ ಸಂಗ್ರಹ 'ಹದೀಸ್' ಮುಂತಾದವುಗಳ ಚರ್ಚೆ ನಡೆಯುತ್ತಿತ್ತು. ಇವೆಲ್ಲವುಗಳ ಪ್ರಭಾವ ಬಾಲಕ ಇಬ್ರಾಹಿಮನ ಮೇಲೆ ಆಗಿತ್ತು.

ದಿಲಾವರನ ಪಾಳೆಯದಿಂದ ಹೊರಬಂದ ದಿನವೇ ನಡೆದ ಒಂದು ಘಟನೆಯೂ ಇಬ್ರಾಹಿಮನ ಪ್ರೌಢತೆಯನ್ನು ಸೂಚಿಸುತ್ತದೆ. ಧಾರಾಶಿವದ ಕಾಳಗದ ಅನಂತರ ದಿಲಾವರನು ಇಬ್ರಾಹಿಮನೊಂದಿಗೆ ಶಾಹದುರ್ಗದಲ್ಲಿ ಬೀಡು ಬಿಟ್ಟಿದ್ದನಷ್ಟೆ. ಶಾಹದುರ್ಗದ ಮುಸಲ್ಮಾನರು ಸುನ್ನಿ ಪಂಥದವರಾಗಿದ್ದರು. ದಿಲಾವರಖಾನನೂ ಸುನ್ನೀ ಪಂಥದವನಾದ್ದರಿಂದ ಇಬ್ರಾಹಿಮನು ದಿಲಾವರನ ಪಾಳೆಯದಲ್ಲಿ ಇರುವವರೆಗೆ ಯಾವ ಬದಲಾವಣೆಯೂ ಆಗಿರಲಿಲ್ಲ. ಆತನು ದಿಲಾವರನ ಪಾಳೆಯದಿಂದ ಹೊರಬಂದು ಐನುಲ್‌ಮುಲ್ಕನ ಪಾಳೆಯವನ್ನು ಸೇರಿದ ದಿನ ಊರ ತುಂಬ ಷಿಯಾ ಪಂಥದ ಪ್ರಾರ್ಥನೆಯ ದನಿ ಕೇಳಿಬಂದಿತಂತೆ. ಇಬ್ರಾಹಿಮನಿಗೋ ಆಶ್ಚರ್ಯ. ನಿನ್ನೆಯವರೆಗೂ ಇಲ್ಲದ್ದು ಇಂದು ಏಕೆ? ಎಂಬ ಸಮಸ್ಯೆ ಕರೆದು ಕೇಳಿದಾಗ ಗೊತ್ತಾದದ್ದು, ವಿಜಾಪುರದ ಬಾದಶಹರು ಬಹುತೇಕ ಷಿಯಾ ಪಂಥದವರು. ಹಿಂದಿನ ಬಾದಶಹ ಮೊದಲ ಅಲಿ ಆದಿಲಶಹ ಕೂಡ ಷಿಯಾ ಪಂಥದ ಅನುಯಾಯಿಯೇ ಆಗಿದ್ದನು. ಆದ್ದರಿಂದ ಇಬ್ರಾಹಿಮನು ಕೂಡ ಷಿಯಾ ಪಂಥದವನೇ ಆಗಿರಬೇಕೆಂದುಕೊಂಡು, ದಿಲಾವರನಿಂದ ಬಿಡುಗಡೆಯಾಗಿ ಸ್ವತಂತ್ರವಾಗಿ ಬಂದ ಮೇಲೆ ಬಾದಶಹನ ಪಂಥವನ್ನು ಅನುಸರಿಸದಿದ್ದರೆ ಶಿಕ್ಷೆಯಾದೀತೆಂಬ ಹೆದರಿಕೆಯಿಂದ ಷಿಯಾ ಪಂಥದ ಪ್ರಾರ್ಥನೆಯನ್ನು ಮಾಡಿದರಂತೆ! ಅದನ್ನು ಕೇಳಿದ ಇಬ್ರಾಹಿಮನು ಬಿದ್ದು ಬಿದ್ದು ನಕ್ಕನಂತೆ ಮತ್ತು ಅವರಿಗೆ ತಿಳಿಸಿ ಹೇಳಿದನಂತೆ 'ನೀವು ಯಾವ ಪಂಥದಲ್ಲಿ ನಂಬುಗೆಯನ್ನು ಇಟ್ಟಿದ್ದೀರೋ ಅದೇ ಪಂಥದಲ್ಲಿ ಮುಂದುವರಿಯಿರಿ. ಇನ್ನೊಬ್ಬರಿಗಾಗಿ ನಿಮ್ಮ ಶ್ರದ್ಧೆಯನ್ನು ಬದಲಿಸಬೇಡಿರಿ' ಎಂದು ತಿಳಿ ಹೇಳಿ ಕಳಿಸಿದನಲ್ಲದೆ. ಶಾಹದುರ್ಗದ ಮುಸಲ್ಮಾನರನ್ನು ಕೊನೆಯವರೆಗೂ ಆತ ಚೇಷ್ಟೆಯಿಂದ 'ರಾಜಕೀಯ ಷಿಯಾ'ಗಳು ಎಂದು ಕರೆಯುತ್ತಿದ್ದನಂತೆ.

೪.೨ ಬಾದಶಹ ಇಬ್ರಾಹಿಮ :

ಕ್ರಿ.ಶ. ೧೫೮೯ರಲ್ಲಿ ಅಹ್ಮದನಗರದ ನಿಜಾಮಶಾಹನ ನಿಮಿತ್ತದಲ್ಲಿ ನಡೆದ ಧಾರಾಶಿವದ ಕಾಳಗದಲ್ಲಿ ವಿಜಾಪುರ ಸೈನಿಕರು ಸೋತದ್ದು, ಅಂದು ದಿಲಾವರಖಾನನ ಪಾಳೆಯದಿಂದ ಹೊರಬಿದ್ದ ಇಬ್ರಾಹಿಮ ಆದಿಲಶಹನು ಅಂದಿನಿಂದ ತಾನು ಸ್ವತಂತ್ರವಾಗಿಯೇ ರಾಜ್ಯಭಾರವನ್ನು ನಡೆಸಹತ್ತಿದನು. ಕ್ರಿ.ಶ. ೧೫೯೨ರಲ್ಲಿ ಅಹ್ಮದನಗರದ ಹೊಸ ರಾಜ ಬುರ್ಹಾನ ನಿಜಾಮಶಾಹನು ದಿಲಾವರಖಾನನ ಚಿತಾವಣೆಯಿಂದ ಮತ್ತೆ ಆದಿಲಶಾಹಿ ಪ್ರದೇಶಗಳ ಮೇಲೆ ಆಕ್ರಮಣ ಮಾಡಿದನು. ಆತನು ತನ್ನ ಸೈನ್ಯದೊಂದಿಗೆ ಮಂಗಳವೇಢೆಯ ಹತ್ತಿರದವರೆಗೂ ಬಂದನು. ಆದರೆ ಇಬ್ರಾಹಿಮನು ಪ್ರತೀಕಾರದ ಯಾವ ಲಕ್ಷಣಗಳನ್ನೂ ತೋರಿಸಲಿಲ್ಲ. ಉಭಯ ರಾಜ್ಯಗಳ ಸರದಾರರಿಗೆ ಅದೊಂದು ಆಶ್ಚರ್ಯಕರ ಘಟನೆಯಾಗಿ ತೋರಿತು. ಆದರೆ ಒಂದು ಅವಕಾಶವನ್ನು

ಗಮನಿಸಿ ಇಬ್ರಾಹಿಮನು ದಿಲಾವರಖಾನನಿಗೆ ಮತ್ತೆ ತನ್ನ ಹತ್ತಿರ ಬರಲು ಆಮಂತ್ರಣವನ್ನು ಕಳಿಸಿದ. ಅದಕ್ಕೆ ದಿಲಾವರಖಾನನು ತನ್ನ ಪ್ರಾಣ ಹಾಗೂ ಆಸ್ತಿಯ ಸುರಕ್ಷತೆಯ ಆಶ್ವಾಸನೆಯನ್ನು ಕೇಳಿದ. ಇಬ್ರಾಹಿಮನು ಅದಕ್ಕೆ ದಿಲಾವರನ ಪ್ರಾಣ ಹಾಗೂ ವಿತ್ತಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳುವುದಾಗಿ ಆಶ್ವಾಸನವನ್ನು ನೀಡಿದನು. ಅನಂತರ ದಿಲಾವರಖಾನನು ವಿಜಾಪುರಕ್ಕೆ ಬಂದನು. ನಿಜಾಮಶಾಹಿ ಸೈನ್ಯ ನಿರಾಶಯಾಗಿ ತಿರುಗಿ ಹೋಗಬೇಕಾಯಿತು. ಆಸ್ಥಾನದಲ್ಲಿ ಬಂದ ದಿಲಾವರನನ್ನು ಸೆರೆಹಿಡಿದು ಅವನ ಕಣ್ಣುಗಳನ್ನು ಕಿತ್ತಲು ಇಬ್ರಾಹಿಮನು ಆಜ್ಞೆಮಾಡಿದ. ಅದನ್ನು ಕೇಳಿದ ದಿಲಾವರನು ಬಾದಶಹನಿಗೆ ಆತನ ಆಶ್ವಾಸನೆಯನ್ನು ನೆನಪಿಸುತ್ತ ಕೊಟ್ಟ ಮಾತನ್ನು ನಡಿಸದೆ ಇರುವುದು ಬಾದಶಹರಿಗೆ ಶೋಭಿಸುವಂಥದ್ದಲ್ಲವೆಂದನು. ಅದಕ್ಕೆ ಇಬ್ರಾಹಿಮನು 'ಕೊಟ್ಟ ಮಾತಿನಂತೆಯೇ ನಡೆಯಲಾಗಿದೆ, ಕಣ್ಣು ಕಿತ್ತುವುದರಿಂದ ನಿಮ್ಮ ಪ್ರಾಣಕ್ಕೆ ಅಪಾಯವಿಲ್ಲ. ನಿಮ್ಮ ವಿತ್ತವನ್ನು ಮುಟ್ಟುವುದಿಲ್ಲ' ಎಂದನಂತೆ, ಅದರಂತೆ ದಿಲಾವರನ ಕಣ್ಣು ಕೀಳಿಸಿ ಆತನನ್ನು ಸಾತಾರೆಯ ಜೈಲಿನಲ್ಲಿ ಬಂಧಿಸಿಟ್ಟನು. ಅಲ್ಲಿಯೇ ಅವನ ದೇಹಾಂತವಾಯಿತು.

ಇನ್ನೂ ಇಪ್ಪತ್ತು ವರುಷ ಮೀರದ ಯುವಕ ಇಬ್ರಾಹಿಮನ ಈ ತೀರ್ಪು ಬಹುಜನರಿಗೆ ಆಶ್ಚರ್ಯ ತಂದಿತು. ಈ ನಿರ್ಣಯದಿಂದ ಬಾದಶಹನ ಸ್ವಭಾವದ ಅರಿವೂ ಆಗುತ್ತದೆ. ರಾಜದ್ರೋಹಿಯೊಂದಿಗೆ ಆತ ಮುಂದೆ ಕೂಡ ಯಾವತ್ತೂ ರಾಜಿ ಮಾಡಿಕೊಳ್ಳಲಿಲ್ಲ. ಅಲ್ಲದೆ ತನ್ನ ಸೈನ್ಯವನ್ನು ಉಪಯೋಗಿಸದೆಯೇ ರಾಜ್ಯದ ವಿಪತ್ತನ್ನು ಕಳೆದಿದ್ದ. ಮುಂದಿನ ಆತನ ರಾಜ್ಯದಾಡಳಿತದ ಅವಧಿಯಲ್ಲಿ ಇಂಥ ಅನೇಕ ಘಟನೆಗಳು ಸಂಭವಿಸಿವೆ. ದೆಹಲಿಯ ಮೊಘಲರೊಂದಿಗೂ ಈ ತರದ ರಾಜಕೀಯ ದಾಳಗಳನ್ನು ಆತ ಆಡಿದ್ದನ್ನು ನೋಡಬಹುದು.

ಇಬ್ರಾಹಿಮನಿಗೆ ಒಬ್ಬ ತಮ್ಮನಿದ್ದನಷ್ಟೆ ಆತನ ಹೆಸರು ಇಸ್ಮಾಯಿಲ್. ಇಬ್ರಾಹಿಮನನ್ನು ಪಟ್ಟಕ್ಕೆ ಕುಳ್ಳಿರಿಸುವಾಗ ಸಂಪ್ರದಾಯದಂತೆ ಆತನನ್ನು ಬೆಳಗಾವಿಯ ಕೋಟೆಯಲ್ಲಿ ಬಂಧನದಲ್ಲಿ ಇಡಲಾಗಿತ್ತು. ಇಬ್ರಾಹಿಮನು ಸ್ವತಂತ್ರವಾಗಿ ರಾಜ್ಯಭಾರ ಮಾಡಲು ಪ್ರಾರಂಭಿಸಿದಾಗ ತಮ್ಮನಿಗೆ ಶುಭ ಸಂದೇಶವನ್ನು ಕಳಿಸಿದ್ದ. ತನ್ನ ಮನಸ್ಸು ತಮ್ಮನ ಹತ್ತಿರವೇ ಇದೆ. ರಾಜ್ಯ ಸುರಕ್ಷಿತೆಯ ದೃಷ್ಟಿಯಿಂದ ಆತನನ್ನು ಬಂಧನದಿಂದ ಮುಕ್ತ ಮಾಡುವುದು ಕಠಿಣವೆಂದು ಹೇಳುತ್ತ ಆತನ ಮಾಶಾಸನವನ್ನು ದ್ವಿಗುಣಗೊಳಿಸಿ ಒಂದು ಸಾವಿರ ಹೊನ್ನಿಗೆ ಏರಿಸಿದ್ದ. ಮತ್ತು ಬೆಳಗಾವಿಯ ಕೋಟೆಯಲ್ಲಿ ಅವನಿಗೆ ಅಡ್ಡಾಡಲು ಪೂರ್ತಿ ಸ್ವಾತಂತ್ರ್ಯವನ್ನು ಕೊಟ್ಟಿದ್ದ ಅದರಿಂದಾಗಿ ಇಸ್ಮಾಯಿಲನು ಕೂಡ ಕೆಲವು ಕಾಲ ಸಂತೋಷವಾಗಿಯೇ ಇದ್ದನು. ಮೂರು-ನಾಲ್ಕು ವರುಷಗಳ ಅಂತರದಲ್ಲಿ ಕ್ರಿ.ಶ. ೧೫೯೪ರಲ್ಲಿ ಇಸ್ಮಾಯಿಲನು ಒಮ್ಮಿಂದೊಮ್ಮೆಲೆ ಅಣ್ಣನಿಗೆ ತಿರುಗಿಬಿದ್ದನು.

ಅದನ್ನು ತಿಳಿಯುತ್ತಲೇ ಇಬ್ರಾಹಿಮನು ಮೊದಲು ಶಾಹನೂರ ಆಲಮ್ ಎಂಬ ಸಂತನೊಬ್ಬನನ್ನು ತಮ್ಮನಿಗೆ ತಿಳಿ ಹೇಳಲು ಕಳಿಸಿದ. ಇಸ್ಮಾಯಿಲನು ಸಂತನನ್ನು ಹಿಡಿದು ಸೆರೆಮನೆಗೆ ಅಟ್ಟಿ ತನ್ನ ವಿದ್ರೋಹ ಕಾರ್ಯವನ್ನು ಮುಂದುವರಿಸಿದ. ಅದಕ್ಕೆ ಬುರ್ಹಾನ ನಿಜಾಮಶಾಹನ ಬೆಂಬಲವೂ ಇತ್ತು. ಆತ ವಿಜಾಪುರದ ಮೇಲೆ ಆಕ್ರಮಣ ಮಾಡಲು ಸನ್ನದ್ಧನಾದ. ಇತ್ತ ರಾಜ್ಯದ ಮುಖ್ಯಮಂತ್ರಿ ಐನುಲ್‌ಮುಲ್ಕನನ್ನು ಇಸ್ಮಾಯಿಲನು ತನ್ನತ್ತ ಒಲಿಸಿಕೊಂಡಿದ್ದನು. ಅವನಿಂದಾಗಿಯೇ ಇಬ್ರಾಹಿಮನು ದಿಲಾವರನ ಪಾಳೆಯದಿಂದ ಮುಕ್ತನಾಗಿದ್ದನು. ಹೀಗಾಗಿ ಒಮ್ಮೆಲೇ ಐನುಲ್‌ಮುಲ್ಕನ ಮೇಲೆ ಸಂಶಯಪಡುವುದು ಇಬ್ರಾಹಿಮನಿಗೆ ಬಹು ಕಷ್ಟವಾಯಿತು. ಇಸ್ಮಾಯಿಲನನ್ನು ಕಾಣಲು ಹೋದ ಐನುಲ್‌ಮುಲ್ಕನನ್ನು ಬೆಳಗಾವಿಯಿಂದ ವಿಜಾಪುರಕ್ಕೆ ಕರೆಯಿಸಿದನು. ಇಬ್ರಾಹಿಮನು ಆತನನ್ನು ತುಂಬಿದ ಸಭೆಯಲ್ಲಿ ಅಭೂತಪೂರ್ವವಾದ ಸನ್ಮಾನವನ್ನು ಮಾಡಿದನು. ಆತನಿಗೆ ಭೋಜನಕೂಟ, ವಸ್ತ್ರಾಲಂಕಾರ ಎಲ್ಲವನ್ನು ಕೊಟ್ಟನು. ಅವನ ಉದ್ದೇಶ ಸ್ಪಷ್ಟವಾಗಿತ್ತು. ಐನುಲ್‌ಮುಲ್ಕನು ಒಂದು ವೇಳೆ ಇಸ್ಮಾಯಿಲನೊಂದಿಗೆ ಕೂಡಿ ರಾಜ್ಯಕ್ಕೆ ದ್ರೋಹ ಮಾಡಬೇಕೆಂದು ಮನಸ್ಸು ಮಾಡಿದ್ದರೂ ಅದರಿಂದ ದೂರಾಗಬೇಕೆಂಬುದೇ ಆತನ ಆಶಯವಾಗಿತ್ತು. ಆದರೆ ಸನ್ಮಾನವನ್ನು ಸ್ವೀಕರಿಸಿದ ಐನುಲ್‌ಮುಲ್ಕ ಮತ್ತೆ ಬೆಳಗಾವಿಗೆ ಹೋಗಿ ತನ್ನ ಕಾಯಕವನ್ನು ಪ್ರಾರಂಭಿಸಿದ. ಒಂದು ಹಂತದಲ್ಲಿ ಇಸ್ಮಾಯಿಲನ ರಾಜ್ಯಾರೋಹಣದ ದಿನವನ್ನೂ ಗೊತ್ತುಪಡಿಸಿ ಅಹ್ಮದನಗರದ ನಿಜಾಮನಿಗೂ ಆಮಂತ್ರಣವನ್ನು ಕಳಿಸಿದನು. ಇದನ್ನು ತಿಳಿದ ಇಬ್ರಾಹಿಮನು ಜೈಲಿನಲ್ಲಿದ್ದ ಹಮೀದಖಾನನನ್ನು ಬಿಡುಗಡೆ ಮಾಡಿ ದೊಡ್ಡ ಸೈನ್ಯದೊಂದಿಗೆ ಬೆಳಗಾವಿಯತ್ತ ಕಳಿಸಿದನು. ಹಮೀದಖಾನನು ಬೆಳಗಾವಿಯತ್ತ ಹೊರಡುವ ಮೊದಲೆ ಐನುಲ್‌ಮುಲ್ಕನಿಗೆ ಸಂದೇಶವನ್ನು ಕಳಿಸಿ ತಾನೂ ಅವರ ಮನುಷ್ಯನೇ ಎಂದೂ, ಇಷ್ಟು ದಿನ ಜೈಲಿನಲ್ಲಿದ್ದ ತನ್ನನ್ನು ಬಿಡುಗಡೆ ಮಾಡಿ ನಿಮ್ಮ ವಿರುದ್ಧ ಹೋಗು ಎಂದು ಕಳಿಸಿದ ಬಾದಶಹನ ಆಣತಿಯನ್ನು ಅನಿವಾರ್ಯವಾಗಿ ಒಪ್ಪಬೇಕಾಗಿದೆ. ಪಟ್ಟಾಭೀಷೇಕವನ್ನು ನಾನು ಬರುವವರೆಗೆ ತಡೆಯಿರಿ ಎಂದು ಸಂದೇಶವನ್ನು ಕಳಿಸಿದ್ದ. ಅದನ್ನು ನಂಬಿದ ಐನುಲ್‌ಮುಲ್ಕ ಹಾಗೂ ಅವನ ಸೈನ್ಯ ನಿಷ್ಕಾಳಜಿಯಿಂದ ಇದ್ದು ಇಸ್ಮಾಯಿಲನ ಪಟ್ಟಾಭಿಷೇಕದ ವ್ಯವಸ್ಥೆಗೆ ತೊಡಗಿದ್ದರು. ಇದನ್ನು ತಿಳಿದ ಹಮೀದಖಾನನು ಬೆಳಗಾವಿಯ ಹತ್ತಿರ ಬರುತ್ತಿದ್ದಂತೆಯೇ ಒಮ್ಮೆಲೆ ಐನುಲ್‌ಮುಲ್ಕನ ಸೇನೆಯ ಮೇಲೆ ಆಕ್ರಮಣ ಮಾಡಿ ಶತೃ ಸೈನ್ಯವನ್ನು ಉಧ್ವಸ್ಥಗೊಳಿಸಿದ್ದಲ್ಲದೆ ಐನುಲ್‌ಮುಲ್ಕನ ಶಿರಚ್ಛೇದನ ಮಾಡಿ ಆತನ ರುಂಡವನ್ನು ಇಬ್ರಾಹಿಮನು ಮಹಾದ್ವಾರದ ಮಧ್ಯದಲ್ಲಿ ಕೆಲವು ದಿನ ತೂಗುಬಿಟ್ಟು ಅನಂತರ ತೋಪಿನ ಬಾಯಿಗೆ ಇಟ್ಟು ಹಾರಿಸಿದ್ದ. ಇಸ್ಮಾಯಿಲನ ಕಣ್ಣು ಕೀಳಿಸಿ ಸೆರೆಮನೆಯಲ್ಲಿಟ್ಟನು.

ರಾಜದ್ರೋಹಿಗಳಿಗೆ ದೊರೆಯುವ ಸನ್ಮಾನದ ಪರಿಯನ್ನು ಮತ್ತೊಮ್ಮೆ ರಾಜ್ಯದ ಜನರಿಗೆ ಮನವರಿಕೆ ಮಾಡಿಕೊಟ್ಟನು.

೪.೩ ಇಬ್ರಾಹಿಮ ಹಾಗೂ ನಿಜಾಮಶಾಹಿ ಸಂಬಂಧ :

ಉತ್ತರ ಭಾತರದಲ್ಲಿ ಮೊಘಲರ ಸತ್ತೆ ಸಂಪೂರ್ಣವಾದ ಅನಂತರ ಅಕಬರನ ಕಾಲದಿಂದಲೇ ಅವರ ದೃಷ್ಟಿ ದಕ್ಷಿಣ ಭಾರತದ ಮೇಲೆ ಬಿತ್ತು. ಒಂದು ಹಂತದಲ್ಲಿ ಅಕಬರ ಬಾದಶಹನು ಇಡೀ ಭಾರತದ ಬಾದಶಹನಾಗಬೇಕೆಂಬ ಕನಸು ಕಾಣಹತ್ತಿದ್ದ. ತನ್ನ ಕನಸನ್ನು ನನಸಾಗಿಸುವ ಪ್ರಯತ್ನದಲ್ಲಿಯೇ ಆತನು ಮೊದಲು ಕ್ರಿ.ಶ. ೧೫೭೪ರ ಹೊತ್ತಿಗೆಯೆ ಅಚಲಪುರದ ಇಮಾದಶಾಹಿಯನ್ನು, ಹಾಗೂ ಖಾನದೇಶದ ಫಾರೂಕಿ ರಾಜ್ಯವನ್ನು ನಷ್ಟಗೊಳಿಸಿದ್ದನು. ಮುಂದಿನ ಆತನ ದೃಷ್ಟಿ ಅಹ್ಮದನಗರವಾಗಿತ್ತು. ಕ್ರಿ.ಶ. ೧೫೮೫ರಿಂದಲೇ ಅಹ್ಮದನಗರವನ್ನು ಗೆಲ್ಲುವ ಪ್ರಯತ್ನವನ್ನು ಅಕಬರನು ಮಾಡತೊಡಗಿದ್ದ. ಕಾರಣಾಂತರಗಳಿಂದ ಅದಕ್ಕೊಂದು ಸ್ಪಷ್ಟರೂಪ ಬರಲು ಮತ್ತೆ ಹತ್ತು ಹನ್ನೆರಡು ವರುಷಗಳೇ ಹಿಡಿದವು. ಕ್ರಿ.ಶ. ೧೫೯೪ರಲ್ಲಿ ಯುವರಾಜ ಮುರಾದ ಹಾಗೂ ಅಬ್ದುಲ್ರಹೀಮ ಖಾನೆ-ಖಾನನರೊಂದಿಗೆ ದೊಡ್ಡ ಸೈನ್ಯವನ್ನು ಕಳಿಸಿದನು. ಅವರಿಬ್ಬರೂ ಬೇರೆ-ಬೇರೆ ದಾರಿಗಳಿಂದ ಅಹ್ಮದನಗರವನ್ನು ತಲುಪಲು ಹೊರಟಿದ್ದರು. ಮುರಾದನ ಸೈನ್ಯವು ಅಹ್ಮದನಗರದ ಹತ್ತಿರವೇ ಬಂದಿತು. ಈ ಸಮಯದಲ್ಲಿ ವಿಜಾಪುರದ ಸೊಸೆ, ಅಹ್ಮದನಗರದ ಮಗಳು ಚಾಂದಬೀಬಿಯು ನಿಜಾಮಶಾಹಿ ರಾಜ್ಯವ್ಯವಹಾರದಲ್ಲಿ ಕೈ ಹಾಕಿ ತನ್ನ ಪ್ರಭಾವವನ್ನು ಬೀರಿದ್ದಳು. ಮೊಘಲರ ಅತಿಕ್ರಮಣದಿಂದ ಉಳಿದುಕೊಳ್ಳುವ ಎಲ್ಲ ಉಪಾಯಗಳನ್ನು ಮಾಡಿದ್ದಳು. ಇಬ್ರಾಹಿಮ ಆದಿಲಶಹನಿಗೆ ಈ ಸಮಯದಲ್ಲಿ ತಕ್ಷಣದ ಸಹಾಯ ನೀಡಲು ವಿನಂತಿಸಿಕೊಂಡಿದ್ದಳು. ಇಬ್ರಾಹಿಮನು ತನ್ನ ವಿಶೇಷ ಸೈನ್ಯಾಧಿಕಾರಿ ಸುಹೇಲಖಾನನ ನೇತೃತ್ವದಲ್ಲ ೨೫ ಸಾವಿರ ಕುದುರೆ ಸವಾರರನ್ನು ನಳದುರ್ಗದ ಮುಖಾಂತರವಾಗಿ ನಿಜಾಮಶಾಹಿಗೆ ಸಹಾಯ ಮಾಡಲು ಕಳಿಸಿದನು. ಗೋವಳಕೊಂಡದಿಂದಲೂ ಸಹಾಯ ಬಂದಿತ್ತು. ಈ ಸಮಯದಲ್ಲಿಯೇ ಚಾಂದಬೀಬಿಯು ಮೊಘಲರನ್ನು ಎದುರಿಸಿ ಅವರನ್ನು ಸೋಲಿಸಿದ್ದು. ಅಂತೆಯೇ ಅಕಬರ ಕೂಡ ಚಾಂದಬೀಬಿಯನ್ನು 'ಚಾಂದಸುಲ್ತಾನಾ' ಎಂದು ಕರೆದನು. ಈ ಯುದ್ಧದಲ್ಲಿ ಮೊಘಲರ ಸೇನೆ ಸೋಲನ್ನು ಅನುಭವಿಸಿ ಚಾಂದಬೀಬಿ ಹಾಗೂ ಮುರಾದನ ಮಧ್ಯ ಒಪ್ಪಂದವಾಯಿತು.

ನಿಜಾಮಶಾಹಿಯ ಈ ಖುಷಿ ಬಹಳ ದಿನ ಉಳಿಯಲಿಲ್ಲ. ಅಕಬರನು ತನ್ನ ಮಗ ಯುವರಾಜ ಮುರಾದ ಹಾಗೂ ಖಾನೆ-ಖಾನನ ಅವರನ್ನು ಹಿಂದಕ್ಕೆ ಕರೆಯಿಸಿಕೊಂಡನು. ದಕ್ಷಿಣದ ಸುಬೇದಾರಿಯನ್ನು ತನ್ನ ಇನ್ನೊಬ್ಬ ಮಗ ದಾನಿಯಲನಿಗೆ ವಹಿಸಿದನು. ಅಬುಲ್ ಫಜಲ್‌ನ ನೇತೃತ್ವದಲ್ಲಿ ಸೈನ್ಯವನ್ನು ಕಳಿಸಿದನು. ಚಾಂದಬೀಬಿ

ಈ ಸಲವೂ ತುಂಬ ಚಾಣಾಕ್ಷತೆಯಿಂದ ಕೋಟೆಯನ್ನು ಸಂರಕ್ಷಿಸಲು ಸನ್ನದ್ಧಳಾಗುತ್ತಿದ್ದಳು. ಒಂದು ಹಂತದಲ್ಲಿ ತನ್ನ ಕೈಕೆಳಗಾಗುವುದನ್ನು ಊಹಿಸಿದ ಚಾಂದಬೀಬಿ ದಾನಿಯಲ್‌ನೊಂದಿಗೆ ಒಪ್ಪಂದಕ್ಕೆ ಮುಂದಾದಳು. ಇದನ್ನು ಸಹಿಸದ ಚಾಂದಿಬೀಬಿಯ ಸ್ಥಳೀಯ ವಿರೋಧಿಗಳು ಕ್ರಿ.ಶ. ೧೬೦೦ರ ಜೂನ ತಿಂಗಳಲ್ಲಿ ಚಾಂದಬೀಬಿಯನ್ನು ಕೊಂದು ಮೊಘಲರನ್ನು ಎದುರಿಸಹತ್ತಿದರು. ಆದರೆ ಮುಂದೆ ಒಂದೇ ಒಂದು ತಿಂಗಳಲ್ಲಿ ಅಹ್ಮದನಗರದ ಕೋಟೆ ಮೊಘಲರ ವಶವಾಯಿತು. ಹೀಗೆ ಅಹ್ಮದನಗರದ ಪತನ ಆದಿಲಶಾಹಿಗಳನ್ನು ಚಿಂತಿಸಲು ಕಾರಣವಾಯಿತು. ಯಾಕೆಂದರೆ ಮೊಘಲರ ಮುಂದಿನ ಹೆಜ್ಜೆ ಆದಿಲಶಾಹಿಗಳೇ ಆಗಿದ್ದರು. ಅಂತೆಯೇ ಇಬ್ರಾಹಿಮನು ದಕ್ಷಿಣದ ಹಿಂದು ರಾಜರೊಂದಿಗೆ ತನ್ನ ಸಂಬಂಧವನ್ನು ಸುಧಾರಿಸಿಕೊಳ್ಳಲು ಚಂದ್ರಗಿರಿಗೆ ವಕೀಲನನ್ನೂ ಕಳಿಸಿಕೊಟ್ಟಿದ್ದನು. ಇದೇ ದೃಷ್ಟಿಯಿಂದ ಅಹ್ಮದನಗರದ ಪತನಾನಂತರ ಬೆಳಕಿಗೆ ಬಂದ ಮಲಿಕ ಅಂಬರನಿಗೂ ಸಹಾಯ ನೀಡಿದ್ದನು.

ಇಬ್ರಾಹಿಮನು ಮೊಘಲರನ್ನು ನೇರವಾಗಿ ಇದಿರು ಹಾಕಿಕೊಳ್ಳಲು ಸಿದ್ಧನಿರಲಿಲ್ಲ. ಅಂತೆಯೇ ಮೊಘಲರು ಎರಡನೆಯ ಸಲ ಅಹ್ಮದನಗರ ಹಾಗೂ ಚಾಂದಬೀಬಿಯ ಮೇಲೆ ಆಕ್ರಮಣ ನಡೆಸಿದಾಗ ಇಬ್ರಾಹಿಮನು ಅವರಿಗೆ ಸಹಾಯ ನೀಡಿದ ಉಲ್ಲೇಖಗಳು ದೊರೆಯುವುದಿಲ್ಲ. ತಟಸ್ಥನಾಗಿ ಉಳಿದನಲ್ಲದೆ ಸಂದರ್ಭ ನೋಡಿಕೊಂಡು ಇಬ್ರಾಹಿಮನು ಅಕಬರನಿಗೆ ಪತ್ರಗಳನ್ನು ಬರೆದಿದ್ದಾನೆ ಹಾಗೂ ಅವುಗಳಲ್ಲಿ ಮೊದಲಿಗೆ ತನ್ನ ನಿಷ್ಠೆಯನ್ನು ತೋರಿಸಿದ್ದಾನೆ. ಅದನ್ನು ನಂಬಿದ ಅಕಬರನ ತನ್ನ ವಿಶ್ವಾಸಪಾತ್ರನಾದ ಸರದಾರ ಮೀರ ಜಮಾಲುದ್ದೀನ ಹುಸೇನನನ್ನು ಸ್ನೇಹವರ್ಧನೆಗಾಗಿ ವಿಜಾಪುರಕ್ಕೆ ಕಳಿಸಿಕೊಟ್ಟಿದ್ದನು. ಆತನು ವಿಜಾಪುರದ ರಾಜಕೀಯ ಪರಿಸ್ಥಿತಿಯನ್ನು ಅವಲೋಕಿಸಬೇಕು. ಹಾಗೂ ಆದಿಲಶಾಹಿಗಳು ಮೊಘಲಸಾಮ್ರಾಟನ ಅಧಿಪತ್ಯವನ್ನು ಒಪ್ಪುವಂತೆ ಮಾಡಬೇಕು. ಮತ್ತು ಈ ನಿಮಿತ್ತ ಇಬ್ರಾಹಿಮನ ಮಗಳನ್ನು ದಾನಿಯಲ್‌ನಿಗೆ ಕೊಟ್ಟು ಮದುವೆ ಮಾಡಬೇಕು. ಈ ಸಂದೇಶಗಳನ್ನು ಹೊತ್ತು ತಂದ ಮೀರ ಜಮಾಲುದ್ದೀನ ಹುಸೇನನು ವಿಜಾಪುರಕ್ಕೆ ಬಂದೊಡನೆ ಅಲ್ಲಿಯ ವೈಭವವನ್ನು ನೋಡಿ ಲುಬ್ಧನಾದನು. ಅದಕ್ಕೆ ಸರಿಯಾಗಿ ಇಬ್ರಾಹಿಮನು ಎಲ್ಲ ಕರಾರುಗಳಿಗೂ ಒಪ್ಪಿದಂತೆ ಮಾಡಿ ಮೀರಹುಸೇನನನ್ನು ತುಂಬ ಖುಷಿಯಲ್ಲಿಟ್ಟನು. ಆತನಿಗೆ ಮಾಶಾಸನ ನೀಡಿ ಇರಲು ಪ್ರಶಸ್ತವಾದ ಮನೆಯನ್ನು ಕೊಟ್ಟನು. ಆಗೀಗ ಊಟೋಪಚಾರ ಮುತ್ತು-ರತ್ನಗಳ ಕಾಣಿಕೆ ಹೀಗೆ ನಾಲ್ಕು ವರುಷಗಳ ಕಾಲ ಮೀರ ಹುಸೇನನು ವಿಜಾಪುರದಲ್ಲಿ ಹಾಯಾಗಿ ಉಳಿದುಬಿಟ್ಟನು. ಮಧ್ಯ ಮಧ್ಯ ಮೀರ ಹುಸೇನ ಇಬ್ರಾಹಿಮ ಅಕಬರನಿಗೆ ಬಣ್ಣ ಬಣ್ಣದ ಮಾತುಗಳ ಪತ್ರವನ್ನೂ ಬರೆಯುತ್ತಿದ್ದನು. ಇದು ಅಕಬರನಿಗೆ ತಿಳಿದ ಕೂಡಲೇ ಆತನು ಇನ್ನೊಬ್ಬ ರಾಜದೂತ ಅಸದಬೇಗನನ್ನು ಕಳಿಸಿ ತಕ್ಷಣ

ಮೀರಹುಸೇನನನ್ನು ಕರೆದು ತರಲು ಹೇಳಿದನಲ್ಲದೆ ಇಬ್ರಾಹಿಮನು ಒಪ್ಪಿದ ಕರಾರುಗಳನ್ನು ಕೂಡಲೇ ಪೂರೈಸಬೇಕೆಂದು ಅಪ್ಪಣೆ ಮಾಡಿದನು. ಅಸದಬೇಗನು ತನ್ನ ನೆನಪುಗಳಲ್ಲಿ ಬರೆದಿಟ್ಟಿರುವಂತೆ ಆತ ಬಂದು ಈ ಕಾರ್ಯಗಳನ್ನು ಪೂರೈಸಿದನು. ಇಬ್ರಾಹಿಮನು ತನ್ನ ಮಗಳನ್ನು ದಾನಿಯಲ್‌ನಿಗೆ ಕೊಟ್ಟು ಕ್ರಿ.ಶ. ೧೬೦೪ರಲ್ಲಿ ಗೋದಾವರೀ ತೀರದ ಪೈಠಣದಲ್ಲಿ ಅತ್ಯಂತ ವೈಭವದಿಂದ ಮದುವೆ ಮಾಡಿಕೊಟ್ಟನು. ಆದರೆ ದುರ್ದೈವ, ದುರ್ವ್ಯಸನಗಳಿಗೆ ತುತ್ತಾಗಿ ಆರೋಗ್ಯ ಕೆಡಿಸಿಕೊಂಡ ದಾನಿಯಲ್‌ನು ಕೆಲವೇ ವಾರಗಳಲ್ಲಿ ಸತ್ತನು.

ಇಬ್ರಾಹಿಮನು ತನ್ನ ರಾಜ್ಯದ ಸುರಕ್ಷತೆಗಾಗಿ ಮೊದಲು ಚಾಂದಬೀಬಿಗೆ ಸಹಾಯ ನೀಡಿದ. ಅದು ಯಶಸ್ವಿಯಾಗದಿದ್ದಾಗ ನೇರವಾಗಿ ಮೊಘಲರೊಂದಿಗೆ ಸ್ನೇಹದ ನಾಟಕವನ್ನು ಆಡಿದ. ಈ ಹೊತ್ತಿಗೆ ಅಹ್ಮದನಗರದ ಸೂತ್ರಗಳು ಮಲಿಕ ಅಂಬರನ ಕೈಯಲ್ಲಿ ದೊರೆತು ಆತ ತನ್ನ ಅಸ್ತಿತ್ವವನ್ನು ಮೊಘಲರಿಗೂ ತೋರಿಸಿದಾಗ ಇಬ್ರಾಹಿಮನು ಮಲಿಕ ಅಂಬರನಿಗೆ ಸಹಾಯ ನೀಡಿದ. ಅಕಬರ ಬಾದಶಹನು ಸತ್ತ ಮೇಲಂತೂ ಮುಂದಿನ ಹತ್ತು ಹನ್ನೆರಡು ವರುಷಗಳವರೆಗೆ ಇಬ್ರಾಹಿಮ ಆದಿಲಶಹ ಹಾಗೂ ಗೋವಳಕೊಂಡದ ಮಹ್ಮದ ಕುಲಿ ಕುತುಬಶಾಹ ಇಬ್ಬರೂ ಅಹೋರಾತ್ರಿ ಮಲಿಕ ಅಂಬರನಿಗೆ ಸಹಾಯ ನೀಡಿ ಮೊಘಲರು ಮುಂದೆ ಬರದಂತೆ ನೋಡಿಕೊಂಡಿದ್ದರು. ಅದರಿಂದಾಗಿ ಎರಡು ಸಲ ಮೊಘಲರು ಮಲಿಕ ಅಂಬರನ ಕೈಯಲ್ಲಿ ದಯನೀಯವಾದ ಸೋಲನ್ನು ಅನುಭವಿಸಿದ್ದರು. ಕ್ರಿ.ಶ. ೧೬೧೬ರಲ್ಲಿ ಮೊದಲ ಸಲ ಮಲಿಕ ಅಂಬರನು ಮೊಘಲರ ಕೈಯಲ್ಲಿ ಸೋತು ಹಿಂದೆ ಸರಿಯುತ್ತಿದ್ದಾಗ ಇಬ್ರಾಹಿಮ ಆದಿಲಶಹನು ತನ್ನ ಸಹಾಯ ಹಸ್ತವನ್ನು ಚಾಚಿ, ಅದಮಖಾನ, ಲಖೋಜಿ ಜಾಧವರಾವ್, ಉದಾರಾಮ ಬ್ರಾಹ್ಮಣ ಮೊದಲಾದವರನ್ನು ಮಲಿಕ ಅಂಬರನ ಸಹಾಯಕ್ಕೆ ಕಳಿಸಿ, ಸೋತ ಕೋಟೆಗಳನ್ನು ಮೊಘಲರಿಂದ ಮತ್ತೆ ಕಿತ್ತುಕೊಳ್ಳಲು ಯಶಸ್ವಿಯಾಗಿಸಿದನು. ಇದು ದಿಲ್ಲಿ ಬಾದಶಹ ಜಹಾಂಗೀರನಿಗೆ ಅಸಹನೀಯವಾಯಿತು. ಹೇಗಾದರೂ ಮಾಡಿ ಮಲಿಕ ಅಂಬರನನ್ನು ಮುಗಿಸಿಯೇ ಬಿಡಬೇಕೆಂದು ಯೋಚಿಸಿ, ತನ್ನ ಮಗ ಖುರ್ರಮನನ್ನು ಕ್ರಿ.ಶ. ೧೬೨೧ರಲ್ಲಿ ದಕ್ಷಿಣದ ಸುಬೇದಾರನನ್ನಾಗಿ ನಿಯುಕ್ತಗೊಳಿಸಿದನು. ಆತ ಮೊದಲು ಇಬ್ರಾಹಿಮ ಆದಿಲಶಹ ಹಾಗೂ ಕುತುಬಶಾಹರ ಹತ್ತಿರ ತನ್ನ ವಕೀಲರನ್ನು ಕಳಿಸಿ ಅವರು ಮೊಘಲರಿಗೆ ಸಹಾಯ ಮಾಡಬೇಕೆಂದು ಹಾಗೂ ಮೊಘಲ ಆಧಿಪತ್ಯವನ್ನು ಒಪ್ಪಬೇಕೆಂದು ಒತ್ತಾಯ ತಂದನು. ಇಬ್ರಾಹಿಮನೂ ಈ ಹೊತ್ತಿಗೆ ಒಪ್ಪಿಕೊಳ್ಳಬೇಕೆಂದು ತನ್ನ ದ್ವಂದ್ವ ನೀತಿ ಇನ್ನು ನಡೆಯುವುದಿಲ್ಲವೆಂದು ಅರಿತನೋ ಏನೋ ಮೊಗಲರ ಆಶ್ರಿತನಾಗಲು ಒಪ್ಪಿದನು. ಗೋವಳಕೊಂಡದ ಕುತುಬ ಶಾಹನೂ ಇಬ್ರಾಹಿಮನ ಹೆಜ್ಜೆ ತುಳಿದನು.

ಈಗ ಮಲಿಕ ಅಂಬರನ ಸ್ಥಿತಿ ದಯನೀಯವಾಯಿತು. ಈವರೆಗೆ ಆದಿಲಶಾಹಿ ಹಾಗೂ ಕುತುಬಶಾಹಿಗಳ ಬಲದಿಂದ ಮೊಘಲರನ್ನು ಎದುರಿಸಿದ್ದ. ಈಗ ಆತ ಏಕಾಂಗಿಯಾದ. ಇಂಥ ಪರಿಸ್ಥಿತಿಯಲ್ಲಿ ಇಬ್ರಾಹಿಮ ಆದಿಲಶಾಹನು ಮಲಿಕ ಅಂಬರನಿಗೆ ಸಂದೇಶ ಕಳಿಸಿ ಈ ಸೂಕ್ಷ್ಮ ಪರಿಸ್ಥಿತಿಯಲ್ಲಿ ಆತನೂ ಮೊಘಲರ ಒಡೆತನವನ್ನು ಒಪ್ಪಿಕೊಳ್ಳಲು ಹೇಳಿದನು. ಆದರೆ ಅದಕ್ಕೆ ಮಲಿಕ ಅಂಬರ ಸಿದ್ಧನಾಗಲಿಲ್ಲ. ಈ ಮಧ್ಯ ಜಹಾಂಗೀರ ವಿರುದ್ಧ ಆತನ ಮಗ ಖುರ್‍ರಮ್ ಶಾಹಜಹಾನನು ಸಿಡಿದು ನಿಂತು ಯಾರ ವಿರುದ್ಧ ಜೀವದ ಪಣ ತೊಟ್ಟು ಯುದ್ಧ ಮಾಡಿದ್ದನೋ ಅದೇ ಮಲಿಕ ಅಂಬರನ ಆಶ್ರಯವನ್ನು ಯಾಚಿಸಿದ. ಮಲಿಕ ಅಂಬರ ಆತನನ್ನು ಹಚ್ಚಿಕೊಳ್ಳಲಿಲ್ಲ. ಅನಂತರ ಶಾಹಜಹಾನನು ಇಬ್ರಾಹಿಮ ಆದಿಲಶಹನ ಹತ್ತಿರ ತನ್ನ ವಕೀಲ ಅಫಜಲ್ ಖಾನನನ್ನು ಕಳಿಸಿ ಸಹಾಯ ಕೇಳಿದ. ಯುವರಾಜನಿಗೆ ಯಾವ ಸಹಾಯವನ್ನು ಮಾಡಲಿಲ್ಲ.

ಮಲಿಕ ಅಂಬರನ ಅಹಂಕಾರ ಹಾಗೂ ದುರ್ವತನೆಯಿಂದ ಇಬ್ರಾಹಿಮ ಆದಿಲಶಹನು ಆತನ ಕುರಿತಾದ ತನ್ನ ಒಲವನ್ನು ಕಳೆದುಕೊಂಡಿದ್ದನು. ಕೋಪವೂ ಬಂದಿತ್ತು. ಇದೇ ಸಮಯದಲ್ಲಿ ಜಹಾಂಗೀರನು ತನ್ನ ಇನ್ನೊಬ್ಬ ಮಗ ಪರ್ವಿಜನನ್ನು ದಕ್ಷಿಣದತ್ತ ದಾಳಿಗೆ ಕಳಿಸಿ ಮಲಿಕ ಅಂಬರನ ವಿರುದ್ಧ ಇಬ್ರಾಹಿಮ ಆದಿಲಶಹನಿಗೆ ಸಹಾಯ ನೀಡಲು ಕೋರಿದ. ಆದಿಲಶಹನು ತನ್ನ ಅನುಭವಿ ಸೇನಾಪತಿ ಮುಹಮ್ಮದ ಲಾರಿಯೊಂದಿಗೆ ದೊಡ್ಡ ಸೈನ್ಯ ಹಾಗೂ ದ್ರವ್ಯವನ್ನು ಮೊಘಲರ ಸಹಾಯಾರ್ಥ ಕಳಿಸಿದ. ಇದನ್ನು ಕಂಡ ಮಲಿಕ ಅಂಬರನು ಇಬ್ರಾಹಿಮನಿಗೆ ಸ್ನೇಹಹಸ್ತವನ್ನು ಚಾಚಿ ಮಹ್ಮದಲ್ಯಾರಿಯನ್ನು ಹಿಂದಕ್ಕೆ ಕರೆಯಿಸಿಕೊಳ್ಳಲು ಹೇಳಿದ. ಆದರೆ ಇಬ್ರಾಹಿಮನು ಅದಕ್ಕೆ ಒಪ್ಪಲಿಲ್ಲ. ಮುಹ್ಮದಲ್ಯಾರಿಯ ಸೇನೆ ಮೊಘಲರ ಸಹಾಯಕ್ಕೆಂದು ಬರ್ಹಾನಪುರದವರೆಗೆ ಬಂದು ಮುಟ್ಟಿತ್ತು.

ಈಗ ಮಲಿಕ ಅಂಬರನು ಬಹಳ ಕಠಿಣ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಹೊಸದೊಂದು ದಾರಿಯನ್ನು ಹುಡುಕಿ ಮಲಿಕ ಅಂಬರನು ಮೊಘಲರನ್ನು ಎದುರಿಸದೆ ತನ್ನ ದೊಡ್ಡ ಸೈನ್ಯವನ್ನು ಗೋವಳಕೊಂಡದತ್ತ ತಿರುಗಿಸಿದನು. ಕುತುಬಶಾಹನಿಗೆ ತನ್ನ ಮುಂದಿನ ಯುದ್ಧದಲ್ಲಿ ಸಹಾಯ ಮಾಡಬೇಕು ಹಾಗೂ ಖಂಡನಿಯನ್ನು ಕೊಡಬೇಕೆಂದು ಒತ್ತಾಯಪಡಿಸಿ ಯಶಸ್ವಿಯಾದ. ಈವರೆಗೆ ಆದಿಲಶಾಹಿಯ ಹೆಜ್ಜೆಯನ್ನೆ ತುಳಿಯುತ್ತ ಬಂದಿದ್ದ ಕುತುಬಶಾಹನು ಮಲಿಕ ಅಂಬರನ ಈ ಯೋಜನೆಯಿಂದ ಬೇರೆ ಮಾರ್ಗ ಹಿಡಿಯಬೇಕಾಯಿತು.

ಕುತುಬಶಾಹಿಯೊಂದಿಗಿನ ಒಪ್ಪಂದದಿಂದ ಮಲಿಕ ಅಂಬರನ ಬಲ ಅಧಿಕವಾಯಿತು. ಹಿಂತಿರುಗುವಾಗ ಅನಿರೀಕ್ಷಿತವಾಗಿ ಆದಿಲಶಾಹಿ ಪ್ರದೇಶಗಳನ್ನು

ಆಕ್ರಮಿಸಿ ಆದಿಲಶಾಹಿ ಸೈನ್ಯವನ್ನು ಉಧ್ವಸ್ತ ಮಾಡಿ ವಿಜಾಪುರದತ್ತ ಹೊರಳಿದ. ಬಂದ ಆಪತ್ತನ್ನು ಗಮನಿಸಿ ಎದುರಿಸುವ ಸಿದ್ಧತೆಯನ್ನು ಮಾಡಿಕೊಳ್ಳುವ ಮೊದಲೆ ಮಲಿಕ ಅಂಬರನು ವಿಜಾಪುರದ ಸಮೀಪ ಬಂದಿದ್ದನು.

ಆದಿಲಶಾಹಿಯ ಸೈನ್ಯ ಮೊಘಲರ ಸಹಾಯಕ್ಕೆ ಹೋದದ್ದರಿಂದ ಇಬ್ರಾಹಿಮನು ಅಸಹಾಯಕನಾಗಿ ರಾಜಧಾನಿಯ ದ್ವಾರಗಳನ್ನು ಮುಚ್ಚಿಸಿ ಒಳಗೆಯೇ ಉಳಿದ. ಹಾಗೂ ಮೊಘಲ ಸೇನಾಪತಿ ಮೊಹಬ್ಬತ್ ಖಾನನಿಗೆ ಸಂದೇಶವನ್ನು ಕಳಿಸಿ ಪರಿಸ್ಥಿತಿಯನ್ನು ವಿವರಿಸಿದ ಮತ್ತು ತನ್ನ ಸೈನ್ಯದೊಂದಿಗೆ ಮೊಘಲ ಸೈನ್ಯವನ್ನು ತನ್ನ ಸಹಾಯಕ್ಕೆ ಕಳಿಸಲು ಕೋರಿದ. ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಮಾಡಿಕೊಂಡು ಮೊಹಬ್ಬತ್‌ಖಾನನು ಮುಹಮ್ಮದ ಲ್ಯಾರಿಯನ್ನು ವಿಜಾಪುರಕ್ಕೆ ಹಿಂತಿರುಗಿ ಕಳಿಸಲು ಒಪ್ಪಿದನಲ್ಲದೆ ತನ್ನ ಸೈನ್ಯದ ಕೆಲವು ತುಕಡಿಗಳನ್ನು ಲಷ್ಕರಖಾನನೊಂದಿಗೆ ಮಲಿಕ ಅಂಬರನನ್ನು ಎದುರಿಸಲು ಕಳಿಸಿದ. ಮೊಘಲರ ಹಾಗೂ ಆದಿಲಶಾಹಿ ಸೈನ್ಯ ಬರುವುದನ್ನು ಗಮನಿಸಿದ ಮಲಿಕ ಅಂಬರನು ವಿಜಾಪುರದಿಂದ ಕಾಲುಕಿತ್ತಿ ಉತ್ತರದಿಕ್ಕಿಗೆ ರಹಸ್ಯವಾಗಿ ಪ್ರಯಾಣ ಬೆಳೆಸಿದನು. ಕ್ರಿ.ಶ. ೧೬೨೪ರ ನವಂಬರ್ ತಿಂಗಳಿನ ಒಂದು ದಿನ ಅಹ್ಮದನಗರದ ಭಾತವಡಿಯ ಹತ್ತಿರ ಬೀಡು ಬಿಟ್ಟಿದ್ದ ಮೊಘಲ ಹಾಗೂ ಆದಿಲ್‌ಶಾಹಿ ಸೈನ್ಯದ ಮೇಲೆ ಮಲಿಕ ಅಂಬರನು ಅನಿರೀಕ್ಷಿತ ಅಷ್ಟೇ ರಭಸದ ದಾಳಿ ಮಾಡಿ ಉಭಯ ಸೈನ್ಯಗಳನ್ನೂ ಸೋಲಿಸಿದನು.

ಮಲಿಕ ಅಂಬರನು ಈ ಗೆಲುವಿನಿಂದ ಉಬ್ಬಿ ತಿರುಗಿ ವಿಜಾಪುರದತ್ತ ಪ್ರಯಾಣ ಬೆಳೆಸಿದನು. ದಾರಿಯಲ್ಲಿ ಸಿಕ್ಕ ವಿಜಾಪುರದ ಪ್ರದೇಶವನ್ನೆಲ್ಲ ಹಾಳು ಮಾಡುತ್ತ ವಿಜಾಪುರ ಹೊರವಲಯದವರೆಗೂ ಬಂದು ಹೊಸದಾಗಿ ಕಟ್ಟಿದ ಅಪಾರ ಜನವಸತಿಯ ನವರಸಪುರವನ್ನು ಧ್ವಂಸಮಾಡಿದನು. ಮತ್ತೆ ಸೊಲ್ಲಾಪುರದತ್ತ ಹೊರಳಿ ಆ ಕೋಟೆಯನ್ನು ವಶಪಡಿಸಿಕೊಂಡನು. ನಿಸ್ಸಹಾಯಕನಾದ ಇಬ್ರಾಹಿಮ ಆದಿಲಶಹನು ಸೈನ್ಯಬಲವಿಲ್ಲದೆ ಅರಮನೆಯಲ್ಲಿ ಕುಳಿತು ಇದನ್ನೆಲ್ಲ ಕಾಣುವ ಮೂಕ ಪ್ರೇಕ್ಷಕನಾದನು. ಮಲಿಕ ಅಂಬರನಿಗೆ ತಕ್ಕ ಶಾಸ್ತಿಯನ್ನು ಮಾಡಬೇಕು ಎಂದು ಯೋಜಿಸುತ್ತಿರುವಾಗಲೇ ದಿನಾಂಕ ೧೪-೫-೧೬೨೬ರಂದು ಮಲಿಕ ಅಂಬರನು ಸತ್ತ ಸುದ್ದಿ ಬಂದಿತು. ಮುಂದೆ ಒಂದು ವರುಷದಲ್ಲಿ ದಿನಾಂಕ ೧೨-೯-೧೯೨೭ರಂದು ಎರಡನೆಯ ಇಬ್ರಾಹಿಮ ಆದಿಲಶಹನೂ ತೀರಿಕೊಂಡನು. ತನ್ನ ಕಾಲದಲ್ಲಿಯೇ ಕಟ್ಟಿ ಪೂರ್ತಿಗೊಳಿಸಿದ ಇಬ್ರಾಹಿಮ ರೋಜಾದಲ್ಲಿ ಆತನನ್ನು ದಫನ ಮಾಡಲಾಯಿತು.

ಹೀಗೆ ಸುಮಾರು ೪೭ ವರುಷಗಳ ಕಾಲ ರಾಜ್ಯವಾಳಿದ ಎರಡನೆಯ ಇಬ್ರಾಹಿಮ ಆದಿಲಶಾಹನು ಮೊದಲಿನ ಹತ್ತು ವರುಷ ರಾಜಪ್ರತಿನಿಧಿಗಳ ಅಧೀನದಲ್ಲಿ ಕಳೆದನು. ಮುಂದಿನ ೩೭ ವರುಷಗಳ ಕಾಲ ಸ್ವತಂತ್ರವಾಗಿ ರಾಜ್ಯಭಾರ ಮಾಡಿ ತನ್ನ ರಾಜಕೀಯ

ನೈಪುಣ್ಯತೆಯಿಂದ ಆದಷ್ಟು ಯುದ್ಧಗಳೆಲ್ಲ ತನ್ನ ರಾಜ್ಯದ ಹೊರಗೆಯೇ ನಡೆಯುವಂತೆ ನೋಡಿಕೊಂಡಿದ್ದನು.

೩. ಇಬ್ರಾಹಿಮನ ಸಾಂಸ್ಕೃತಿಕ ವ್ಯಕ್ತಿತ್ವ :

ಮುಸಲ್ಮಾನ ಬಾದಶಹ ಇಬ್ರಾಹಿಮನ ವ್ಯಕ್ತಿತ್ವ ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಬೇರೆಯಾಗಿದ್ದುದನ್ನು ಇತಿಹಾಸದ ಪುಟಗಳು ಹೇಳುತ್ತವೆ. ಸಮಕಾಲೀನ ಇತಿಹಾಸಕಾರರಾದ ಫಿರಿಶ್ತಾ, ರಫೀಉದ್ದೀನ ಶಿರಾಜಿ ಅವರುಗಳು ಬರೆದ ಇತಿಹಾಸಗಳಲ್ಲಿ ರಾಜಕೀಯ ಚಿತ್ರಣಕ್ಕೆಯೇ ಪ್ರಾಧಾನ್ಯವಿದ್ದರೂ ಮಧ್ಯ ಮಧ್ಯದಲ್ಲಿ ಕೆಲವೊಂದು ಘಟನೆಗಳನ್ನು ನಿರೂಪಿಸುವಾಗ ಇಬ್ರಾಹಿಮನ ವ್ಯಕ್ತಿತ್ವದ ಚಿತ್ರಣ ದೊರಕುತ್ತದೆ. ಈ ವಿಷಯುದಲ್ಲಿ ವಿಶೇಷ ಉಪಯೋಗವಾಗುವುದು ಅಕಬರ ಬಾದಶಹನ ರಾಯಭಾರಿಯಾಗಿ ವಿಜಾಪುರಕ್ಕೆ ಬಂದ ಅಸದ ಬೇಗನು ಬರೆದು ಇಟ್ಟಿದ್ದ 'ವಕಾಯೆ ಅಸದಬೇಗ' ಎಂಬ ಪುಟ್ಟ ಗ್ರಂಥ. ಈ ಗ್ರಂಥದ ಸಾರಾಂಶವನ್ನು ಡಾ. ಪಿ.ಎಂ. ಜೋಶಿ ಎಂಬ ವಿದ್ವಾಂಸರು ಇಂಗ್ಲೀಷನಲ್ಲಿ ಕೊಟ್ಟಿದ್ದಾರೆ.[೩೧] ಇದಲ್ಲದೆ ಹಲವಾರು ಹಸ್ತಪ್ರತಿಗಳ ಆಧಾರದಿಂದ ನೂರೈವತ್ತು ವರುಷಗಳ ಹಿಂದೆ ಬರೆದ ಫಕೀರ ಮಹ್ಮದ ಝುಬೇರಿಯ 'ಬಸಾತಿನೆ ಸಲಾತೀನ' ಗ್ರಂಥದ ಉರ್ದು ಹಾಗೂ ದಖಣಿ ಭಾಷೆಯ ಭಾಷಾಂತರವೂ ಇದೆಯೆಂದು ಹೇಳಲಾಗುತ್ತದೆ. ನರಸಿಂಹ ವಿಠ್ಠಲ ಪಾರಸನೀಸ್ ಎಂಬವರು ಈ ಗ್ರಂಥದ ಮರಾಠಿ ಅನುವಾದವನ್ನು ಕ್ರಿ.ಶ.೧೮೫೦ರ ಸುಮಾರಿಗೆ ಮಾಡಿದ್ದಾರೆ. ಅದನ್ನು ಮಹಾರಾಷ್ಟ್ರ ಸರಕಾರವು ಕ್ರಿ. ಶ. ೧೯೬೮ರಲ್ಲಿ ಮುದ್ರಿಸಿ ಪ್ರಕಟಿಸಿದೆ. ಇಲ್ಲಿಯ ಇಬ್ರಾಹಿಮನ ಸಾಂಸ್ಕೃತಿಕ, ಸಾಹಿತ್ಯಿಕ ವ್ಯಕ್ತಿತ್ವದ ಚಿತ್ರಣವನ್ನು ಕೊಡಲು ವಿಶೇಷವಾಗಿ ಅಸದಬೇಗನ 'ನೆನಪುಗಳು' ಹಾಗೂ 'ಬಸಾತಿನೆ ಸಲಾತೀನ' ಗ್ರಂಥಗಳನ್ನು ಬಳಸಿಕೊಳ್ಳಲಾಗಿದೆ.

"ಇಬ್ರಾಹಿಮನು ಬಹಳ ಸುಂದರ ಸುಲಕ್ಷಣವಂತನಾಗಿದ್ದನು. ಉತ್ತಮ ಸ್ವಭಾವದವನಾಗಿದ್ದನು. ನ್ಯಾಯದಾನದಲ್ಲಿ ಎತ್ತಿದ ಕೈ. ಧೈರ್ಯವಂತ, ರೈತರ ಜನಸಾಮಾನ್ಯರ ಕಷ್ಟಗಳನ್ನು ಅರಿತುಕೊಳ್ಳುವವ. ವಿದ್ವಾಂಸರನ್ನು, ಗುಣವಂತರನ್ನು ಪುರಸ್ಕರಿಸುವ ಸಾಧು ಸಂತರನ್ನು, ಸುನ್ನಿ ಧರ್ಮದ ಸಾಧುಗಳನ್ನು ಸತ್ಕರಿಸುವವನು ಆಗಿದ್ದನು."[೩೨] ಆದ್ದರಿಂದಲೇ ಆತನ ಕಾಲದಲ್ಲಿ ಪ್ರಪಂಚದ ನಾಲ್ಕೂ ದಿಕ್ಕುಗಳಿಂದ ಜನರು ಬಂದು ಇಬ್ರಾಹಿಮನ ಕೃಪೆಗೆ ಪಾತ್ರರಾಗಲು ಬಯಸುತ್ತಿದ್ದರು. ಆತನ ಕಾಲದಲ್ಲಿ ಶ್ರೇಷ್ಠ ಸೂಫಿ ಸಂತರು, ಕದೀಮ ಪರಂಪರೆಯ ಹತ್ತೆಂಟು ಜನ ಗೃಹಸ್ಥರು ವಿಜಾಪುರಕ್ಕೆ ಬಂದು ಅಲ್ಲಿಯೇ ಸಮಾಧಿಯನ್ನು ಪಡೆದರು. ಅವರ ಸಮಾಧಿಗಳಿಗೆ ಇಂದಿಗೂ ವಿವಿಧ ಜಾತಿ ಮತ ಪಂಥದ ಜನರು ನಡೆದುಕೊಳ್ಳುತ್ತಾರೆ.

ಅನೇಕ ಕವಿಗಳೂ ಆತನ ಆಸ್ಥಾನದಲ್ಲಿದ್ದರು. ಅವರುಗಳಲ್ಲಿ ಮುಲ್ಲಾ ಜುಹೂರಿ ಅಂದಿನ ಕಾಲದ ಅಪರೂಪದ ಕವಿಯಾಗಿದ್ದನು. ಆ ದಿನಗಳಲ್ಲಿಯೇ ಆತನ ಕಾವ್ಯವನ್ನು ಹಿಂದುಸ್ಥಾನ, ಇರಾನ ಮತ್ತಿತರ ದೇಶಗಳಲ್ಲಿ ಓದುತ್ತಿದ್ದರಂತೆ. ಆತನ ಕಾವ್ಯದಲ್ಲಿ ಇಬ್ರಾಹಿಮನನ್ನು ಅತಿಶಯವಾಗಿ ವರ್ಣಿಸಲಾಗಿದೆ. ಅದು 'ಗುಲಜಾರೆ ಇಬ್ರಾಹಿಮ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಅದಕ್ಕಾಗಿ ರಾಜಭಾಂಡಾರದಿಂದ ಆತನಿಗೆ ನಾಲ್ಕು ಒಂಟೆಗಳ ಭಾರದ ಹೊನ್ನನ್ನು ಕಾಣಿಕೆಯಾಗಿ ಕೊಡಲಾಯಿತು.

ಇದರಿಂದಾಗಿ ಇಬ್ರಾಹಿಮನ ಆಸ್ಥಾನದಲ್ಲಿ ಅನೇಕ ಜನ ಆಶುಕವಿಗಳು ಬಂದು ಸೇರಿದರು. ಅದರಂತೆ ಉತ್ತಮ ಲೇಖಕರು ಬಂದರು. ಆತನ ಆಸ್ಥಾನದಲ್ಲಿ ಇದ್ದುಕೊಂಡೆ ಮಹ್ಮದ ಕಾಶೀಮ ಫಿರಿಶ್ತಾ ಎಂಬವನು ಲೋಕಪ್ರಸಿದ್ಧ ಇತಿಹಾಸ 'ಗುಲ್ಶನೇ ಇಬ್ರಾಹಿಮ' ಅಥವಾ 'ತಾರೀಖೆ ಫಿರಿಶ್ತಾ' ಎಂಬ ಉದ್ಗ್ರಂಥವನ್ನು ರಚಿಸಿದನು. ಆತನ ಕೋಶಾಧಿಕಾರಿ ಮೀರ ರಫೀಉದ್ದೀನ ಶಿರಾಜಿ ಎಂಬವನು ಕೂಡ ತನ್ನ ಅನುಭವಗಳನ್ನು ಬರೆದನು. ಇಬ್ರಾಹಿಮನಿಂದ ಅನೇಕ ಕಾಣಿಕೆಗಳನ್ನು ಪಡೆದರು.

ಇಬ್ರಾಹಿಮನು ಸಾಹಿತ್ಯ, ಸಂಗೀತ, ಕಲೆಗಳಿಗೆ ಆಶ್ರಯದಾತನಾಗಿದ್ದನು. ಆತನು ಸ್ವತಃ ಕವಿಯಾಗಿದ್ದ. ಸಂಗೀತಗಾರನಾಗಿದ್ದ, ಚಿತ್ರಕಲಾವಿದನೂ ಆಗಿದ್ದನು.

ಭಾರತೀಯ ಸಾಹಿತ್ಯದಲ್ಲಿ ಒಂಬತ್ತು ರಸಗಳಿಗೆ ಮಹತ್ವವಿದೆ ಅವುಗಳನ್ನು 'ನವರಸ' ಗಳೆಂದೂ ಕರೆಯಲಾಗುತ್ತದೆ. ಈ ನವರಸ' ಶಬ್ದ ಇಬ್ರಾಹಿಮ ಆದಿಲಶಹನನ್ನು ಹುಚ್ಚು ಹಿಡಿಸಿತ್ತು. ಅಸದ ಬೇಗನು ತನ್ನ ನೆನಪುಗಳಲ್ಲಿ ಹೇಳುವಂತೆ ತನ್ನ ರಾಯಭಾರವನ್ನು ಮುಗಿಸಿ ದೆಹಲಿಗೆ ಹಿಂತಿರುಗುವಾಗ ಇಬ್ರಾಹಿಮನು ಅಕಬರ ಬಾದಶಹನಿಗೆ ಕೊಡಲು ಕೆಲವು ವಸ್ತುಗಳನ್ನು ಕೊಟ್ಟನಂತೆ ಅವುಗಳ ವಿವರವನ್ನು ಈ ರೀತಿ ಹೇಳುತ್ತಾನೆ.

೯ ಖಣಗಳು, ೯ ಟೆಂಗಿನ ಕಾಯಿಗಳು, ಒಂದು ನವರಸ ಹೊನ್ನು ಇದು ೯ ಸಾಧಾರಣ ಹೊನ್ನಿಗೆ ಸಮನಾದದ್ದು. ಜೊತೆಗೆ ೯ ಸಾಧಾರಣ ಹೊನ್ನುಗಳನ್ನು ಮತ್ತು ೯ ಲ್ಯಾರಿ(ಇನ್ನೊಂದು ನಾಣ್ಯದ ಹೆಸರು)ಗಳನ್ನು ಅಲ್ಲದೆ 'ನೌ ಇಬ್ರಾಹಿಮಿ' ಎಂಬ ಒಂದು ಸಿಕ್ಕಾವನ್ನೂ ಕಳಿಸಿದ್ದನಂತೆ ಖಣ ಮತ್ತು ಟೆಂಗಿನಕಾಯಿಗಳು ಹಿಂದು ಧಾರ್ಮಿಕ ಸಂಸ್ಕಾರದ ವಸ್ತುಗಳೇ ಆಗಿದ್ದುವಷ್ಟೆ, 'ನೌರಸಸಿಕ್ಕಾ'ದ ಮೇಲೆ ಪರ್ಶಿಯನ್ ಲಿಪಿಯಲ್ಲಿ 'ನೌರಸ ಮುಷರ್ ಆದಿಲ್‌ಶಾಹಿ ಜಗದ್ಗುರು ದಾದಾ ಇಲಾಹೀ" ಎಂದು ಬರೆಯಲಾಗಿತ್ತು. ಜಗದ್ಗುರು ಎಂಬ ಉಪಾಧಿಯೂ ಭಾರತೀಯ ಮೂಲದ್ದು. 'ದಾದ್‌ಇಲಾಹಿ' ಎಂದರೆ ಈಶ್ವರದತ್ತ ಎಂಬುದೆ ಆಗಿದೆ.

ಇಬ್ರಾಹಿಮನಿಗೆ 'ಜಗದ್ಗುರು' ಎಂಬ ಬಿರುದನ್ನು ಯಾರು ಕೊಟ್ಟರು ಎಂಬುದನ್ನು ನಿಶ್ಚಿತವಾಗಿ ಹೇಳುವ ಉಲ್ಲೇಖಗಳು ದೊರೆಯುವುದಿಲ್ಲ. ಆದರೆ ಅವನನ್ನು ಜಗದ್ಗುರು ಎಂಬುದಾಗಿ ಅನೇಕ ಪರ್ಶಿಯನ್ ಭಾರತೀಯ ಕಾವ್ಯ ಇತಿಹಾಸಗಳಲ್ಲಿ ಉಲ್ಲೇಖಿಸಲಾಗಿದೆ. ಅಬ್ದುಲ್ಲಾ ದೇಹಲವಿ ಎಂಬ ಕವಿ ಬರೆದ 'ಇಬ್ರಾಹಿಮನಾಮಾ' ಎಂಬ ದಖಣಿ ಕಾವ್ಯದಲ್ಲಿ ಹಲವಾರು ಸಲ ಇಬ್ರಾಹಿಮನನ್ನು 'ಜಗದ್ಗುರು' ಎಂದು ಸಂಬೋಧಿಸಲಾಗಿದೆ.

"ದಖಿನ ದೇಸಮೆ ಶಹ ಜಗತ್‌ಗುರು ಹೈ ನಾವು
ವಿದ್ಯಾಪುರ ನಗರ ಉಸ ರಹನ ಹೈ ಜೋ ಠಾವೂ"

ಮುಲ್ಲಾ ನುಸ್ರತಿ ಎಂಬ ಇನ್ನೊಬ್ಬ ಕವಿ. ತನ್ನ 'ಗುಲ್ಶನೆ ಇಶ್ಕ' ಎಂಬ ಕಾವ್ಯದಲ್ಲಿ

'ತೇರೆ ಜದಕೊ ಆಲಮ್ ಜಗತ್‌ಗುರು ಕಹೆ
ಪಿದರ ಸೆ ಸೊ ತೇರೆ ಬಹಾದೂರ ಕಹೆ (ಅಧ್ಯಾಯ ೭ ನುಡಿ ೭)

ಆತನೇ ಬರೆದ 'ಅಲೀನಾಮಾ' ಕಾವ್ಯದಲ್ಲೂ ಜಗದ್ಗುರು ಉಪಾಧಿಯ ಉಲ್ಲೇಖವಿದೆ. ಸಮಕಾಲೀನ ಹಲವು ಕಾಗದ ಪತ್ರಗಳಲ್ಲಿಯೂ ಇಬ್ರಾಹಿಮನನ್ನು ಉಲ್ಲೇಖಿಸುವಾಗ ಜಗದ್ಗುರು ಎಂಬ ಉಪಾಧಿಯನ್ನು ಬಳಸಲಾಗಿದೆ. ಪುಣೆಯ ಭಾರತ ಇತಿಹಾಸ ಸಂಶೋಧಕ ಮಂಡಳದ ವಿದ್ವಾಂಸರು ಈ ಶತಮಾನದ ಆದಿಯಲ್ಲಿ ಇಂಥ ಹಲವಾರು ಮರಾಠಿ, ಪರ್ಶಿಯನ್ ಕಾಗದ ಪತ್ರಗಳ ಸಂಗ್ರಹವನ್ನು ಮಾಡಿದ್ದಾರೆ. ಅವುಗಳಲ್ಲಿಯ ಕೆಲವನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಖ್ಯಾತ ವಿದ್ವಾಂಸ ದಿವಂಗತ ರಾಜವಾಡೆ ಅವರು ಸಂಗ್ರಹಿಸಿದ ಕಾಗದ ಪತ್ರಗಳ ಸಂಕಲನಕ್ಕೆ 'ರಾಜವಾಡೆ ಖಂಡ' ಎಂದೇ ಹೆಸರು. ಹಲವಾರು ಸಂಪುಟಗಳು ಪ್ರಕಟವಾಗಿವೆ. ರಾಜವಾಡೆ-ಖಂಡ ೧೫ರಲ್ಲಿ ಬರುವ ಒಂದು ಉಲ್ಲೇಖ ಇಬ್ರಾಹಿಮನಿಗೆ ಜಗದ್ಗುರು ಎಂಬ ಉಪಾಧಿಯು ಜನಸಾಮಾನ್ಯರಲ್ಲೂ ಇದ್ದಿತು ಎಂಬುದನ್ನು ತೋರಿಸುತ್ತದಲ್ಲದೆ ಆತನ ನ್ಯಾಯ ಪದ್ಧತಿಯನ್ನು ವಿವರಿಸುತ್ತದೆ. ಅದು ಸಾತಾರಾ ಜಿಲ್ಲೆಯ ಮಾಸೂರ ಗ್ರಾಮದ ಗೌಡಕೀ(ಪಟೇಲ) ವಿಷಯಕ್ಕೆ ಸಂಬಂಧಿಸಿದ್ದಾಗಿದೆ. ಗೌಡಕೀಯ ವತನಕ್ಕಾಗಿ ಜಗಳವಾಗಿತ್ತು. ಅದರ ನಿರ್ಣಯಕ್ಕಾಗಿ ಜಗದ್ಗುರು ಇಬ್ರಾಹಿಮನು ವಾದಿ ಪ್ರತಿವಾದಿಗಳನ್ನು ಔರಂಗಾಬಾದ ಜಿಲ್ಲೆಯ ಪೈಠಣದಲ್ಲಿಯ ಧರ್ಮ ಪೀಠಕ್ಕೆ ಕಳಿಸಿದ್ದನಂತೆ "ಹುಜೂರ ಹೀ ಪಾತಶಹಾ ಜಗದ್ಗುರು ಯಾನಿ ಮನಾಸ ಅಣೂನ ಫರ್ಮಾನ್ ಕರೂನ್ ದಿಲ್ಹಾ" ಎಂದು ಹೇಳಲಾಗಿದೆ. ಹಿಂದು ಜನಗಳ ನ್ಯಾಯ ಹಿಂದು ಧರ್ಮಪೀಠದಲ್ಲಿಯೇ ಆಗಲಿ ಎಂಬುದು ಅವನ ಆಶಯವಾಗಿತ್ತು.

ಇಬ್ರಾಹಿಮನ ಸಂಗೀತದ ಹುಚ್ಚು. ಆತನು ರಚಿಸಿದ 'ಕಿತಾಬೆನೌರಸ' ಎಂಬ

ಕವನ ಸಂಕಲನದಲ್ಲಿ ಸ್ವಯಂ ವ್ಯಕ್ತವಾಗುತ್ತದೆ. ಈ ಕುರಿತು ಜುಬೇರಿಯು ತನ್ನ 'ಬಸಾತಿನೆ ಸಲಾತಿನ' ಎಂಬ ಗ್ರಂಥದಲ್ಲಿ ವಿಶದವಾಗಿ ಹೇಳುತ್ತಾನೆ.

"ಪ್ರತಿ ತಿಂಗಳ ಮೊದಲ ಗುರುವಾರದಂದು ರಾಜಧಾನಿಯಲ್ಲಿ 'ಈದ ಏ ನೌರಸ' ಹಬ್ಬವನ್ನು ಆಚರಿಸಲಾಗುತ್ತಿತ್ತು. ಅಂದು ನಗರದಾದ್ಯಂತ ಹಲವಾರು ರೀತಿಯ ಕಾರ್ಯಕ್ರಮಗಳು ನಡೆಯುತ್ತಿದ್ದವು. ಹಾಡುವವರು, ವಾದ್ಯ ನುಡಿಸುವವರು, ನೃತ್ಯದವರು ಮೊದಲಾದ ಆಸ್ಥಾನದ ವಿಶೇಷ ಸಮೂಹಕ್ಕೆ 'ಲಷ್ಕರೆ–ನವರಸ' ಎಂಬ ಹೆಸರಿತ್ತು. ಈ ಲಷ್ಕರೆ ನವರಸದಲ್ಲಿ ಕುಲೀನ ಹೆಣ್ಣು–ಗಂಡುಗಳೂ ಸೇರಲು ಬಯಸುತ್ತಿದ್ದರು. ದೇಶದಲ್ಲಿಯ ಪ್ರಖ್ಯಾತ ಗಾಯಕ – ಗಾಯಕಿಯರು, ವಾದ್ಯ ನಿಪುಣರು, ನೃತ್ಯಾಂಗನೆಯರು ಅಂದು ವಿಜಾಪುರಕ್ಕೆ ಬಂದು ಆಸ್ಥಾನದಲ್ಲಿ ಬಾದಶಹನ ಎದುರಿಗೆ ತಮ್ಮ ಕಲಾಪ್ರದರ್ಶನವನ್ನು ತೋರಿಸಲು ಇಚ್ಛೆ ಪಡುತ್ತಿದ್ದರು. ಈ ಸಂದರ್ಭದ ವರ್ಣನೆಯನ್ನು ಮಾಡುತ್ತ ಹುಬೇರಿಯು "ಬಾದಶಹನಿಗೆ ಬಾಲ್ಯದಿಂದಲೇ ಗಾಯನ ಕಲೆಯಲ್ಲಿ ಅಭ್ಯಾಸವಿತ್ತು. ಅದರಿಂದಾಗಿ ಈ ಕಲೆಯಲ್ಲಿ ಬಾದಶಹನಿಗೆ ನೈಪುಣ್ಯತೆ ಇತ್ತು. ಅಂದಿನ ಕಾಲದಲ್ಲಿಯ ಸಂಗೀತಗಾರರು ಬಾದಶಹನ ಎದುರಿಗೆ ತಮ್ಮ ಕಲೆಯನ್ನು ಪ್ರದರ್ಶಿಸಲು ಹೆದರುತ್ತಿದ್ದರು. ಅಷ್ಟು ಪ್ರಖ್ಯಾತಿ ಸಂಗೀತದ ವಿಷಯದಲ್ಲಿ ಬಾದಶಹನದಾಗಿತ್ತು." ಎಂದು ಹೇಳುತ್ತಾನೆ.

ಈ ವಿಷಯದಲ್ಲಿ ಸಮಕಾಲೀನ ರಾಜಕಾರಣಿ ರಾಯಭಾರಿ ಅಸದಬೇಗನೂ ತನ್ನ 'ವಾಕಾಯತೆ ಅಸದಬೇಗ'ದಲ್ಲಿ ಉಲ್ಲೇಖಿಸಿದ್ದಾನೆ. 'ಉಭಯ ಕುಶಲೋಪರಿ ಮಾತುಕತೆಗಳಾದ ಅನಂತರ ಬಾದಶಹನು ಅಕಬರ ಬಾದಶಹನ ಸಂಗೀತದಲ್ಲಿಯ ಆಸಕ್ತಿಯನ್ನು ವಿಚಾರಿಸಿದನು. ಆಸ್ಥಾನದಲ್ಲಿ ಹಾಡುವಾಗ ಗಾಯಕರು ಬಾದಶಹನ ಎದುರಿಗೆ ಕುಳಿತು ಹಾಡುತ್ತಾರೆಯೆ ಅಥವಾ ಎದ್ದು ನಿಂತು ಹಾಡುತ್ತಾರೆಯೆ? ಎಂದು ಪ್ರಶ್ನಿಸಿದನು. ಅದಕ್ಕೆ ಬಹುತೇಕ ಸಂದರ್ಭಗಳಲ್ಲಿ ನಿಂತೇ ಹಾಡುತ್ತಾರೆ ಎಂದು ಹೇಳಿದಾಗ ಇಬ್ರಾಹಿಮನು ಅದು ತಪ್ಪು ಸರಸ್ವತಿಗೆ ದ್ರೋಹ ಬಗೆದಂತೆ' ಎಂದನು.

ಗಾಯಕರಲ್ಲಿ ಮೂರು ವಿಧವಾಗಿದ್ದರು. ಮೊದಲನೆಯದು 'ಹುಜೂರಿ' ಎರಡನೆಯದು 'ದರಬಾರಿ' ಮೂರನೆಯದು 'ಶಹರೀ' ಎಂಬುದಾಗಿತ್ತು. ಹಗಲು ರಾತ್ರಿ ಬಾದಶಹನ ಜೊತೆಗಿದ್ದು, ಸಂಗೀತದಲ್ಲಿ ಪಾಂಡಿತ್ಯವನ್ನು ಪಡೆದವರು ಹುಜೂರಿಗಳು ಇವರ ನಂತರದವರು ಗಾಯನ ಕಲೆಯಲ್ಲಿ ನೈಪುಣ್ಯತೆಯನ್ನು ಪಡೆದವರು ಆದರೆ ಹುಜೂರಿಗಳ ಮಟ್ಟಕ್ಕೆ ಬರದ ಜನ ದರಬಾರಿಗಳು. ಅವರಿಗೆ ಆಸ್ಥಾನದಲ್ಲಿ ಹಾಗೂ ಅರಮನೆಯಲ್ಲಿ ಪರದೆಯ ಹೊರಗೆ ಹಾಡಲು ಅವಕಾಶವಿತ್ತು. ಇನ್ನುಳಿದ ಸಂಗೀತದಲ್ಲಿ ಆಸಕ್ತಿಯನ್ನು ಹೊಂದಿ ಸಂಗೀತವನ್ನು ಕಲಿಯುವವರು 'ಶಹರಿ'ಗಳಾಗಿದ್ದರು.

ಇಬ್ರಾಹಿಮ ಆದಿಲಶಾಹನು ಹುಜೂರಿಗಳ ಮುಂದೆ ಹಾಡುತ್ತಿದ್ದ. ಆಗ ಒಂದು ಹೊಸ ಜಗತ್ತು ನಿರ್ಮಾಣವಾಗುತ್ತಿತ್ತು. ಪ್ರತಿಸಲವೂ ಅಂತಃಕರಣ ಪೂರ್ವಕವಾಗಿ ಹಾಡುತ್ತಿರುವಾಗ ಹೊಸ ಆಲಾಪಗಳು ಹೊರಬರುತ್ತಿದ್ದುವು. ಅದನ್ನು ಹುಜೂರಿಗಳು ಕಲಿತು ದರಬಾರಿಗಳಿಗೆ ಕಲಿಸುತ್ತಿದ್ದರು. ದರಬಾರಿಗಳು ಅದನ್ನು ಕಲಿತು ಶಹರಿಗಳಿಗೆ ಕಲಿಸುತ್ತಿದ್ದರು. ಒಬ್ಬರಿಗೆ ಇನ್ನೊಬ್ಬರು ಶಿಷ್ಯ(ಶಾಗಿರ್ದ)ರಾಗಿರುತ್ತಿದ್ದರು. ಇವರೆಲ್ಲರಿಗೂ ಜಹಗೀರು ಇನಾಮುಗಳನ್ನು ಹಾಕಿ ಕೊಡಲಾಗುತ್ತಿತ್ತು. ಕೆಲವರಿಗೆ ಪ್ರತಿ ತಿಂಗಳೂ ವೇತನ ದೊರೆಯುತ್ತಿತ್ತು. ಈ ಜನರಿಗೆ ಇರಲು ವಸತಿಯ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿತ್ತು.

ಸಾಹಿತ್ಯ, ಸಂಗೀತ, ಕಲೆಗಳ ಕುರಿತು ಇಬ್ರಾಹಿಮನಿಗೆ ಆಸಕ್ತಿ ಇದ್ದಂತೆ ವಾಸ್ತುಶಿಲ್ಪದಲ್ಲಿಯೂ ಆತನಿಗೆ ಅಪರೂಪವಾದ ಆಸಕ್ತಿ ಇದ್ದಿತು. ತನ್ನ ಚಿರಶಯ್ಯೆಯ ತಾಣವನ್ನು ತಾನೆಯೇ ತನ್ನ ಜೀವಿತಕಾಲದಲ್ಲಿಯೇ ಕಟ್ಟಿಸಿದ 'ಇಬ್ರಾಹಿಮ ರೋಜಾ' ಕಟ್ಟಡ ಜಗತ್ತಿನಲ್ಲಿಯೇ ಒಂದು ಸುಂದರವಾದ ವಾಸ್ತು ರಚನೆ ಎಂದು ಕಲಾ ವಿಮರ್ಶಕರಿಂದ ಹೊಗಳಿಸಿಕೊಂಡಿದೆ. ಇನ್ನುಳಿದ ತಾಜಬಾವಡಿ, ಆನಂದ ಮಹಲ, ಸಾತಮಜಲಿ, ಜಲಮಹಲ ಇತ್ಯಾದಿ ಆತನೇ ಕಟ್ಟಿಸಿದ ವಾಸ್ತು ರಚನೆಗಳು ಇಂದಿಗೂ ಪ್ರವಾಸಿಗರನ್ನು ಆಕರ್ಷಿಸುತ್ತಿವೆ.

ಇಬ್ರಾಹಿಮನ ಭವ್ಯ ಕನಸು, ನವರಸಗಳ ಮೋಹ ಆತ ಕಟ್ಟಿಸಿದ ಹೊಸ ಪಟ್ಟಣ ನವರಸಪುರದ್ದಾಗಿತ್ತು. ವಿಜಾಪುರ ನಗರದ ಪಶ್ಚಿಮಕ್ಕೆ ಕ್ರಿ.ಶ.೧೫೯೯–೧೬೦೦ರಲ್ಲಿ ಹೊಸನಗರದ ಕಟ್ಟೋಣ ಪ್ರಾರಂಭವಾಯಿತು. ಸುಮಾರು ೨೦ ಸಾವಿರ ಜನ ಅಹೋರಾತ್ರಿ ದುಡಿದು ಸುಂದರನಗರವನ್ನು ಕಟ್ಟಿದರು.[೪೧] ಸುಂದರ ಮಹಲುಗಳು, ಅಷ್ಟೇ ಸುಂದರ ರಸ್ತೆಗಳು, ಮಾರುಕಟ್ಟೆ ಇತ್ಯಾದಿಗಳಿಂದ ಸುಸಜ್ಜಿತವಾದ ನವರಸಪುರ ನಗರವು ಅಂದಿನ ಕಾಲದ ಅತ್ಯಂತ ವಿಪುಲ ಜನವಸತಿಯ ನಗರವಾಗಿತ್ತು. ದುರ್ದೈವ ೨೦ ವರುಷಗಳಷ್ಟೆ ಕಾಲ ಬಾಳಿದ ನವರಸಪುರವನ್ನು ಕ್ರಿ.ಶ. ೧೬೨೪ರಲ್ಲಿ ಮಲಿಕ ಅಂಬರನು ಉಧ್ವಸ್ತ ಮಾಡಿದನು. ಮುಂದೆ ಎರಡು ವರುಷಗಳಲ್ಲಿ ಇಬ್ರಾಹಿಮನೂ ತೀರಿಕೊಂಡ. ನವರಸಪುರದ ಅವಶೇಷಗಳಲ್ಲಿ 'ಸಂಗೀತ ಮಹಲ' ಕಟ್ಟಡದ ಭಗ್ನಾವಶೇಷಗಳು ಮಾತ್ರ ಇಂದು ಯಾತ್ರಿಕರನ್ನು ಕರೆಯುತ್ತಿವೆ!

ಇಬ್ರಾಹಿಮ ಆದಿಲಶಹನ ಅಭಿರುಚಿ ಅಪರೂಪದ್ದಾಗಿತ್ತು. ಅದು ಇತಿಹಾಸವಿರಲಿ, ಸಾಹಿತ್ಯವಿರಲಿ, ಸಂಗೀತವಿರಲಿ, ಕಲೆ ಇರಲಿ, ವಾಸ್ತುಶಿಲ್ಪವಿರಲಿ, ಹಿಂದು ಮುಸ್ಲಿಮ ಧಾರ್ಮಿಕ ವಿಷಯಗಳಿರಲಿ, ಆತನಿಗೆ ಎಲ್ಲದರಲ್ಲೂ ಆಸಕ್ತಿ, ಕಳಕಳಿ ಇದ್ದುದು ಕಂಡು ಬರುತ್ತದೆ. ಇವುಗಳ ಕಾರಣದಿಂದ ಒಂದು ಹಂತದಲ್ಲಿ ಇಬ್ರಾಹಿಮನು ತನ್ನ ಇಸ್ಲಾಂ ಧರ್ಮವನ್ನು ತ್ಯಜಿಸಿ ಹಿಂದೂ ಧರ್ಮವನ್ನು

ಸ್ವೀಕರಿಸಿದ್ದನೆಂದು ಆತನ ಜನರು ಪುಕಾರು ಎಬ್ಬಿಸಿದ್ದರು. ಆದರೆ ಇಬ್ರಾಹಿಮನು ಎಂದಿಗೂ ತನ್ನ ಧರ್ಮವನ್ನು ತ್ಯಜಿಸಲಿಲ್ಲ. ಅನ್ಯ ಧರ್ಮಗಳನ್ನು ಹೀಯಾಳಿಸಲಿಲ್ಲ. ತನ್ನ ಅರಮನೆಯ ಆವರಣದಲ್ಲಿಯೆ ಸರಸ್ವತಿ ಮಂದಿರವನ್ನು ಕಟ್ಟುವಷ್ಟು ಆತ ಮುಂದೆ ಹೋಗಿದ್ದ. ಇಂದು ಅದುವೆ ನರಸಿಂಹಮಂದಿರವಾಗಿದೆ. ಈ ಎಲ್ಲ ಆಸಕ್ತಿಗಳ ಫಲವಾಗಿಯೇ ಆತನ ಕವಿಜೀವ ನುಡಿದಿದೆ.

"ಭಾಕಾ ನ್ಯಾರಿ ನ್ಯಾರಿ ಭಾವ ಏಕ
ಕಹಾ ತುರುಕ ಕಹಾ ಬರಾಹಮನ್"

'ಭಾಷೆ ಬೇರೆ ಬೇರೆಯಾದರೂ ಆತ ತುರುಕನಾಗಿರಲಿ ಬ್ರಾಹ್ಮಣನಾಗಿರಲಿ ಭಾವ ಒಂದೇ' ಎಂಬುದು ಅವನ ಸಂದೇಶವಾಗಿದೆ. ಇಂಥ ಗೀತಗಳ ಸಂಕಲನವೇ 'ಕಿತಾಬೆ–ನೌರಸ' ಎಂಬ ಕವನ ಸಂಕಲನ. ಅದರಲ್ಲಿ ಸಾಹಿತ್ಯವಿದೆ. ಸಂಗೀತವಿದೆ. ಇತಿಹಾಸವಿದೆ, ಸುಂದರ ಕಲ್ಪನೆ ಇದೆ. ಅದರ ಕಿಂಚಿತ್ ದರ್ಶನದ ಮೊದಲ ಕಾವ್ಯದಲ್ಲಿ ಬಳಿಸಿದ ಭಾಷೆಯ ಮೂಲವನ್ನು ನೋಡಬೇಕು.

೪. ದಖಣಿ ಭಾಷೆ :

ಹನ್ನೊಂದನೆಯ ಶತಮಾನದಲ್ಲಿ ಮುಸ್ಲಿಮರು ಉತ್ತರ ಭಾರತದಲ್ಲಿ ಪ್ರಪ್ರಥಮವಾಗಿ ತಮ್ಮ ರಾಜ್ಯವನ್ನು ಸ್ಥಾಪಿಸಿದಾಗ ಅವರ ರಾಜಭಾಷೆ ಅವರದೇ ಆದ 'ಪರ್ಶಿಯನ್' ಆಗಿರುವುದು ಸಹಜವಾಗಿತ್ತು. ಕೈ ಬೆರಳೆಣಿಕೆಯ ಜನರೊಂದಿಗೆ ಬಂದ ಒಂದು ಭಾಷೆ ರಾಜಾಶ್ರಯದಿಂದ ಇಲ್ಲಿ ಭದ್ರವಾಗಿ ನೆಲೆಯೂರಲು ಬೆನ್ನಹಿಂದೆ ಬಂದ ಪರ್ಶಿಯನ್ ವಿದ್ವಾಂಸರು, ಕವಿಗಳು, ಸಾಹಿತಿಗಳು ಕಾರಣರಾದರು. ರಾಜ್ಯಸ್ಥಿರವಾಯಿತು. ಭಾಷೆ ಸ್ಥಿರವಾಯಿತು. ಆದರೆ ಅವರ ರಾಜ್ಯ ವಿಸ್ತಾರಕ್ಕೆ, ಮತಾಂತರಕ್ಕೆ ಈ ಭಾಷೆ ಕಠಿಣವೆನಿಸಿತು. ಭಾರತೀಯರ ಗೊತ್ತಿರದ ಭಾಷೆಯಲ್ಲಿ ವ್ಯವಹರಿಸುವುದು ಇನ್ನೂ ಕಠಿಣವೆನಿಸಿದ್ದು ಅವರು ದಕ್ಷಿಣ ಭಾರತದಲ್ಲಿ ಕಾಲಿಟ್ಟಾಗ ಇಲ್ಲಿ ಅವರಿಗೆ ದ್ರಾವಿಡಮೂಲದ ಭಾಷೆಗಳು ಎದುರಾದುವು. ಹದಿನಾಲ್ಕನೆಯ ಶತಮಾನದಲ್ಲಿ ಕಲಬುರ್ಗಿಯಲ್ಲಿ 'ಬಹಮನಿ' ರಾಜ್ಯವೇನೋ ಸ್ಥಾಪಿತವಾಯಿತು. ಆದರೆ ಜನ ಸಂಪರ್ಕ ಹೇಗೆ? ಕಲಬುರ್ಗಿಗೆ ಬಂದು ನೆಲಸಿದ ಮುಸ್ಲಿಂರಲ್ಲಿ ಬೆರಳಿಣಿಕೆಯ ಜನ ಪರ್ಶಿಯನ್ ಬಲ್ಲವರಾಗಿದ್ದರು. ಉಳಿದ ಬಹುಸಂಖ್ಯಾತ ಸೈನಿಕರೆಲ್ಲ ಉತ್ತರಭಾರತ ಮೂಲದ ಮತಾಂತರಗೊಂಡ ಮುಸ್ಲಿಂರಾಗಿದ್ದರು. ಅವರಿಗೆ ತಮ್ಮ ಗ್ರಾಮೀಣ ಮಾತೃ ಭಾಷೆಗಳಾದ ಖಡೀಬೋಲೋ, ಅವಧಿ, ಬ್ರಜ್ ಇತ್ಯಾದಿ ಭಾಷೆಗಳು ಮಾತ್ರ ಗೊತ್ತಿದ್ದುವೇ ಹೊರತು ಬೇರೇನೂ ಗೊತ್ತಿರಲಿಲ್ಲ. ಆದ್ದರಿಂದ ಅವರು ಪರಸ್ಪರ ಮಾತನಾಡಿಕೊಳ್ಳುವ ಖಡೀಬೋಲಿಯಲ್ಲಿ ಹರಕು ಮುರುಕು ಪರ್ಶಿಯನ್ ಶಬ್ದಗಳನ್ನು ಉಪಯೋಗಿಸಿ

ಮಾತನಾಡುವ ಭಾಷೆಯೇ ರಾಜಭಾಷೆಯಾಯಿತು. ಅದರಲ್ಲಿ ಸ್ಥಳೀಯ ಕನ್ನಡ ಮರಾಠಿ ತೆಲಗು ಶಬ್ದಗಳ ಮಿಶ್ರಣವೂ ಆಯಿತು. ಈ ಎಲ್ಲ ಭಾಷೆಗಳ ಮಿಶ್ರಣದ ಹೊಸಭಾಷೆ ರಾಜರ ಲಿಪಿ ಪರ್ಶಿಯನ್ ಲಿಪಿಯನ್ನು (ಫಾರ್ಸಿ–ಅರಬ್ಬಿ) ಅಪ್ಪಿಕೊಂಡಿತು.

ಬಹಮನಿಯ ರಾಜ್ಯದ ಶಕ್ತಿಶಾಲಿ ಬಾದಶಹ ಫಿರೋಜಶಹಾ ಬಹಮನಿಯ ಕಾಲದಲ್ಲಿ ದಿಲ್ಲಿ ನಿವಾಸಿ 'ಖ್ವಾಜಾ ಬಂದೇನವಾಜ ಗೇಸೂ ದರಾಜ' ಎಂಬ ಸೂಫಿ ಸಂತರು ಕಲಬುರ್ಗಿಗೆ ಬಂದು ನೆಲೆಸಿದರು.(ಕ್ರಿ.ಶ.೧೪೯೯) ಅವರು ಬರೆದ ಮೂರು ನಾಲ್ಕು ಸಣ್ಣ ಸಣ್ಣ ಕೃತಿಗಳು ಈ ಹೊಸ ಭಾಷೆಯ ಮೊದಲ ಕೃತಿಗಳು ಎನಿಸಿವೆ. ಅವುಗಳಲ್ಲಿ 'ಮಿ ಅರಾಜುಲ್ ಅಶಿಕೆ' ದೊಡ್ಡದು ಇನ್ನೊಂದು 'ಶಿಕಾರನಾಮಾ' ಚಿಕ್ಕದು. ಇವೆರಡೂ ಪ್ರಕಟವಾಗಿವೆ. ಉಳಿದ 'ದೂರುಲ್ ಅಸರಾರ್' ಹಾಗೂ 'ತಿಲಾವತುಲ್ ವಜೂದ' ಪ್ರಕಟವಾದ ವಿವರ ಸಿಕ್ಕಿಲ್ಲ.

ಹೊಸ ಭಾಷೆ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಪ್ರಚಲಿತವಾದ್ದರಿಂದ, ಉತ್ತರದವರು ಇದನ್ನು ದಕ್ಷಿಣೀ 'ದಖಣೀ' ಎಂದು ಕರೆದರು. ಅದರ ಮೊದಲ ಉಲ್ಲೇಖ ಕ್ರಿ.ಶ.೧೪೪೭–೧೫೨೦ರಲ್ಲಿ ಜೀವಿಸಿದ್ದ ;ಕರೇಶೀ ಬೀದರೀ' ಎಂಬ ಬಹಮನಿ ರಾಜ್ಯದ ಆಸ್ಥಾನ ಕವಿಯ ಕಾವ್ಯದಲ್ಲಿ ದೊರೆಯುತ್ತದೆ.

'ಸೋ ಇಸ್ ಶಾಹಕೆ ದೌರ ಬೀದರ ಮುಕಾಮ ।
ಯೋ ಶಾಯಿರ ಕಿಯಾ ನಜ್ಮ ದಖನೀ ತಮಾನು॥

ಎಂದು ಪ್ರಥಮವಾಗಿ 'ದಖನೀ' ಎಂಬ ಶಬ್ದವನ್ನು ಬಳಸಿದನಲ್ಲದೆ ಅದೇ ಕಾವ್ಯದ ಮುಂದಿನ ಒಂದು ಪದ್ಯದಲ್ಲಿ

'ಬರೀದ ಶಾಹ ಮಹಮುದಕಿ ದೌರ ಭೀ।
ಕಯೇ ಹಿಂದು ಈ ಕೋ ಕ್ಯಾ ಕವನ ಫಾರಸೀ॥

ಎಂದು 'ಹಿಂದು ಈ' ಎಂಬ ಹೆಸರನ್ನೂ ಉಪಯೋಗಿಸಿದ್ದಾನೆ. ಈ 'ಹಿಂದು ಈ' ಶಬ್ದ 'ಹಿಂದಿ' ಎಂದು ಹೆಸರಾದದ್ದು ಕರ್ನಾಟಕದ ವಿಜಾಪುರದಲ್ಲಿ! ವಿಜಾಪುರದ ಸೂಫೀ ಸಂತ ಹೆಸರಾಂತ ಕವಿ 'ಶಾಹ ಮಿರಾಂಜಿ' (ಕ್ರಿ.ಶ. ೧೫೭೩) ತನ್ನ 'ಖುಶ್‌ನಾಮಾ' ಕಾವ್ಯದಲ್ಲಿ 'ಹಿಂದು ಈ' ಎಂಬುದನ್ನು ಪ್ರಥಮವಾಗಿ 'ಹಿಂದೀ' ಎಂದು ಉಲ್ಲೇಖಿಸಿದ್ದಾನೆ.

'ಯಜ ಹಿಂದೀ ಬೋಲೂಂ ಸಬ
ಇಸ ಅರತೋಂಕೆ ಸಬಬ
ಯೋ ದೇಖತ ಹಿಂದೀ ಬೋಲ
ಪನ ಮಅನೀ ಹೈ ನಿಪತೋಲ

ಹೀಗೆ ೧೪/೧೫ರ ಶತಕದಲ್ಲಿದ್ದ 'ಹಿಂದು ಈ' ಶಬ್ದ ೧೬ನೆಯ ಶತಮಾನದಲ್ಲಿ 'ಹಿಂದಿ' ಎಂದಾಯಿತು. ಆಗೆಲ್ಲ ಉತ್ತರ ಭಾರತದಲ್ಲಿ 'ಪರ್ಶಿಯನ್' ಭಾಷೆಯ ಸಾಮ್ರಾಜ್ಯ ಇತ್ತೆಂಬುದನ್ನು ಮರೆಯುವಂತಿಲ್ಲ. ಸಂಪರ್ಕ ಭಾಷೆಯಾಗಿ ರೂಪುಗೊಂಡು, ಉತ್ತರ ಹಾಗೂ ದಕ್ಷಿಣ ಭಾರತಗಳ ಅನೇಕ ಭಾಷೆಗಳಿಂದ ಪ್ರಭಾವಿತಗೊಂಡ ಒಂದು ಹೊಸ ಭಾಷೆ 'ಹಿಂದು ಈ', 'ಹಿಂದಿ' 'ದಖನೀ' ಎಂದು ಕರೆಯಿಸಿಕೊಂಡು ಈಗ ರಾಜಭಾಷೆಯಾಗಿ ಸಾಹಿತ್ಯದ ಭಾಷೆಯೂ ಆಯಿತು. ಅದಕ್ಕೆ ಕಾರಣ ವಿಜಾಪುರದ ಆದಿಲಶಾಹಿಗಳು ಮತ್ತು ಗೋವಳಕೊಂಡದ ಕುತುಬಶಾಹಿಗಳು ಈ ರಾಜ್ಯಗಳ ಬಹುತೇಕ ಬಾದಶಹರು ಸ್ಥಳೀಯ ಭಾಷೆಗಳಿಗೆ ಉತ್ತೇಜನವನ್ನು ನೀಡಿದರಲ್ಲದೇ ಸ್ವತಃ ಸಾಹಿತ್ಯಾಸಕ್ತರಾಗಿದ್ದರು.

ಎರಡನೆಯ ಇಬ್ರಾಹಿಮ ಆದಿಲಶಹನ ಆಸ್ಥಾನ ಕವಿ ಅಬ್ಲುಲ್ಲಾ ದೇಹಲವಿ ತನ್ನ 'ಇಬ್ರಾಹಿಮನಾಮಾ' ಎಂಬ ಕಾವ್ಯದಲ್ಲಿ

'ಜಬಾಂ ಹಿಂದುಈ ಮುಂಜ ಸೋ ಹುಂ ದಿಹಲವಿ
ನ ಜಾನೂ ಅರಬ ಔರ ಅಜಮ ಮಸ್ನವೀ ॥೯॥

ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಅವನು ತನ್ನ ಕಾವ್ಯದಲ್ಲಿ ಭಾರತೀಯ ಭಾಷೆಗಳಾದ ಸಂಸ್ಕೃತ, ಕನ್ನಡ ಮರಾಠಿ, ತೆಲಗು ಬ್ರಜ, ಅವಧ, ಖಡೀ ಬೋಲೀಗಳ ಜೊತೆಗೆ ಪರ್ಶಿಯನ್ ಹಾಗೂ ಅರಬ್ಬೀ ಭಾಷೆಗಳ ಶಬ್ದಗಳನ್ನು ಬಳಸಿದ್ದಾನೆ. ಲಿಪಿ ಮಾತ್ರ ಪರ್ಶಿಯನ್ ಆಗಿತ್ತು. ಈ ಹೆಜ್ಜೆಗಳಲ್ಲೇ ಬರೆದ ಕೃತಿ ಅಬ್ದುಲ್ಲಾ ದೇಹಲವಿಯ ಒಡೆಯ ಇಬ್ರಾಹಿಮನ 'ಕಿತಾಬೆ ನೌರಸ' ಕವನ ಸಂಕಲನ.

ಮುಂದಿನ ದಿನಗಳಲ್ಲಿ ವಿಜಾಪುರದ ಆಸ್ಥಾನ ಕವಿಗಳಿಗೆ ಇದು (ಭಾರತೀಯ ಭಾಷೆಗಳ ಅಧಿಕ ಪ್ರಭಾವ) ಹಿಡಿಸಲಿಲ್ಲವೆಂದು ಕಾಣುತ್ತದೆ. ಅವರು ತಮ್ಮ ಕಾವ್ಯಗಳನ್ನು 'ದಖನೀ' ಭಾಷೆಯಲ್ಲಿಯೇ ಬರೆದರಾದರೂ ಭಾರತೀಯ ಭಾಷೆಗಳ ಪ್ರಯೋಗದ ವಿರುದ್ಧ ಎದ್ದು ನಿಂತರು. 'ಸನಅತಿ'(ಕ್ರಿ.ಶ. ೧೬೪೫) ಎಂಬ ಕವಿ ತನ್ನ ಕಾವ್ಯ 'ಕಿಸ್ಸಾಯೆ ಬೇನಜೀರ' (ಅನುಪಮ ಕಥಾ)ದಲ್ಲಿ ಈ ಕುರಿತು ಸ್ಪಷ್ಟವಾಗಿ ಹೇಳುತ್ತಾನೆ.

'ರಖ್ಯಾ ಕಮ ಸಹಂಸ್ಕರ್ತಕೆ ಇಸಮೆ ಬೋಲ ।
ಅದಿಕ ಬೋಲ ನೆ ತೆ ರಖ್ಯಾ ಹೂಂ ಅಮೋಲ ॥೩೭೦॥

ಜಿಸೆ ಫಾರಸೀಕಾ ನ ಕುಚ ಗ್ಯಾನ ಹೈ ।
ಸೋ ದಖನೀ ಜಬಾಂ ಉನಕೂ ಆಸಾನ ಹೈಂ ॥೩೭೧॥

ಸೋ ಇಸಮೆ ಸಹಂಸ್ಕರ್ತಕಾ ಹೈ ಮುರಾದ ।
ಕಿಯಾ ಇಸ ತೆ ಆಸಾನಗೀ ಕಾ ಸವಾದ ॥೩೭॥

ಹೀಗೆ 'ಸನಅತಿ' ಕವಿ ಸಂಸ್ಕೃತಿ ಪ್ರಯೋಗ ಕಡಿಮೆ ಮಾಡಿರುವುದಾಗಿ ಪ್ರಕಟಿಸಿದ್ದು ದಖಣೀ ಭಾಷೆಗೆ ಒಂದು ಹೊಸ ಆಯಾಮ ದೊರೆತಂತಾಯಿತು. ಪರ್ಶಿಯನ್ ಶಬ್ದಗಳ ಬಳಕೆ ಅಧಿಕವಾಗತೊಡಗಿತು. ಅದುವೆ ಮುಂದೆ ಭಾರತೀಯ ಭಾಷೆಗಳ ಪ್ರಭಾವದಿಂದ ಪುಷ್ಟಿಗೊಂಡ ರೂಪುಗೊಂಡ ಭಾಷೆ 'ಉರ್ದು' ಎನಿಸಿದ್ದು ಅನಂತರದ ದಿನಗಳಲ್ಲಿ.

ವಿಜಾಪುರದ ಮಹಮ್ಮದ ಆದಿಲಶಹ (೧೬೨೭-೧೬೫೬)ನ ಸರದಾರ ಶಾಹಜೀ ಭೋಸಲೆ (ಶಿವಾಜಿಯ ತಂದೆ)ಯ ಆಶ್ರಯದಲ್ಲಿದ್ದ ಜಯರಾಮ ಪಿಂಡೆ ಎಂಬ ಕವಿ ತನ್ನ 'ರಾಧಾ-ಮಾಧವ ಚಂಪೂ' ಎಂಬ ಸಂಸ್ಕೃತ ಕಾವ್ಯದಲ್ಲಿ ಅಂದು ತನಗೆ ಬರುತ್ತಿದ್ದ ಹನ್ನೆರಡು ಭಾಷೆಗಳನ್ನು ಉಲ್ಲೇಖಿಸಿದ್ದಾನೆ.

ದ್ವಾದಶ ಭಾಷಾಸು ಸಂಸ್ಕೃತ, ಪ್ರಾಕೃತ, ಗೋಪಾಚಲೀಯ ಗುರ್ಜರ

ವಕ್ತರ ಢುಂಢಾರ, ಪಂಜಾಬ ಹಿಂದುಸ್ತಾನ ಬಗ್ಗುಲ

ಯಾವನೀ, ದಾಕ್ಷಿಣಾತ್ಯಯಾವನೀ ಕರ್ನಾಟಕಾಸು

ನಿರರ್ಗಲಂ ಕವಯಾಮೀತಿ ಜ್ಞಾಪಯಿತುಮಿತಿ

ಎಂದು ಹೇಳುತ್ತಾನೆ. ಇಲ್ಲಿ ಬರುವ ಹಿಂದುಸ್ತಾನ ಬಗ್ಗುಲಯಾವನೀ, ಮತ್ತು ದಾಕ್ಷಿಣಾತ್ಯಯಾವನೀ ಎಂಬ ಭಾಷೆಗಳನ್ನು ವಿಶೇಷ ಗಮನಿಸಬೇಕು. ಒಂದು ಹಿಂದಿಯೆಂದೂ ಇನ್ನೊಂದು ದಖಣೀ ಎಂದೂ ಉಲ್ಲೇಖಿಸಿದ್ದಾನೆಂದು ವಿದ್ವಾಂಸರ ಮತವಾಗಿದೆ. ಆದರೆ ಹಿಂದೂಸ್ತಾನ ಬಗ್ಗುಲಯಾವನೀ ಎಂದರೆ ಪರ್ಶಿಯನ್ ಎಂಬುದಾಗಿಯೂ, ದಾಕ್ಷಿಣಾತ್ಯಯಾವನೀ ಎಂದರೆ ದಖಣೀ ಹಿಂದೀ ಅಥವಾ ಉರ್ದು ಎಂಬುದೇ ಆಗಿರಬೇಕು.

ಕಳೆದ ನಾಲ್ಕು ನೂರು ವರುಷಗಳಲ್ಲಿ ದಖಣಿ ಭಾಷೆಯಲ್ಲಿ ದೊರೆಯುವ ಸಾವಿರಾರು ಕೃತಿಗಳಲ್ಲಿ ಮುಕ್ಕಾಲು ಪಾಲು ಕೃತಿಗಳು ದಕ್ಷಿಣ ಭಾರತದಲ್ಲಿ ವಿಶೇಷವಾಗಿ ವಿಜಾಪುರ ಹಾಗೂ ಹೈದರಾಬಾದ ನಗರಗಳ ಪರಿಸರದಲ್ಲಿಯೇ ರಚಿತವಾದವುಗಳಾಗಿವೆ. ಅವುಗಳಲ್ಲೊಂದು ಎರಡನೆಯ ಇಬ್ರಾಹಿಮ ಆದಿಲಶಹನ ಕೃತಿ 'ಕಿತಾಬೆ-ನೌರಸ' ಎಂಬುದಾಗಿದೆ.

೫. 'ಕಿತಾಬೆ–ನೌರಸ' :

'ಕಿತಾಬೆ–ನೌರಸ' ಅಥವಾ 'ಕಿತಾಬ–ಇ–ನವರಸ' ಎಂಬುದು ಎರಡನೆಯ ಇಬ್ರಾಹಿಮ ಆದಿಲಶಹ ಬರೆದ ದಖಣಿ ಭಾಷೆಯ ಗೀತೆಗಳ ಸಂಕಲನ. ಇದರಲ್ಲಿ ೫೯ ಗೀತೆಗಳೂ, ೧೭ ದೋಹಾ(ದ್ವಿಪದಿ)ಗಳೂ ಇವೆ. ಭಾರತೀಯ ಉತ್ತರಾದಿ ಅಥವಾ ಹಿಂದುಸ್ಥಾನೀ ಸಂಗೀತದ ಕುರಿತಾಗಿ ಬರೆದ ಕವನಗಳು ಎಂಬುದು ವಿದ್ವಾಂಸರ ಮತವಾಗಿದೆ. ಆದರೆ ಇದರಲ್ಲಿ ಇಬ್ರಾಹಿಮನು ತನ್ನ ಗೀತೆಗಳಿಗೆ ರಾಗಗಳನ್ನು ಸೂಚಿಸಿದ್ದಾನೆಯೇ ಹೊರತು ಲಕ್ಷಣಗಳನ್ನು ಹೇಳಿಲ್ಲ. ೫೯ ಗೀತೆಗಳು ಒಟ್ಟು ೧೭ ರಾಗಗಳನ್ನು ಸೂಚಿಸಿದ್ದಾನೆ. ಅವುಗಳ ವಿವರ ಹೀಗಿದೆ.

ಭೂಪಾಳಿ–೨, ರಾಮಕಿರಿ (ರಾಮಕಲಿ)–೨, ಭೈರವ–೬, ಮಾರೂ–೨, ಆಸಾವರಿ–೨, ದೇಶೀ–೧, ಪೂರಬಾ–೧, ಮಲ್ಹಾರ–೫, ಗೌರಿ–೨, ಕಲ್ಯಾಣ–೪, ಧನಾಶ್ರೀ–೨, ಕಾನಡಾ–೧೯, ಕೇದಾರ–೪ ಹೀಗೆ ಇಂದು ಪ್ರಚಲಿತದಲ್ಲಿದ್ದ ೧೪ ರಾಗಗಳನ್ನು ಹೆಸರಿಸಿದ್ದಾನಲ್ಲದೆ ಪ್ರಚಲಿತದಲ್ಲಿಲ್ಲದ ಹಜೀಜ–೧, ಬರಾಡೀ–೧ ಹಾಗೂ ನೌರೋಜ–೧ ಮೂರು ರಾಗಗಳನ್ನು ಹೆಸರಿಸಿದ್ದಾನೆ. ಬಹುಶಃ ಇವುಗಳು ತಾನು ರಚಿಸಿದ ಅಥವಾ ಅವನ ಕಾಲದಲ್ಲಿ ಬೇರೆಯವರೋ, ಆತನ ಹಿಂದಿನವರೋ ರಚಿಸಿದ ರಾಗಗಳಾಗಿರಬೇಕು.

ಇವುಗಳಲ್ಲಿ ಗೀತೆಗಳನ್ನು ಮೂರು ಭಾಗಗಳಲ್ಲಿ ವಿಂಗಡಿಸಿದ್ದಾನೆ. ಮೊದಲನೆಯದು 'ನೌರಸ' ಅಥವ ಇಂದು ಪ್ರಚಲಿತದಲ್ಲಿರುವ ಧ್ರುವಪದ ಅನಂತರ ಬೈನ ಅಥವ 'ಅಂತರಾ' ಕೊನೆಯದು 'ಅಭೋಗ' ಹೀಗೆ ಮೂರು ವಿಧವಾಗಿ ವಿಂಗಡಿಸಿದ ಗೀತೆಗಳಲ್ಲಿ ಕೆಲವು ಗೀತಗಳಲ್ಲಿ ಒಂದಕ್ಕಿಂತ ಅಧಿಕ 'ಬೈನ'ಗಳೂ ಉಂಟು.

ಆಸ್ಥಾನ ಕವಿ 'ಜಹೂರಿ' ಈ ಕವನ ಸಂಕಲನಕ್ಕೆ ಒಂದು ಮುನ್ನುಡಿಯನ್ನೂ ಬರೆದಿದ್ದಾನೆ. ಆತನು ಹೇಳಿದಂತೆ, ಇಬ್ರಾಹಿಮನು, ಪರ್ಶಿಯನ್ ಜನರಿಗೆ ಭಾರತೀಯ ಸೌಂದರ್ಯ ಶಾಸ್ತ್ರ ಹಾಗೂ ನವರಸಗಳನ್ನು ಪರಿಚಯಿಸಲು ಕಿತಾಬೆ–ನೌರಸ ಬರೆದನಂತೆ. ಶೃಂಗಾರ, ವೀರ, ಭೀಭತ್ಸ, ರುದ್ರ, ಭಯಾನಕ, ಹಾಸ್ಯ, ಕರುಣ ಅದ್ಭುತ ಮತ್ತು ಶಾಂತಿ ಇವುಗಳೇ ಒಂಬತ್ತು ರಸಗಳು. ಇವುಗಳಲ್ಲಿ ಇಬ್ರಾಹಿಮನು ಶೃಂಗಾರಕ್ಕೆ ಅಧಿಕ ಒತ್ತು ಕೊಟ್ಟಿದ್ದಾನೆ. ಕೆಲವು ಸಂದರ್ಭಗಳಲ್ಲಿ ಹಾಸ್ಯ, ಕರುಣ ಹಾಗೂ ಶಾಂತಿಗಳಿಗೂ ಆಸ್ಪದ ಕೊಟ್ಟಿದ್ದಾನೆ. ಈ ರಾಗಗಳನ್ನು 'ಧ್ರುಪದ' ಶೈಲಿಯಲ್ಲಿ ಸಂಯೋಜಿಸಿದ್ದಾನೆಂದೂ ವಿದ್ವಾಂಸರ ಮತವಾಗಿದೆ.

ಇಬ್ರಾಹಿಮನು ಭಾರತದ ಪುರಾಣಗಳನ್ನು ಓದಿರಬಹುದು ಅಥವಾ ಕೇಳಿರಬಹುದು.

ಸೌಂದರ್ಯ ಶಾಸ್ತ್ರ ಹಾಗೂ ನವರಸಗಳನ್ನು ಹೇಳುವಾಗ ಸಹಜವಾಗಿ ಆತನ ಮನಸ್ಸು ಭಾರತೀಯರ ವಿದ್ಯಾದೇವತೆಯಾದ ಸರಸ್ವತಿಯತ್ತ ಒಲಿದಿದೆ. ಅಂತೆಯೇ ಮುಸಲ್ಮಾನರ ಸಂಪ್ರದಾಯದಂತೆ 'ಬಿಸ್ಮಿಲ್ಲಾಹ' ದಿಂದ ಪ್ರಾರಂಭವಾಗಬೇಕಿದ್ದ 'ಕಿತಾಬೆ-ನೌರಸ' ಸರಸ್ವತಿಯ ಆಹ್ವಾನದಿಂದ ಪ್ರಾರಂಭವಾದದ್ದು ಗಮನಾರ್ಹವಾಗಿದೆ. ಕಿತಾಬೆ-ನೌರಸದ ಮೊದಲ ದ್ವಿಪದಿಯು ಸರಸ್ವತಿಯನ್ನು ಕುರಿತಾಗಿದೆ.

'ನೌರಸ ಸೂರ ಜುಗ ಜಗಜೋಶಿ ಆಣು ಸರೋಗುನಿ
ಯೂಸತ್ ಸರಸುತೀ ಮಾತಾ ಇಬ್ರಾಹಿಮ ಪರಸಾದ ಭಈ ದೂನೀ

'ಹೇ ತಾಯಿ ಸರಸ್ವತಿ, ಇಬ್ರಾಹಿಮನ ಮೇಲೆ ನಿನ್ನ ಕೃಪೆ ಇದೆಯಾದ್ದರಿಂದ, ನಿನ್ನ ಅನುಗ್ರಹದಿಂದ ಆತನ 'ನವರಸ' ಕಾವ್ಯವು ಜಗತ್ತಿನಲ್ಲಿ ಬಹುಕಾಲ ಬಾಳುತ್ತದೆ' ಎಂದು ತನ್ನ ಕೃತಿಯನ್ನು ಪ್ರಾರಂಭಿಸುತ್ತಾನೆ.

ಇಬ್ರಾಹಿಮ ಜುಬೇರಿಯು ತನ್ನ ಬಸಾತೀನ ಸಲಾತಿನ್‌ದಲ್ಲಿ ಹೇಳಿದಂತೆ ಇಬ್ರಾಹಿಮ ಆದಿಲಶಹನ ಹಿಂದು ಸಂಗೀತಗಾರರ ಒಡನಾಟವೇ ಇದಕ್ಕೆ ಕಾರಣವಿರಬಹುದು. ಜುಬೇರಿಯ ಅಪ್ರಕಟಿತ 'ರೌಜತ್-ಅಲ್ ಔಲಿಯಾ-ಇ-ಬಿಜಾಪುರ' ಹಸ್ತಪ್ರತಿಯಲ್ಲಿ ಹೇಳಿದಂತೆ 'ಇಬ್ರಾಹಿಮನು ಅರಮನೆಯ ಆವರಣದಲ್ಲಿ ತಾನೆ ಕಟ್ಟಿದ ಸರಸ್ವತಿ ಮಂದಿರದಲ್ಲಿ ಪ್ರತಿದಿನ ಈ ಹಿಂದು ಸಂಗೀತಗಾರರೊಂದಿಗೆ ಸೇರಿ ಸರಸ್ವತಿಯನ್ನು ಆರಾಧಿಸುತ್ತಿದ್ದನು.' ಈ ಮಂದಿರ ಇಂದಿಗೂ ಅರಮನೆಯ ಆವರಣದಲ್ಲಿ 'ನರಸಿಂಹ ಸರಸ್ವತಿ ಮಂದಿರ' ಎಂದು ಗುರುತಿಸಲಾಗುತ್ತಿದೆ. ಬಹುಸಂಖ್ಯಾತ ಮುಸ್ಲಿಂ ಕಟ್ಟಡಗಳ ಮಧ್ಯ ಏಕೈಕ ಭಾರತೀಯ ದೇವತೆಯ ಮಂದಿರ ಅರಮನೆಯ ಆವರಣದಲ್ಲಿ ಉಳಿದುಕೊಂಡಿದೆ.

ಕಿತಾಬೆ-ನೌರಸದಲ್ಲಿ ಗೀತಗಳನ್ನು ಹಾಗೂ ದ್ವಿಪದಿಗಳನ್ನು ಐದು ವಿಭಾಗಗಳಲ್ಲಿ ಗುರುತಿಸಬಹುದಾಗಿದೆ.

೧) ಹಿಂದು ದೇವ-ದೇವತೆಗಳ ಸ್ತುತಿ.

೨) ಕಲಬುರ್ಗಿಯ ಸಂತ ಬಂದಾ ನವಾಜ ಗೇಸೂದರಾಜರ ಸ್ತುತಿ.

೩) ತಾನು, ತನ್ನ ತಂಬೂರಿ ಮೋತೀಖಾನ, ಆನೆ ಅತಿಶ್ ಖಾನ ಹಾಗೂ ತನ್ನ ಹೆಂಡತಿ ಚಾಂದ ಸುಲ್ತಾನಳ ಕುರಿತಾದ ಪದ್ಯಗಳು.

೪) ಕಾಲ್ಪನಿಕ ಶೃಂಗಾರ-ವಿರಹ ಗೀತೆಗಳು.

೫) ರಾಗ ಮಾಲಿಕೆ.

೮. ಹಿಂದು ದೇವ–ದೇವತೆಗಳು :

ಮೊದಲ ಪದ್ಯವೇ ಸರಸ್ವತಿ ಸ್ತುತಿಯಾಗಿದೆ. ಅನಂತರದ ಗೀತೆ ಹಾಗೂ ದ್ವಿಪದಿಗಳಲ್ಲೂ ಇಬ್ರಾಹಿಮನು ಸರಸ್ವತಿಯನ್ನು ಹಲವಾರು ಸಲ ಸ್ತುತಿಸಿದ್ದಾನೆ.

'ಲೇವೋ ಶುಭ ನಾಮ ಸಿರಿ ಸರಸತಿಕೊ ತಬ ಪಾಯೋ
ಜಸ ನವರಸ ಸರಸ ಸಂಗ
ಇಬ್ರಾಹಿಮ ಕರ್ಣ ಗಹತ ದಂಡವತ ಕರತ ತಬ ಹೋತ
ರೋಮ ರೋಮ ಭಯೋ ಉಮಂಗ'

ಎಂದು ಒಂದೆಡೆ ಹೇಳಿದರೆ, ಮತ್ತೊಂದೆಡೆ ಅವಳ ಚಿತ್ರವನ್ನು ಕೊಡುತ್ತಾನೆ.

'ಸರಸ್ವತಿ ಸ್ವಚ್ಛ ಸುಂದರೀ ಮಹಾ ಉತ್ತಮ ಜಾತ ನಿರ್ಮಲ
ಏಕ ಹಸ್ತ ಪುಸ್ತಕ ದೂಜೆ ಪಾಂಢರೀ ಸುಮಿರನ
ತೀಜೆ ಶಿಯೆ ಶಂಖ ಚೌಥ ಕರ ಕಮಲ

ಮತ್ತೊಂದು ಪದ್ಯದಲ್ಲಿ ಶಾರದೆ–ಗಣೇಶ ಮಾತಾ ಪಿತಾ ಇಬ್ಬರನ್ನೂ ಸ್ತುತಿಸಿದ್ದಾನೆ.

'ಶಾರದಾ ಗಣೇಶ ಮಾತಾಪಿತಾ ತುಮ ಮಾನೋ
ನಿರ್ಮಲ ಬಿಂಬ ಸ್ಫಟಿಕ ತೀಸೀ ತಾಶ
ಇಬ್ರಾಹಿಮ ಗುಪಿತ ಗಹೀಸೂ ಅಬ ನವಾಜ ಪರಗಟ
ಕೀನೋ ಧನ್ನ ಮೇರೋ ರಾಸ

ರಾಗಗಳನ್ನು ಪೂರ್ತಿಕರಿಸುವಾಗ ಈಶ್ವರನನ್ನು, ಗೌರಿಯನ್ನು ಸ್ತುತಿಸಿದ್ದಾನೆ. ಭೈರವ ರಾಗದಲ್ಲಿ.

'ಬೈರವ ಕರ್ಪೂರಗಾರ ಭಾಲತಿಲಕ ಚಂದ್ರಾ
ತ್ರಿನೇತ್ರ ಜಟಾ ಮುಕುಟ ಗಂಗಾಧರಾ
ಜೈನ
ಇಕಹಸ್ತ ರೂಂಡ ನರಾ ತಿರಸೂಲ ಜುಗಲಾ ಕರಾ
ವಾಹನ ಬಲಿವರ್ದ ಸೀತ ಜಾತ ಗುಸಾಯೆಂ ಈಶ್ವರಾ
ಕಾಸ ಕುರೂತ ಕುಂಜರ ಪರಪರ ಚರಮ ವಯಾ ಗರಾ
ಆಭೋಗ
ಸರಪ ಸಿಂಗಾರ ಟಿಪ್ಪನ ಪರಭಾಯೆಂ ಕಲಪತರಾ
ರಮಣಿ ವಾದನ ಮರ್ದಂಗ ಧಾಮ ಕೈಲಾಸ ತದವಪರಾ
ಇಬ್ರಾಹಿಮ ಉಕ್ಕಹತ ಲಚ್ಚನ ರಾಗ ಭೈರವ ಮಹಾಉತ್ತಿಮ ಸುಂದರಾ

ಇಲ್ಲಿ ಶಿವನ ಪೂರ್ತಿ ಚಿತ್ರ ಬಂದಿದೆ. ಅವನ ಮೂರು ಕಣ್ಣುಗಳು, ಅವನ ವಾಹನ, ವಾಸಸ್ಥಾನ ಇತ್ಯಾದಿಗಳ ಕಲ್ಪನೆ ಇಬ್ರಾಹಿಮನಿಗೆ ಇತ್ತು.

ಗಣಪತಿಯನ್ನು– ಸರಸ್ವತಿಯನ್ನು ಚಿತ್ರಿಸಿದಷ್ಟು ಅವನಿಗೆ ತೃಪ್ತಿ ಇಲ್ಲ. ಮಲ್ಹಾರ ರಾಗದಲ್ಲಿಯ ಒಂದು ಕೃತಿಯಲ್ಲಿ.

'ಗಣಪತಿ ಮೂರತ ಹಸ್ತ ಮೇಘ ಮದ ಬರಖತ ಪಾನೀ
ದಂತ ದಾಮಿನೀ ಘಂಟ ಘೋರ ಘೋರ
ಗೋರಮಂಡಾನ ಬಿಧು ಬಾನೀ
ಸರಸ್ವತಿ ಪವಿತ್ರರ ಸ್ವಾಂತ
ಘನ ಜಲ ಕಸೆ ನಜೀ ಜಾನೀ
ಇಬ್ರಾಹಿಮ ನೌರಸ ಮುಗತಾ ನಿಕಸತ
ಯಾ ಕಾರಣ ನಿಹೀಚೆಂ ಮಾನೀ

'ಗಣಪತಿ ಮೂರ್ತಿಯು ಹಸ್ತಾ ನಕ್ಷತ್ರದಂತೆ ಇದೆ. ಹಸ್ತಾ ನಕ್ಷತ್ರದಲ್ಲಿ ಹೇಗೆ ವರ್ಷಾಧಾರೆಯಾಗುತ್ತದೆಯೋ ಹಾಗೆಯೆ ಆತನ ಹಣೆಯಿಂದ 'ಮದ' ಹೊರಬೀಳುತ್ತದೆ. ಆತನ ದಂತಗಳು ಮಿಂಚಂತೆ, ಗಂಟೆಯನಾದ ಮೋಡಗಳ ಧ್ವನಿಯಾದರೆ ಆತನ ಹಣೆಯೇ ಕಾಮನ ಬಿಲ್ಲು ಮತ್ತು ಆತನ ವಾಣಿಯು ಅಮೃತಸಮಾನವಾಗಿದೆ. ಪವಿತ್ರ ಸರಸ್ವತಿಯು ಸ್ವಾತಿ ನಕ್ಷತ್ರದ ಮೋಡಗಳಂತೆ, ಸ್ವಾತಿ ನೀರಿನ ಮಹಿಮೆ ಯಾರಿಗೆ ಗೊತ್ತಿಲ್ಲ. ಅಂತೆಯೇ ಇಬ್ರಾಹಿಮನು ಅವಳ ಕೃಪೆಯಿಂದ 'ನೌರಸ' ಗೀತ ರೂಪದ ಮುತ್ತನ್ನು ಹೊರತೆಗೆಯುತ್ತಾನೆ. ಆ ಕಾರಣದಿಂದಲೇ ಈ ಉಪಮೆಯು ನಿಶ್ಚಯವೆಂದು ತಿಳಿಯಲಾಗುತ್ತದೆ.

ಕಾನಡಾರಾಗದ ಮತ್ತೊಂದು ಗೀತೆಯಲ್ಲಿ ಸರಸ್ವತಿ– ಗಣಪತಿ ದೇವತೆಗಳನ್ನು ತನ್ನ ತಾಯಿ ತಂದೆ ಎಂದೂ, ಅವರಿಂದಲೇ ತಾನು ಉದ್ಧಾರನಾಗಿರುವುದಾಗಿ ಇಬ್ರಾಹಿಮನು ಹೇಳುತ್ತಾನೆ.

ವಿದ್ಯಾ ಪಂಥ ಸೂಜತ ನಹೀ ಯಾ ಕಾರಣ ಸರಸುತೀ
ಗಣಪತಿ ರಬಿಸಸಿ ಭಯೆ ಪರಗಾಸಾ,
ವಾಕ ವಿನಾಯಕ ಜುಗಲ ತುಂಬರ ಬೀನ
ಭೂಲೇ ರೀ ದುಖ ಧರನ ಕೊ ಸುಖ ಕರನ ಭೋಗ ವಿಲಾಸ
ಶಾರದಾ ಗಣೇಸ ಮಾತಾ ಪೀತ ತುಮ ಮಾನೋ
ನಿರಮಲ ಬೇಬ ಫಟಿಕ ಸೀಸೇ ತಾಸ

ಇಬ್ರಾಹೀಮ ಗುಪಿತ ಫೀಸೋ ಅಪ ನವಾಜ
ಪರಗಟ ಕೀನೋ ಧನಿ ಮೇರೋ ರಾಸ

ಪ್ರಪಂಚದಲ್ಲಿ ವಿದ್ಯೆಯ ಮಾರ್ಗವು ಸುಲಭವಾಗಿ ದೊರೆಯುವುದಿಲ್ಲವೆಂದೇ ಸರಸ್ವತಿ – ಗಣಪತಿಯರು ಸೂರ್ಯಚಂದ್ರರಂತೆ ಮಾರ್ಗದರ್ಶಕರಾಗಿ ಅವತರಿಸಿದ್ದಾರೆ. ಸರಸ್ವತಿ – ಗ್ಣಪತಿಯರೆಂದರೆ ತಂಬೂರಿಯ ಎರಡು ತಂತಿಗಳಿದ್ದಂತೆ ದುಃಖತಪ್ತರಾದ ಜನರಿಗೆ ಸುಖಿಗಳನ್ನಾಗಿ ಮಾಡಲು ಹಾಗೂ ಅವರಿಗೆ ಭೋಗ ವಿಲಾಸಗಳನ್ನು ನೀಡಲು ಈ ಇಬ್ಬರೂ ಅವತರಿಸಿದ್ದಾರೆ. ಶಾರದೆ–ಗಣೇಶರಿಬ್ಬರೂ ನನ್ನ ತಾಯಿ–ತಂದೆಯರು ನಿಕೃಷ್ಟನಾದ ಅಪರಿಚಿತನಾದ ನನ್ನನ್ನು ತಾವು ಕೃಪೆ ಮಾಡಿ ಪ್ರಖ್ಯಾತನನ್ನಾಗಿ ಮಾಡಿದಿರಿ ನನ್ನ ಭಾಗ್ಯಕ್ಕೆ (ಎಣೆಯಿಲ್ಲ) ಧನ್ಯವಾಯಿತು.

ಕಾನಡಾ ರಾಗದಲ್ಲಿಯೆ ಮತ್ತೆ ಎರಡು ಗೀತಗಳಲ್ಲಿ ಸರಸ್ವತಿ ಗಣಪತಿಯರನ್ನು ಪ್ರತ್ಯೇಕವಾಗಿಯೂ ಸ್ತುತಿಸಿದ್ದಾನೆ.

'ಸರಸ್ವತಿ ಗೋರೀ ಜೈಸೆ ಗಜದಂತ ಪೋತರೀ
ಕೋ ಕಸ ಸುತಾರೆ ಸಂವಾರೆ ಬನಾ
ಯಾಕಾರಣ ಗಣಪತಿ ದೀನೋಂ ಮಾನ
ಮಾತಂಗ ಮುಖ ಸೋ ರೂಪ ಕೀನೋ ಅಪನಾ

ಗೌರವರ್ಣದ ಸರಸ್ವತಿಯು ಹಸ್ತಿದಂತದಿಂದಲೇ ಮಾಡಿದ ಪುತ್ಥಳಿಯಂತೆ ಇದ್ದಾಳೆ. ಅವಳನ್ನು ಕಡೆದವನು ಯಾವನೋ, ಅಂತೆಯೇ (ಹಸ್ತದಂತದ ಬಣ್ಣದ ಸರಸ್ವತಿ) ಗಣಪತಿಯು ಆನೆಗೆ ಮರ್ಯಾದೆ ಕೊಟ್ಟು ಅದರ ಮುಖವನ್ನೇ ತನ್ನ ಮುಖವನ್ನಾಗಿ ಮಾಡಿಕೊಂಡಿದ್ದಾನೆ.

ಗಣಪತಿ ತುಮ ರೂಪಕೀ ತನಕ
ಜೋತ ಮಾನೋ ಸೂರ ಜಗಮಗೆ ಋತು ಬಸಂತ
ಸುದಿಷ್ಟ ಸಾದಿಷ್ಟ ಭವಿ ವಿನಾಯಕ ಮನೋಹರ
ಸನ್ಮುಖ ದೇಖನ ಕಠಿನ ಸಾವಕ ನೈನ ಪಂಥ
ಚಿಂತಾ ಛಾಈ ಚಂದರಮುಖ ಕಲಂಕ
ಅಸ್ತುತೀ ತೇರೀ ಸುನೇ ಕಂಥ
ಇಬ್ರಾಹಿಮ ಆಖೆಂ ನೌರಸ ಗನೇಶ ಪದ
ಗಾವತ ಚೋಂಪ ಸೇವಕ ಕಲಾವಂತ'

ಗಣಪತಿಯ ಮುಖದ ಕಿಂಚಿತ್ ತೇಜವೂ ಕೂಡ ವಸಂತ ಋತುವಿನ

ಸೂರ್ಯನಷ್ಟು ಪ್ರಕಾಶಮಾನವಾಗಿದೆ. ಆತನ ದೃಷ್ಟಿ ದಯಾಳು, ಹಾಗೂ ಸಮತೆಯದ್ದಾಗಿದೆ. ಆತನ ಎರಡನೆಯ ಹೆಸರು ವಿನಾಯಕ ಎಂದಾಗಿದೆ. ಇಬ್ರಾಹಿಮನು ಗಣೇಶನ ಸ್ತುತಿಯಲ್ಲಿಯೇ ನೌರಸವನ್ನು ಬರೆಯುತ್ತಿದ್ದಾನೆ. ಅವುಗಳನ್ನು ಕಲಾವಂತರು ಬಹು ಉತ್ಸಾಹದಿಂದ ಹಾಡುತ್ತಾರೆ.

b. ಕಲಬುರ್ಗಿಯ ಸಂತ ಬಂದಾ ನವಾಜರ ಸ್ತುತಿ :

ಮೂರು ಗೀತಗಳಲ್ಲಿ ಇಬ್ರಾಹಿಮನು ಕಲಬುರ್ಗಿಯ ಸಂತ ಬಂದಾನವಾಜರನ್ನು ಸ್ತುತಿಸಿದ್ದಾನೆ.

ಹಜರತ ಮುಹಮ್ಮದ ಜಗತ್ತರ ಗುರ ಗುಸಾಯಿ
ತುವ ದರಗಹ ಚುಮಕ ಮೇರೋ ಮನಸಾರ

ಹಜರತ ಮುಹಮ್ಮದ ಗೇಸೂ ದರಾಜರು ಜಗತ್ತಿನ ಗುರುಗಳು, ಅವರ ಸಮಾಧಿಯು ಇಬ್ರಾಹಿಮನ ಮನಸ್ಸನ್ನು ಚುಂಬಕದಂತೆ ಎಳೆಯುತ್ತದೆ. ಮೂರು ಲೋಕಗಳು ಅವರ ನಾಮವನ್ನು ಜಪಿಸುತ್ತಿವೆ. ಅವರು ಈಶ್ವರನ ಅವತಾರವೇ ಆಗಿದ್ದಾರೆ. ಕೆಲವರು ಆನೆ ಕುದುರೆಗಳನ್ನು ಕೆಲವರು ಮುತ್ತುರತ್ನಗಳನ್ನು ಇನ್ನು ಕೆಲವರು ಸುಗ್ರಾಸ ಭೋಜನ, ಇರಲು ಅರಮನೆಗಳನ್ನು ಬಯಸಿದರೆ ಇಬ್ರಾಹಿಮನು ಮಾತ್ರ ಸಯ್ಯದ ಮುಹಮ್ಮದರಿಂದ ಉತ್ತಮ ವಿದ್ಯೆಯನ್ನು ದಾನ ಧರ್ಮಗಳ ಮನಸ್ಸನ್ನು ಕೊಡುವಂತೆ ಪ್ರಾರ್ಥಿಸುತ್ತಾನೆ.

ಇದರಿಂದ ಇಬ್ರಾಹಿಮನ ವಿದ್ಯೆಯ ಕುರಿತಾದ ಆಸ್ಥೆ ಹಾಗೂ ಧಾನ-ಧರ್ಮಗಳ ಚಿಂತನೆಯ ಅರಿವಾಗದೆ ಇರದು. ಇನ್ನೊಂದು ಗೀತೆಯಲ್ಲಿ ಅವರನ್ನು ಅವರ ಸಮಾಧಿಯನ್ನು ಸುಂದರವಾಗಿ ವರ್ಣಿಸಿದ್ದಾನೆ.

'ಸಯ್ಯದ ಮುಹಮ್ಮದ ಮೇರೆ ದಿಲ ಪರ ನಾಂವ
ಜ್ಯೂ ರಸೂಲ ಕರ ಲಿಖೆ ಅರ್ಶತಾಂವ

ಆಕಾಶದಲ್ಲಿ ಪೈಗಂಬರರ ಹೆಸರನ್ನು ಸ್ಥಿರವಾಗಿ ಸ್ಥಾಪಿಸಿದಂತೆ ಇಬ್ರಾಹಿಮನ ಮನದಲ್ಲಿ ಸಯ್ಯದ ಮುಹಮ್ಮದರ ಹೆಸರು ಅಂಕಿತವಾಗಿದೆ. ಅವರ ಸಮಾಧಿಯ ಗುಮ್ಮಟವು ಚಿಕ್ಕ ಮದೀನೆಯಂತೆ ಕಾಣುತ್ತದೆ. ಅವರು ನಬಿಯ ವಂಶಜರು, ದೊಡ್ಡ ಗುರುಗಳು ಎಂದು ಮುಂತಾಗಿ ಸ್ತುತಿಸುತ್ತ ಅವರ ಕೃಪೆಯಿಂದ ಇಬ್ರಾಹಿಮನ ಪಾಪಗಳೆಲ್ಲ ಪರಿಹಾರವಾಗುತ್ತವೆ. ಮತ್ತೊಂದು ಗೀತೆಯಲ್ಲಿ

ಮಖ್ದೂಮ ಸಯ್ಯದ ಮುಹಮ್ಮದ ಹುಸೈನಿ ಗೇಸೂ ದರಾಜ
ಆಶೀಕ ಶಹಬಾಜ ಸರಫರಾಜ

ಎಂದು ಸ್ತುತಿಸುತ್ತಾನೆ.

ಛಿ. ಸ್ವ–ಪರಿಚಯ :

ಕಿತಾಬೆ–ನೌರಸ ಒಂದು ಕವನ ಸಂಗ್ರಹವಾಗಿದ್ದರೂ ಅದರಲ್ಲಿ ಇಬ್ರಾಹಿಮನು ಹಲವಾರು ಪದ್ಯಗಳಲ್ಲಿ ತನ್ನ ಕುರಿತು, ತನ್ನ ಹೆಂಡತಿ ಚಾಂದ ಸುಲ್ತಾನಳು, ತನ್ನ ಆನೆ, ತನ್ನ ತಂಬೂರಿ, ತಾನಿರುವ ಏಳು ಮಹಲಿನ ಅರಮನೆ, ಹಾಗೂ ತಾನೆ ಕಟ್ಟಿಸಿದ ನವರಸಪುರ, ಅಲ್ಲಿಯ ಗಾಯಕರು ಇತ್ಯಾದಿಗಳ ವಿಷಯವನ್ನು ನಮೂದಿಸಿದ್ದಾನೆ.

ಇಬ್ರಾಹಿಮನು ತನ್ನ ಕುರಿತು ಅಲ್ಲಲ್ಲಿ ಹೇಳಿರುವನಾದರೂ ಮೂರು ಗೀತೆಗಳಲ್ಲಿ ತನ್ನ ಸ್ಪಷ್ಟ ಚಿತ್ರವನ್ನು ಕೊಡುತ್ತಾನೆ.

‘ಏಕ ಕರ ದಂಡೀ ವಾದನ ದೂಜೆ ಪಾನೀ ಪುಸ್ತಕ ಪೇಖತ
ನೌರಸ ಗಾವತ ಉತಪತಿ

ಒಂದು ಹಸ್ತದಲ್ಲಿ ಬಾರಿಸಲು ‘ದಂಡಿ’ ವಾದ್ಯವಿದೆ. ಇನ್ನೊಂದು ಕೈಯಲ್ಲಿ ಪುಸ್ತಕವಿದೆ. ಅದನ್ನು ನೋಡುತ್ತ ನವರಸಗಳ ಉತ್ಪತ್ತಿಯಾಗುವಂಥ ಗೀತೆಗಳನ್ನು ಹಾಡುತ್ತೇನೆ.

‘ಕೇಸರೀ ವಸ್ತ್ರ ದಸನ ಶಾಮ ನಖ ಲಲಾಈ ಮಿಹಂದೀ
ಗುನೀ ಪಿರತೀ

ಕೇಸರೀ ವಸ್ತ್ರಗಳನ್ನು ಧರಿಸಿದ್ದೇನೆ, ಹಲ್ಲುಗಳು ಶಾಮವರ್ಣದವುಗಳು, ಉಗುರಿಗೆ ಮೆಹಂದೀ ಹಚ್ಚಿದೆ. ಗುಣೀ ಜನರೆಂದರೆ ನನಗೆ ತುಂಬ ಪ್ರೀತಿ ಇದೆ.

ಕಂಠ ಥಾಲ ಫಟಿಕ ಜಪಮಾಲ ನಗರ ವಿದ್ಯಾಪುರೀ
ವಾಹನ ಹತ್ತೀ

ಇಬ್ರಾಹಿಮಕೊ ಗೋತ ಪಿತಾ ದೇವ ಗುರು ಗಣಪತಿ
ಮಾತಾ ಪವಿತ್ರರ ಸರಸುತೀ

ಕಂಠದಲ್ಲಿ ಉತ್ತಮ ಸ್ಫಟಿಕಗಳ ಜಪ ಮಾಲೆ ಇದೆ. ಇರುವ ಸ್ಥಳ ವಿದ್ಯಾಪುರಿ (ವಿಜಾಪುರ) ವಾಹನವು ಆನೆ. ಇಬ್ರಾಹಿಮನ ಸಂಬಂಧಿಗಳೆಂದರೆ ತಂದೆಯಾದವನು ದೇವಗುರುವಾದ ಗಣಪತಿ ತಾಯಿ ಪವಿತ್ರಳಾದ ಸರಸ್ವತಿ ಎಂದು ಹೇಳುತ್ತಾನೆ.

ಇನ್ನೊಂದು ಗೀತೆಯಲ್ಲಿ ಆತನು ತನ್ನ ದೈನಂದಿನ ಚಟುವಟಿಕೆ (ಕಾರ್ಯಕ್ರಮ) ಗಳನ್ನು ವಿವರಿಸುತ್ತಾನೆ.

'ಪ್ರಥಮ ಸಿಂಧ್ಯಾ ಕರ (ಗೀತ ೪೯)

ಮೊದಲು ಗಂಗಾ ಜಲದಲ್ಲಿ ಸ್ನಾನ ಮಾಡಿ ಸರ್ವಾಂಗಗಳನ್ನು ಪವಿತ್ರಗೊಳಿಸಿ ಸ್ವಚ್ಚವಾದ ವಸ್ತ್ರಗಳನ್ನು ಧರಿಸುತ್ತಾನೆ. ಹಾಗೂ ಒಂದು ಶಾಂತ ಸ್ಥಳದಲ್ಲಿ ಕುಳಿತು ಕೈಯಲ್ಲಿ ಸ್ಫಟಿಕ ಜಪಮಾಲೆಯನ್ನು ಧರಿಸಿ ಜಪ ಮಾಡುತ್ತಾನೆ. ಆತನು ಶ್ರೀ ಸರಸ್ವತಿಯ ಶುಭನಾಮವನ್ನು ಜಪಿಸುತ್ತಿರುವಂತೆ ನವರಸಗಳಲ್ಲಿ ಸರಸ ರಂಗ ಬರುತ್ತದೆ. ಆಗ ಇಬ್ರಾಹಿಮನು ಕೈ ಜೋಡಿಸಿ ದಂಡವತ್ ಪ್ರಣಾಮ ಮಾಡುತ್ತಾನೆ. ಮತ್ತು ಆತನ ರೋಮ ರೋಮಗಳೆಲ್ಲ ಪುಳಕಿತವಾಗಿ ಉತ್ಸಾಹದ ಬುಗ್ಗೆ ಏಳುತ್ತವೆ'.

ಮತ್ತೊಂದು ಪದ್ಯದಲ್ಲಿ (ಗೀತ ೫೦) 'ಸರಸ್ವತಿಯ ಉಪಾಸಕನಾದ ಆತನು ರಾತ್ರಿಯಲ್ಲಿ ನವರಸಗಳ ಗೀತಗಳನ್ನು ಹಾಡಿದಾಗ 'ಹಾಹಾ ಹೂಹೂ' ಗಂಧರ್ವರು ಬಂದು ಆ ಗೀತಗಳನ್ನು ಮೂರೂ ಲೋಕಗಳಲ್ಲಿ ಹಾಡುತ್ತಾರೆ. ಅದನ್ನು ಕೇಳಿ ಎಲ್ಲ ಪಶು ಪಕ್ಷಿಗಳು ಆನಂದ ಪಡುತ್ತವೆ. ಮತ್ತು ವನ್ಯ ಪ್ರಾಣಿಗಳು ಕೂಡ ಆನಂದಿತರಾಗಿ ಓಡಿ ಬರುತ್ತವೆ. ಇಬ್ರಾಹಿಮನು ನವರಸಗಳ ಗೀತೆಗಳನ್ನು ಹಾಡುತ್ತಿದ್ದರೆ, ಆತನಿಗೆ ಜಗದ್ಗುರು ನಾದಮೂರ್ತಿ ಬಿರುದುಗಳನ್ನು (ಜನ) ಕೊಡುತ್ತಾರೆ!

i. ಹೆಂಡತಿ :

ಹೀಗೆ ತನ್ನ ಕುರಿತು ಹೇಳಿದ ಇಬ್ರಾಹಿಮನು ತನ್ನ ಹೆಂಡತಿಯ ಕುರಿತೂ ಐದು ಗೀತೆಗಳಲ್ಲಿ ಹೇಳಿದ್ದಾನೆ.

"ಇಬ್ರಾಹಿಮ ಸಬ ಸುಂದರೀ ದೇಖ್ಯಾ ಯೋ ಲಚ್ಛನ ಹೈ ಕಹಾಂ
ಜಾತ ಚಾಂದ ಸುಲತಾನ ನಾಂವ ಬೀಬೀ ಮುಲ್ಕೀ ಜಹಾನ"

ಇಬ್ರಾಹಿಮನು ಸುಂದರ ಸ್ತ್ರೀಯರನ್ನೆಲ್ಲ ನೋಡಿದ್ದಾನೆ. ಆದರೆ ಆತನ ರಾಣಿಯಲ್ಲಿದ್ದ ಲಕ್ಷಣಗಳೆಲ್ಲಿ ಇವೆ? ಎಂದು ಕೇಳುತ್ತಾನೆ. ಅವಳಿಗೆ ಚಾಂದ ಸುಲ್ತಾನ ಎಂಬ ಬಿರುದು ಇದೆ. ಅವಳ ಹೆಸರು 'ಬೀಬಿ ಮುಲ್ಕೀ ಜಹಾಂ' ಅವಳಿಗಾಗಿ ಕಟ್ಟಿದ ಪ್ರಾರ್ಥನಾ ಮಂದಿರ ಮುಲ್ಕೀ ಜಹಾಂ ಮಸ್ಜಿದ' ಅರಕಿಲ್ಲೆಯ ಎದುರಿಗೆ ಇಂದಿಗೂ ಇದೆ. ಸುಂದರ ವಾಸ್ತು ರಚನೆಗಳಲ್ಲಿ ಅದೂ ಒಂದಾಗಿದೆ.

ಮತ್ತೊಂದು ಗೀತೆಯಲ್ಲಿ ಅವಳು ಹೇಗಿದ್ದಾಳೆ ಎಂಬುದನ್ನು ಚಿತ್ರಿಸುತ್ತಾನೆ.

'ಚತುರ ಚಿತಾರೀ ಚಿತ್ರ ಚಿತಾರೆ
ಗಗನ ಕಾಗರತ ಸೋಮ ಮುಹರಾ ದೇತಾರೆ'

ಒಬ್ಬ ಚತುರ ಚಿತ್ರಕಾರನು ಚಿತ್ರವನ್ನು ಬಿಡಿಸುತ್ತಾನೆ. ಆಕಾಶವೇ ಆತನ ಕಾಗದ, ಚಂದ್ರನೆ ಆ ಕಾಗದವನ್ನು 'ಪಾಲಿಶ್' ಮಾಡುತ್ತಾನೆ.

'ಸುರ ಕನಕ ಜಲ ಧೋಲ ಸಂವಾರೆ
ಪರಚತ ಕಿಯೆ ಲಿಖೆ ಲಿಖನ ಹಾರೆ
ತುಮರೇ ಧರೇ ಝುಮಕೆ ಸಾರೆ ಸತಾರೆ
ಧನಿ ಯೊ ಅನಹಾರ ಜೀಓ ಮುಲ್ಕೀ ಜಹಾರೀ
ಸುಂದರ ಸಮುದ್ರ ಸಿಂಗಾರ ಕರತಾರ ರೇತಾರೀ
ಇಬ್ರಾಹಿಮ ಅಖೇಂ ಛಟಕ ಸರ್ವ ಬನಿತಾ ರೀ'

ಸೂರ್ಯನು (ಚಿತ್ರಕ್ಕಾಗಿ) ಬಂಗಾರದ ನೀರನ್ನು ಬೆರಸಿ ಬಣ್ಣವನ್ನು ತಯಾರಿಸುತ್ತಾನೆ.

ಅನಂತರ ಚಿತ್ರಕಾರನು ಬಣ್ಣದ ಪರೀಕ್ಷೆಯನ್ನು ಮಾಡಲು ಗಗನರೂಪದ ಕಾಗದದ ಮೇಲೆ 'ಬಿಂದು'ವನ್ನಿಡುತ್ತಾನೆ. ಆತನು ಇಟ್ಟ ಬಿಂದುಗಳೇ ಚುಕ್ಕೆಗಳಾಗಿ ಹೊಳೆಯುತ್ತಿವೆ. ಈ ಹೋನಹಾರ ರಾಣಿ ಧನ್ಯಳು. ಮುಲ್ಕೀ ಜಹಾ ಚಿರಾಯುವಾಗಿರಲಿ. ಸೃಷ್ಟಿಕರ್ತನು ಅವಳನ್ನು ಶೃಂಗಾರದ ಸಮುದ್ರವನ್ನಾಗಿ ಮಾಡಿದ್ದಾನೆ. ಉಳಿದೆಲ್ಲ ಸ್ತ್ರೀಯರು 'ಬಿಂದು' ಸಮಾನರಾಗಿದ್ದಾರೆ.

ಕಾನಡಾ ರಾಗದಲ್ಲಿಯ ಮತ್ತೊಂದು ಗೀತೆಯಲ್ಲಿ
ಉದೂತ ಸಕಲ ಕಲಾ ಸಂಪೂರನ ಜೋಂ ತಿಪುರ ಚಾಂದ ಸುಲ್ತಾನ।
ಚಿರಂಜೀವೋ ನೀಕೆಂ ನಿತ ಆನಂದ ಸದಾ ಸರಫ ಸೂರ ಮಾನೋ ನೌರಸ ಮಹಲ ಕಲ್ಯಾಣ ।

ಗಗನೋ ಕಲಂಕೀ ಬರ್ನ್ವೆಂ ಹಮ ನಾಮ ಭಯೋ ಯಾ ಕಾರನ ಖೋಯೋ ಮಾನ ।

ಇಬ್ರಾಹಿಮ ಅಚರಜ ಬೇಸ ತೇಸ ಚಾಂದ ಕಹತ ಜನ ಬಹುರ ಜನಾಯೊ ಘೂಟ ಕೆ ನಿಶಾನ ।

ಎಲ್ಲ ಕಲೆಗಳಲ್ಲಿ ಸಂಪೂರ್ಣವಾಗಿದ್ದು, ಮೂರು ಲೋಕಗಳಲ್ಲಿ ಪ್ರಕಾಶ ಬೀರುವ ಚಾಂದ ಸುಲ್ತಾನಳ ಉದಯವಾಗಿದೆ. ಚಾಂದ ಸುಲ್ತಾನಳು ಚಿರಂಜೀವಿಯಾಗಿರಲಿ, ಅವಳ ಪ್ರತ್ಯೇಕ ಕ್ಷಣಗಳು ಆನಂದದಲ್ಲಿರಲಿ (ಮೀನ ರಾಶಿಯಲ್ಲಿ), ಸೂರ್ಯನ ಉತ್ಕರ್ಷವಾಗುವಂತೆ ಅವಳು ಯಾವಾಗಲೂ ಉತ್ಕರ್ಷಳಾಗಿದ್ದ ನವರಸ ಮಹಲಿನಲ್ಲಿ ಸುಖವಾಗಿರಲಿ, ಆಕಾಶದಲ್ಲಿಯ ಚಂದ್ರನನ್ನು ಪ್ರಪಂಚದ ಜನರು 'ಕಲಂಕಿ' ಎಂದು

ಕರೆಯುತ್ತಾರೆ. ಜನರು ಚಂದ್ರನನ್ನು ಹೇಗಾದರೂ ಕರೆಯಲಿ ಆದರೆ ಇಬ್ರಾಹಿಮನು ತನ್ನ ರಾಣಿ ಅದೇ ಹೆಸರಿನ ಚಾಂದ ಸುಲ್ತಾನಳಲ್ಲಿ ಆಕಾಶದ ಚಂದ್ರನ 'ಕಲಂಕ'ವನ್ನು ಕಾಣುವುದಿಲ್ಲ.

ತೋಡೀ ರಾಗದ ಮತ್ತೊಂದು ಗೀತೆಯಲ್ಲಿ ಬೀಬಿ ಚಾಂದ ಸುಲ್ತಾನಳಷ್ಟು ಸುಂದರ ಸ್ತ್ರೀ ಬೇರೆ ಇಲ್ಲ. ಅವಳು ಧನ್ಯಳು. ಅವಳ ರೋಮ ರೋಮಗಳಲ್ಲಿ ಚತುರತೆ ಇದೆ. ಸಂಪೂರ್ಣವಾಗಿದ್ದಾಳೆ. ಅತಿ ಮಹಾಗುಣಿ ಯಾಗಿದ್ದಾಳೆ. ಅವಳ ಕೀರ್ತಿಯನ್ನು ಕೇಳಿ ಎಲ್ಲ ಸ್ತ್ರೀಯರು ನಾಚಿಕೆಯಿಂದ ಆಶ್ಚರ್ಯ ಚಕಿತರಾಗಿದ್ದಾರೆ. ಅವಳ ವಾಣಿಯು ಅಮೃತದಂತೆ ಸಿಹಿಯಾಗಿದೆ. ಅವಳ ಮನಸ್ಸು ನಿರ್ಮಲವಾಗಿದೆ. ಅವಳು ಏಕಾಗ್ರಚಿತ್ತಳೂ, ಸ್ಥಿರ ಮನದವಳೂ ಆಗಿದ್ದಾಳೆ. ಅವಳತ್ತ ನೋಡಿದ ಇಬ್ರಾಹಿಮನ ಪ್ರತಿ ಕ್ಷಣಗಳೂ ಉಲ್ಹಸಿತವಾಗಿವೆ. ಇಬ್ರಾಹಿಮನ ಕಣ್ಣುಗಳು ಯಾವಾಗಲೂ ಅವಳ ಕೈ ಕಾಲುಗಳ ಪ್ರತಿಯೊಂದು ಚಲನವಲನಗಳನ್ನು ನೋಡುವಲ್ಲಿ ನಿರತವಾಗಿರುತ್ತವೆ.

ii. ತಾಯಿ :

ಹೆಂಡತಿ ಚಾಂದ ಸುಲ್ತಾನಳಂತೆಯೇ ಇಬ್ರಾಹಿಮನು ತನ್ನ ತಾಯಿ ಬಡೀ ಸಾಹಿಬಾಳ ಕುರಿತು ಹೇಳುತ್ತಾನೆ.

ಜಮ ಜಮ ಜೀಯೊ ಬಡೆ ಸಾಹಿಬ ಅಪ ಪೋತ ಸೀಸ ಪರ।
ಜಬ ಲಗ ಅಭರಮ ಅಸುಮತಿ ನಿಸಪತಿ ದೀನಕರ॥

ಬಡೀ ಸಾಹೇಬಳ ಛತ್ರ ಛಾಯೆಯು ತನ್ನ ಪುತ್ರನ ತಲೆಯ ಮೇಲೆ ಯಾವಾಗಲೂ ಇರುತ್ತದೆ. ಸೂರ್ಯ ಚಂದ್ರರು, ಈ ಭೂಮಿ ಇರುವವರೆಗೆ ಅವರು ಜೀವಿಸಲಿ

ಭಾಗ ಬುಲಂದ ದೀನ ದೀನ ಸದಾ ಜೋತ ಮಂಗಲ ಕರೊ ಖುಶಿಯಾ ಜಸನ

ಗೀತ ತಂತ ತಾಲ ಮಂದಲ ರಾಜ ಭೋಗೋ ಆನಂದ ಸೋಂ ಜುಗ ।

ಜುಗ ಭೂಮಂಡಲ॥

ಮನ ಸಾಗರ ದಾನ ಮುಗತಾ ಚಕರಂಗ ಜಗ ಪೂರ ಸರಸ ।

ಸಯ್ಯದ ಮುಹಮ್ಮದ ಪೀರ ಮದತ ಯೊ ರೋಶನಾಈ ದರಸ ।

ಇಬ್ರಾಹೀಮ ಪಾಯಾ ಉತ್ತಮ ಮನಕಾ ನಾರೀ ನೌರಸ ॥

ಅವಳ ಭಾಗ್ಯವು ದಿನದಿನಕ್ಕೆ ಉತ್ಕರ್ಷವಾಗಿರಲಿ, ಅವಳು ಸುಖದಿಂದ ಇರುತ್ತ

ಆನಂದದಿಂದ ಮಹೋತ್ಸವಗಳನ್ನು ಆಚರಿಸುತ್ತಿರಲಿ. ಈ ಮಹೋತ್ಸವಗಳಲ್ಲಿ ಅನೇಕ ಪ್ರಕಾರದ ವಾದ್ಯಗಳು (ತಂತ, ತಾಲ, ಮಂದಲ..) ಉಪಯೋಗವಾಗಲಿ. ಬಡೇ ಸಾಹಿಬರು ಈ ಭೂಮಿಯಲ್ಲಿ ಯುಗಯುಗಾಂತರಗಳಲ್ಲಿ ಆನಂದದಿಂದ ರಾಜಭೋಗವನ್ನು ಅನುಭವಿಸಲಿ ಅವಳ ಮನಸ್ಸು ಸಾಗರದಂತಿದೆ. ಮುತ್ತುಗಳನ್ನು ಬಯಸುವ ವ್ಯಕ್ತಿ ಹಂಸವಾಗಿದೆ. ಯಾರ ದರ್ಶನ ಮಾತ್ರದಿಂದ ಎಲ್ಲೆಡೆ ಪ್ರಕಾಶ ಬೀಳುತ್ತದೆಯೋ ಅಂಥವಳನ್ನು ಸಯ್ಯದ ಮಹ್ಮದ ಗೇಸೂದರಾಜರು ಸಹಾಯ ಮಾಡಲಿ. ಎಲ್ಲ ಸ್ತ್ರೀಯರಲ್ಲಿ ಉತ್ತಮ ಮಣಿಯಂತಿರುವ ನವರಸ ಪೂರ್ಣ ಸ್ತ್ರೀ ಇಬ್ರಾಹಿಮನಿಗೆ ತಾಯಿಯಾಗಿ ದೊರಕಿದ್ದಾಳೆ.

iii. ಸಾತ ಮಂಜಿಲ್ :

ಇಬ್ರಾಹಿಮನು ಸ್ವತಃ ಕಟ್ಟಿಸಿದ ಏಳು ಅಂತಸ್ತಿನ ತಾನು ವಾಸಿಸುವ ಸಾತ್ ಮಂಜಿಲ್ ಬಗೆಗೆ ಕೂಡ ಬರೆದಿದ್ದಾನೆ.

ಬುಲಂದ ಮಹಲ ಸಪ್ತಖಿನ ಸಪ್ತ ದೀನ ಕೀ ಮೂರತ
ಸೋಪಾನ ಕೀನೆ ಘಡಿಯಾಲ ಕೀ ಉಧಮ ಕರ ॥

ಅತಿ ಎತ್ತರವಾದ ಏಳು ಅಂತಸ್ತಿನ ಕಟ್ಟಡವು ಏಳು ದಿನಗಳ ಮೂರ್ತಿಯಾಗಿದೆ. ಅದು ಸಮಯವನ್ನು ತಿಳಿಯಲು ಅತ್ಯಂತ ಪರಿಶ್ರಮ ಪೂರ್ವಕವಾಗಿ ಕಟ್ಟಿದ ಗಡಿಯಾರದಂತಿದೆ.

ಸಪ್ತ ಉಡಗನ ಸಪ್ತಖಿನಕೆ ದೀಪಕ ನಿಹಚೆಕರ ಕರ ಔರ ।
ಸರ್ವ ನಿಚ್ಛಿತರ ಭಏ ಆರತೀ ನೀಛಾವರ ॥

ನಿಶ್ಚಯವಾಗಿಯೂ ಆ ಏಳು ಅಂತಸ್ತಿನ ಕಟ್ಟಡದಲ್ಲಿ ಎಲ್ಲ ನಕ್ಷತ್ರಗಳೂ ಬೆಳಗುತ್ತಿವೆ. ಮತ್ತು ಎಲ್ಲ ನಕ್ಷತ್ರಗಳೂ ಆ ಕಟ್ಟಡದ ಮೇಲೆ ಆರತಿಯನ್ನು ಬೆಳಗುತ್ತಿವೆ.

ಸಪ್ತ ಖಿನ ಸಪ್ತ ಸುರ ಬಾನೀ ಬನಾಈ ಅಮರ ।
ಔರ ಕವಿತ್ತ ಮಾಂಜ ಮಾನೋ ಪಾರಸ ಕೀನೋ ದೀನಕರ ।

ಇಬ್ರಾಹೀಮ ಮುಲ್ಕೀ ಜಹಾ ರಾಗ ರಾಗಿನೀ ಸುರತ ।
ನೌರಸ ಧುನಿ ಸುನಿ ಮುರ್ಛನ ಭಈ ಅಪ್ಸರಾ ಇಂದರ ॥

ಆ ಮಹಲಿನ ಏಳು ಅಂತಸ್ತುಗಳೆಂದರೆ ಏಳು ಸ್ವರಗಳಿದ್ದಂತೆ. ಅದರಿಂದಾಗಿ ಸ್ವರಗಳು ಅಮರವಾಗಿವೆ. ಕವಿತ್ವವು ಸ್ಪರ್ಶಮಣಿಯಂತೆ, ಇಲ್ಲವೆ ಸೂರ್ಯನಂತೆ ಅಲ್ಲಿ ಇಬ್ರಾಹಿಮ ಹಾಗೂ ಆತನ ಹೆಂಡತಿ ಮುಲ್ಕೀ ಜಹಾರು ರಾಗ ರಾಗಿಣಿಯರಂತೆ,

ನವರಸಗಳಲ್ಲಿ ಮಗ್ನರಾಗಿದ್ದಾರೆ. ಅವನ ಆಸ್ಥಾನದ ಸಂಗೀತವನ್ನು ಕೇಳಿ ಇಂದ್ರನ ಅಪ್ಸರೆಯರೂ ಮೂರ್ಛಿತರಾಗಿದ್ದಾರೆ !

ಏಳು ಅಂತಸ್ತುಗಳು, ಏಳು ಸ್ವರಗಳು, ಅಲ್ಲಿಯ ರಾಗ ರಾಗಿಣಿಯರು ಹಾಡುವ ನವರಸ ಗೀತೆ ಹಾಗೂ ಅದರಿಂದಾಗಿ ಇಂದ್ರನ ಅಪ್ಸರೆಯರು ಮೂರ್ಛಿರಾಗುವ ಕಲ್ಪನೆ ಅಪರೂಪದ್ದಾಗಿದೆ.

iv. ತಂಬೂರಿ :

ತಂಬೂರಿಯ ಮೇಲೆ ಇಬ್ರಾಹಿಮನಿಗೆ ಎಲ್ಲಿಲ್ಲದ ಪ್ರೀತಿ. ಅದಕ್ಕೆ, ಮೋತಿಖಾನ ಎಂಬ ಹೆಸರನ್ನು ಕೊಟ್ಟಿದ್ದಾನೆ. ತಂಬೂರಿಯ ಕುರಿತು ಹಲವಾರು ಕಡೆಗೆ ಉಲ್ಲೇಖ ಮಾಡಿದ್ದರೂ ನಾಲ್ಕು ಗೀತಗಳನ್ನು ತಂಬೂರಿಗಾಗಿಯೇ ಮೀಸಲಿಟ್ಟಿದ್ದಾನೆ.

ಮೋತೀಖಾನ ಸಾಗರ ಉಪಮಾ ಪೂರ ।
ತಾ ಪರ ತಂತ ಕಲೋಲ ಲಹೋ ಗೌರ ॥

ಆಸಾವರೀ ರಾಗದ ಈ ಗೀತೆಯಲ್ಲಿ ಮೋತೀಖಾನ ತಂಬೂರಿಯನ್ನು ಸಾಗರಕ್ಕೆ ಹೋಲಿಸಿ ತಂಬೂರಿಯ ತಂತಿಗಳಿಂದ ಹೊರಡುವ ದನಿಯನ್ನು ಸಾಗರದಲ್ಲಿಯ ಸಣ್ಣ ದೊಡ್ಡ ತೆರೆಗಳಿಗೆ ಹೋಲಿಸಿದ್ದಾನೆ.

ಯೋ ಮುಗತಾ ಸಮುದ್ರ ವೊ ಜಲ ಖಾರೇ ।
ಯೆ ಜಲ ಮೀಠೆ ವೊ ಜಲ ಖಾರೇ ।

ವೋ ಪೂರ ಝುಕ ದಾದುರ ಯೊ ಪೂರ ಗುನಿಜನ ।
ಏಕ ಜಲ ಜೀವೂ ಏಕ ವಿದ್ಯಾ ಮನ ॥

ಮೊ ವಿದ್ಯಾ ಅಧಿಕ ಕರಪಾ ಕೀ ಪರವರದಿಗಾರ ।
ಗುರ ಇಬ್ರಾಹೀಮ ತಂಬೂರಕಾರ ॥

ಈ ತಂಬೂರಿಯು (ಮಧುರ ಸ್ವರಗಳ) ಮುತ್ತುಗಳಿಂದ ಕೂಡಿದ್ದರೆ ಆ ಸಮುದ್ರವು ಬರೀ ನೀರಿನಿಂದ ಕೂಡಿದೆ. ಅದರ ನೀರು ಉಪ್ಪಾಗಿದ್ದರೆ, ಇದರ ನೀರು (ಸ್ವರಗಳು) ಸಿಹಿಯಾಗಿವೆ. ಆ ಸಮುದ್ರದಲ್ಲಿ ಕಪ್ಪೆಗಳು ವಟಗುಟ್ಟುತ್ತಿದ್ದರೆ, ಈ ಸಮುದ್ರದಲ್ಲಿ ಗುಣಿ ಜನರು ಹಾಡುತ್ತಾರೆ. ಸಮುದ್ರದ ನೀರಿನಲ್ಲಿ ಪ್ರಾಣಿಗಳಿದ್ದರೆ, ಈ (ತಂಬೂರಿಯ) ಸಮುದ್ರದಲ್ಲಿ ದೇಹಧಾರಿ ವಿದ್ಯೆಯ ಮನಸ್ಸುಗಳಿರುತ್ತವೆ. ನನಗೆ ಅಧಿಕ ವಿದ್ಯೆಯನ್ನು ನೀಡಿ ಸೃಷ್ಟಿಕರ್ತನು ದೊಡ್ಡ ಕೃಪೆ ಮಾಡಿ ನನ್ನನ್ನು (ಇಬ್ರಾಹಿಮ) 'ತಂಬೂರಕಾರ'ನನ್ನಾಗಿ ಮಾಡಿದ್ದಾನೆ.

ಮಲ್ಹಾರ ರಾಗದ ಇನ್ನೊಂದು ಗೀತೆಯಲ್ಲಿ ಮೋತಿಖಾನ ತಂಬೂರಿಯ ಉತ್ಪತ್ತಿಯನ್ನು ಹಾಗೂ ಅದರ ಲಕ್ಷಣಗಳು ಯಾವವು ಎಂಬುದನ್ನು ಹೇಳುತ್ತೇನೆ ಎಂದು ಗೀತವನ್ನು ಪ್ರಾರಂಭಿಸುತ್ತಾನೆ. ತಂಬೂರಿಗೆ ಉಪಯೋಗಿಸಿದ ಕಟ್ಟಿಗೆ ಕಲ್ಪವೃಕ್ಷದಂತೆ ಎಂದು ಮುಂತಾಗಿ ವರ್ಣಿಸುತ್ತಾನೆ.

ಮತ್ತೊಂದು ಗೀತದಲ್ಲಿ ಮೋತೀಖಾನ ತಂಬೂರಿಯ ಝುನನ – ಝುನ್ ಎಂಬ ಧನಿಯೊಂದಿಗೆ ಮೃದಂಗ ತಾಳಗಳ ಜೊತೆಗೆ (ಇಬ್ರಾಹಿಮನು) ನವರಸ ಗೀತಗಳನ್ನು ಹಾಡುತ್ತಾನಂತೆ. ಆಗ ಈ ಪ್ರಪಂಚದಲ್ಲಿ ಕೇವಲ ಎರಡು ವಸ್ತುಗಳು ಸಾಕು. ಒಂದು 'ತಂಬೂರಿ', ಇನ್ನೊಂದು 'ಕಾಮಿನಿ' ಇವೆರಡಿದ್ದರೆ ಸಾಕು. ಇಬ್ರಾಹಿಮನು ಮೋತೀಖಾನ ತಂಬೂರಿಯನ್ನು ಬಾರಿಸುತ್ತಿದ್ದರೆ ಸ್ವರ್ಗ ಹಾಗೂ ಅಮೃತಗಳೂ ತುಚ್ಛವಂತೆ !

ಇನ್ನೊಂದು ಗೀತೆಯಲ್ಲಿ 'ಮೋತೀಖಾನ' ತಂಬೂರಿಯಿಂದ ದೂರವಾಗಿದ್ದ ಘಟನೆಯನ್ನು ನಿರೂಪಿಸುತ್ತಾನೆ.

v . ಆನೆ :

ಇಬ್ರಾಹಿಮನಿಗೆ ತನ್ನ ತಂಬೂರಿ ಮೋತೀಖಾನದಂತೆ, ತನ್ನ ಆನೆ 'ಅತಿಶಖಾನ'ದ ಮೇಲೆ ತುಂಬ ಪ್ರೀತಿ. ಆನೆಯ ಕುರಿತು ಎರಡು ಗೀತಗಳಲ್ಲಿ ವರ್ಣಿಸಿದ್ದಾನೆ.[೪] ಆತನ ಆನೆ ಅತ್ಯಂತ ಚತುರವಾಗಿದ್ದು, ಚಾಣಾಕ್ಷ ಬೇಟೆಗಾರನೂ ಆಗಿದೆ. ಅದು ಶಕ್ತವಾಗಿದೆ ಯಾವಾಗಲೂ ಆನಂದದ ಸ್ವರವನ್ನೆ ನುಡಿಯುತ್ತದೆ. ಅದರ ಸ್ವರವು ತಾಲ ಬದ್ಧವಾಗಿದೆ ಎಂದು ಮುಂತಾಗಿ ವರ್ಣಿಸುತ್ತಾನೆ.

d. ಶೃಂಗಾರ – ವಿರಹ ಗೀತೆಗಳು :

ಕವಿಗಳಿಗೆ ಶೃಂಗಾರ ಹಾಗೂ ವಿರಹಗಳು ಪ್ರಿಯವಾದ ವಿಷಯಗಳು. ಇಬ್ರಾಹಿಮನು ಇದಕ್ಕೆ ಹೊರತಾಗಿಲ್ಲ. ಇಂಥ ವಿಷಯಗಳ ಗೀತಗಳನ್ನು ಬರೆಯುವಾಗ ಕವಿಗೆ ಕಲ್ಪನಾ ಸ್ವಾತಂತ್ರ್ಯವಿದೆ. ಆ ಸ್ವಾತಂತ್ರ್ಯವನ್ನು ಇಬ್ರಾಹಿಮನು ಚೆನ್ನಾಗಿ ಉಪಯೋಗಿಸಿಕೊಂಡಿದ್ದಾನೆ. ಕೆಲವು ಕಡೆಗೆ ಉತ್ತಮ ಕವಿಯ ಲಕ್ಷಣಗಳನ್ನೂ ತೋರಿಸಿದ್ದಾನೆ.

ಭೂಪಾಲಿ ರಾಗದ ಒಂದು ಗೀತೆಶಿರಲ್ಲಿ ಹೇಳುತ್ತಾನೆ.
'ತೇರಿ ಉಪಮಾ ಸುಧಾಂಶು ಲಚ್ಛನ ಚಾಹೆ ಅಮೃತ ದಿಖಾಈ ।
ಮೊ ಚಖ ಚಕೋರ ಜಪತ ಅಪನೀ ಆದಿ ಸಗಾಈ ।

ಇಬ್ರಾಹೀಮ ಮುರ್ಛನ ಭಯೆ ಯೊ ರೀಝೆ ಸುಂದರತಾಈ ।
ಅಧರ ಅಮೃತ ಚಖಾ ಬಹುರಿ ಜಿಲಾ ಈ ॥

ಹೇ ಪ್ರಿಯೆ ನಿನ್ನ ಉಪಮೆಯನ್ನು ಚಂದ್ರನಿಗೆ ಹೋಲಿಸುತ್ತಾರೆ. ನಿನ್ನಲ್ಲಿ ಚಂದ್ರನ ಲಕ್ಷಣಗಳನ್ನು ಕಾಣುತ್ತೇನೆ. ಚಂದ್ರ ಹಾಗೂ ಚಕೋರಗಳ ಸ್ನೇಹ ಸರ್ವಶ್ರುತವಿದೆ. ಚಂದ್ರನ ಕಿರಣಗಳನ್ನು ಸೇವಿಸಿ ಚಕೋರವು ಜೀವಿಸುತ್ತದೆ. ಅದರಂತೆ ನನ್ನ ಕಣ್ಣು ಚಕೋರ, ನಿನ್ನಿಂದ ಅಮೃತ (ಅಧರಾಮೃತ)ದ ಯಾಚನೆಯನ್ನು ಮಾಡುತ್ತಿದೆ. ನಿನ್ನ ಮೋಹಕ ಆಕರ್ಷಕ ರೂಪವು ಇಬ್ರಾಹಿಮನನ್ನು ಮೂರ್ಛಿತನನ್ನಾಗಿ ಮಾಡಿದೆ. ನಿನ್ನ ಅಧರಾಮೃತದ ಆಸ್ವಾದನೆಯಿಂದ ನನಗೆ ಮತ್ತೆ ಜೀವದಾನ ನೀಡು"

ಇನ್ನೊಂದು ದ್ವಿಪದಿಯಲ್ಲಿಯ ಸುಂದರ ಕಲ್ಪನೆ.

'ಕಾಗತ ಸೇತ ನಿರಮಲ ನಯನ ಸುಂದರಾ ಅಖ್ಖರ ಖಿತ ಕೇರ ಕಾಜರ।
ಬೀಚ ಸಿಕ್ಕಾ ತಾರಿಕಾ ಲಖೋಟಿ ಲಪೇಟೆ ತಾ ಪಡಿ ॥

"(ಪ್ರೇಯಸಿಯ) ಸುಂದರ, ನಿರ್ಮಲ ಹಾಗೂ ಶ್ವೇತವರ್ಣದ ಕಣ್ಣುಗಳ ಕಾಗದ, ಅವುಗಳಲ್ಲಿ ಹಚ್ಚಿದ 'ಕಾಡಿಗೆ' ಅಕ್ಷರಗಳು. ಮಧ್ಯ ಕಾಣುವ ಗೊಂಬೆಗಳು ಸಿಕ್ಕಾ, (ಮುದ್ರೆ) ಆದರೆ ಅವುಗಳನ್ನು ಮುಚ್ಚಿದ ಲಕೋಟೆಯೇ ರೆಪ್ಪೆಗಳು !"

ಭೈರವರಾಗದ ಒಂದು ಕೃತಿಯಲ್ಲಿ ಕವಿಯು ತನ್ನನ್ನು ಚಂದ್ರನಿಗೆ ಹೋಲಿಸಿಕೊಂಡದ್ದಾನೆ. ಇಬ್ಬರೂ ಒಂದೇ ನಾವೆಯಲ್ಲಿ ನಡೆದ ಯಾತ್ರಿಕರಂತೆ !

'ಪ್ಯಾರೇ ಚಾಂದಾ ಆಖೂರ ಕಂಥ ದೀನ ದುಈ ದುಖೀ ।
ಮನ ಚಾಹೀ ಸೊ ನಿಸ ಭಈ ಹಮ ತುಮ ರಹೆಂ ಅಬ ಸುಖೀ ॥

ಬುಝಾವೋ ದೀಪಕ ಕೌನ ತರಾಸೋಂ ದೀನಕರ ಆವೇಗಾ ।
ಘರ ಘರ ಛಪ ರಹ ಜಾಸೂಸ ಸಬ ಸುಧ ಪಹುಂಚಾ ವೇಗಾ ।
ಮೋಹ ಘಾಟೀ ತೋ ದೇಖ ಜಬ ಟಾಕ ಧಾವೇಗಾ ॥

ಇಬ್ರಾಹಿಮ ನ ಸೋ ಜಾಗ ಐಸಾ ಪಿಉ ಕಹಾಂ ಪಾವೇಗಾ ।
ಸಿಂಧ್ಯಾ ಕರ ಸಿಂಗಾರ ಲೋಬ ಕಂಠ ಲಾವೇಗಾ ।
ರಾತ ಥೋಢೀ ಮದನ ಬಹುತ ಬನಾ ಉಠ ಜಾವೇಗಾ ॥

ಪ್ರಿಯ ಚಂದ್ರ ನಿನ್ನಲ್ಲಿ ನನ್ನ ಮನದ ಮಾತನ್ನು ಹೇಳುವೆ. ಹಗಲಿನಲ್ಲಿ ನಾವಿಬ್ಬರೂ ದುಃಖಿಗಳು. ನಾವಿಬ್ಬರೂ ಬಯಸುವ ರಾತ್ರಿ ಈಗ ಬಂದಿದೆ. ಈಗ ನಾವಿಬ್ಬರೂ ಸುಖಿಗಳು. ಇದು 'ಮಿಲನ'ದ ರಾತ್ರಿ. ದೀಪವನ್ನು ಆರಿಸು ಎಂದು ಪ್ರಿಯಕರನು

ಪ್ರೇಯಸಿಗೆ ಹೇಳುತ್ತಿದ್ದಾನೆ. ಸೂರ್ಯ ಹೇಗೆ ಬರುತ್ತಾನೆಂದು ಹೇಳಲಿಕ್ಕೆ ಆಗುವುದಿಲ್ಲ. ಮನೆ-ಮನೆಗಳಲ್ಲಿರುವ ದೀಪಗಳು ಆತನ ಗೂಢಚಾರರು ನಮ್ಮ ಮಿಲನದ ಸುದ್ದಿಯನ್ನು ಆತನಿಗೆ (ಸೂರ್ಯನಿಗೆ) ಹೇಳುತ್ತವೆ. ಬೆಳಗು ಹರಿಯಿತೆಂದರೆ ಇದನ್ನೆಲ್ಲ ಬಿಟ್ಟು ಓಡಿ ಹೋಗಬೇಕಾಗುತ್ತದೆ. (ಆದ್ದರಿಂದ) ಇಬ್ರಾಹಿಮ ಮಲಗಬೇಡ, ಎಚ್ಚರದಿಂದಿರು. ಇಂಥ ಪ್ರೇಯಸಿ ಎಲ್ಲಿ ದೊರೆತಾಳು? ಸ್ನಾನಮಾಡಿ ಶೃಂಗರಿಸಿಕೊಳ್ಳು ಅವಳು ನಿನ್ನನ್ನು ಅಪ್ಪಿಕೊಳ್ಳುತ್ತಾಳೆ. ರಾತ್ರಿ ತುಂಬ ಕಡಿಮೆ ಅವಧಿಯದು 'ಮದನನೋ ಬಹಳ, ಪ್ರೇಯಸಿ ಎದ್ದು ಹೋಗುತ್ತಾಳೆ'.

ಇಂಥ ಹಲವಾರು ಸುಂದರ ಕಲ್ಪನೆಗಳನ್ನು ಕೊಡುವಲ್ಲಿ ಇಬ್ರಾಹಿಮನು ಯಶಸ್ವಿಯಾಗಿದ್ದಾನೆ.

ದೇಸೀ ರಾಗದ ಇನ್ನೊಂದು ಗೀತೆಯಲ್ಲಿ ಒಂದು ತರುಣಿಯ ಚಿತ್ರವನ್ನು ಕೊಡುತ್ತಾನೆ. ಅಲ್ಲಿ ಕಾಮುಕತೆ ಇಲ್ಲ. ಅವಳ ಸೌಂದರ್ಯ ಇವನಲ್ಲಿ ಭಕ್ತಿಯನ್ನು ಮೂಡಿಸುತ್ತದೆ. ಸುಂದರ ಕಲ್ಪನೆ.

"ಏಕ ನಾರ ದೇಖ್ಯಾ ಖಡೀ ಸಾಮನೀ ।
ಪೂನಮ ರಾತಕೀ ಮಕರ ಚಾಂದನೀ ।
ಯಾ ಝುಮಕೆ ಮೇಘ ಋತ ಸೌದಾಮಿನೀ ॥
ಬಹು ರೂಪ ಖೇಲೆ ಖೇಲ ಕಾಮಿನೀ ।
ಹೋ ನಾ ಜಾನೂಂ ತುರಕನೀ ಬರಹಾಮಿನೀ ।
ಆಪೆಂ ನರರೂಪ ಆಪೆಂ ರೂಪ ಸುಹಾಗಿನೀ ।
ದಸರೂಪ ಈಶ್ವರ ಕೀ ಲ್ಯಾಈ ನಿಶಾನೀ ।
ಚಿತೂರೀ ಚಿತರ ನ ಸಕೆ ಹೊಯ ಮಾನೀ ।
ಜ್ಯೂಂ ಮೌಜ ಪರ ಮೌಜ ಅವೆ ಪಾನೀ ।
ಬೋಲೀ ಬಾತಾಂ ಶೀರೀಂ ಜಬಾನೀ ।
ಇಬ್ರಾಹಿಮ ಮಿಲತೆ ಚರಣ ಧರೂಂ ಪೇಶಾನೀ ॥"

"ಎದುರಿಗೆ ನಿಂತ ಒಬ್ಬ ಸ್ತ್ರೀಯು ಸ್ವಾಮಿನಿಯಂತೆ ಕಾಣುತ್ತಿದ್ದಾಳೆ. ಹುಣ್ಣಿಮೆಯ ರಾತ್ರಿಯ ಮಕರಚಂದ್ರ (ಮಾಘ ಮಾಸದ ಪೂರ್ಣಿಮೆಯ ಬೆಳದಿಂಗಳು ಅದರ ವಿಶೇಷವೆಂದರೆ ತುಸು ಹೊತ್ತು ಕಾಣುತ್ತದೆ ಮತ್ತೆ ಕೆಲಹೊತ್ತು ಮೇಘಾಚ್ಛಾದಿತವಾಗುತ್ತದೆ) ನ ಬೆಳದಿಂಗಳ ತೇಜವಿದೆ. ಅದು ಒಮ್ಮೊಮ್ಮೆ ವರ್ಷಾಋತುವಿನಲ್ಲಿಯ 'ಮಿಂಚಿನಂತೆ ಕಾಣುತ್ತದೆ. ಆ ಆಕರ್ಷಕ ಸ್ತ್ರೀಯು ಹಲವು ವಿಧಧ ಆಟಗಳನ್ನು ಆಡುತ್ತಿದ್ದಾಳೆ. ಅವಳು ಮುಸಲ್ಮಾನಳೋ (ತುರ್ಕನಿ) ಬ್ರಾಹ್ಮಣಳೋ ನನಗೆ ಗೊತ್ತಿಲ್ಲ. ಆದರೆ ಅವಳಲ್ಲಿ

ನರ ಹಾಗೂ ಮುತ್ತೈದೆ ಸ್ತ್ರೀಯ ಎರಡೂ ರೂಪಗಳೂ ಇವೆ. ಈಶ್ವರನ ಹತ್ತು ಅವತಾರಗಳ ಲಕ್ಷಣಗಳೂ ಅವಳಲ್ಲಿವೆ. ಅಂಥ ಸುಂದರ ಸ್ತ್ರೀಯ ಚಿತ್ರವನ್ನು ಯಾವ ಚಿತ್ರಕಾರನೂ ಅಷ್ಟೇ ಏಕೆ? (ನಮ್ಮ) 'ಮಾನಿ' (ಸಮಕಾಲೀನ ವಿಖ್ಯಾತ ಚಿತ್ರಕಾರ) ಕೂಡ ಅವಳ ಚಿತ್ರವನ್ನು ಬಿಡಿಸಲಾರ. ಅವಳ ಸೌಂದರ್ಯದ ಕಾಂತಿಯ ನೀರಿನ ಮೇಲಿನ ತೆರೆಯಂತೆ ಅಲೆ ಅಲೆಯಾಗಿ ಬರುತ್ತಿದೆ. ಅವಳು ತನ್ನ ಮಧುರವಾಣಿಯಿಂದ ಸವಿಯಾದ ಮಾತುಗಳನ್ನಾಡುತ್ತಿದ್ದಾಳೆ. ಅವಳು ಒಂದು ವೇಳೆ ಇಬ್ರಾಹಿಮನಿಗೆ ದೊರೆತರೆ ಅವನು ಅವಳ ಪಾದಗಳ ಮೇಲೆ ತನ್ನ ಹಣೆಯನ್ನು ಇಡಬಯಸುತ್ತಾನೆ."

ಇಬ್ರಾಹಿಮನ ಈ ಕಲ್ಪನೆ ಆತನ ವ್ಯಕ್ತಿತ್ವದ ಕುರಿತೂ ಕಿಂಚಿತ್ ಬೆಳಕು ಚೆಲ್ಲುತ್ತದೆ. ಹಿಂದು ಧರ್ಮ ಮತಗಳ ಬಗ್ಗೆ ಇದ್ದ ಅವನ ಆಸ್ಥೆಯನ್ನು ಇದು ದೃಢಪಡಿಸುತ್ತದೆ. ಪುರಾಣಗಳಲ್ಲಿ ಬರುವ ಮೋಹಿನೀ ರೂಪ. ಅಥವಾ ಈಶ್ವರ, ಅರ್ಧನಾರೀ ನಟೇಶ್ವರರ ರೂಪಗಳ ಚಿತ್ರಣ ಇದಾಗಿರಬೇಕು. ಅಥವಾ ಅಂದು ಪ್ರಚಲಿತದಲ್ಲಿದ್ದ ಶಕ್ತಿಯ ಉಪಾಸನೆ, ಶಕ್ತಿದೇವತೆಯ ಚಿತ್ರವೂ ಇದಾಗಿರಬೇಕು. ಈ ಗೀತೆಯಲ್ಲಿ 'ಮಾನಿ' ಎಂಬ ವಿಖ್ಯಾತ ಚಿತ್ರಕಾರನ ಹೆಸರನ್ನು ಹೇಳುತ್ತಾನೆ. 'ಮಾನಿ' ಸಮಕಾಲೀನ ವಿಖ್ಯಾತ ಚಿತ್ರಕಾರನಾಗಿರಬೇಕು. ದಖಣಿ ಚಿತ್ರಕಲೆಯ ಅಭ್ಯುದಯಕ್ಕೆ ಅವನ ಕೊಡುಗೆ ಅಭ್ಯಾಸಾರ್ಹವಾಗಿದೆ.

ತೋಡೀ ರಾಗದ ಒಂದು ಗೀತೆಯಲ್ಲಿ ಮನುಷ್ಯ ದೇಹದ ಸುಂದರ ಚಿತ್ರಣವಿದೆ.

ಶರೀರ ಶೀಶಾ ನಿರ್ಮಲ ಪೂರ ರಗತ ದಾಖ ಶರಾಬ ।
ಮದನ ಸದಾ ಮಸ್ತ ಮತವಾಲಾ ಬೋಜನ ದಿಲ ಕಬಾಬ ॥
ದೀಪಕ ಸೊ ಪರಾನ ಬಾದವಾನ ಸಂವಾರ್ಯಾ ತನ ।
ಕಾಜರ ಕೇರೇ ಝೂಟ ಧುವಾ ದಿಸೆ ಅಂಜನ ॥
ತೇಲ ಶರಾಬ ರಗಾಂ ಬತ್ತಿಯಾಂ ಧರೆ ತೋಲಾ ಮನ ।
ಇಬ್ರಾಹಿಮ ಸುಲಗಾಎ ಸದಾ ಜನಮ ತೆ ಸರ ಪವನ ॥

ಶರೀರವು ನಿರ್ಮಲವಾದಂಥ ಒಂದು ಬಾಟಲಿಯಾಗಿದ್ದು ಅದರಲ್ಲಿ ರಕ್ತ ರೂಪದ ದ್ರಾಕ್ಷಾರಸ ತುಂಬಿದೆ. ಮದವೇರಿದ ಮದನನು ಈ ಶರಾಬನ್ನು ಕುಡಿಯುತ್ತಾನೆ. 'ಹೃದಯ'ದ ಕಬಾಬನ್ನು ತಿನ್ನುತ್ತಾನೆ. ಪ್ರಾಣವೆಂದರೆ ಒಂದು 'ದೀಪ', ಅದು ಶೃಂಗರಿಸಿದ ಶರೀರದ ಮೇಲೆ ಇಟ್ಟ ಕಂದೀಲಾಗಿದೆ. ಮನಸ್ಸು ಕೂಡ ಒಂದು ದೀಪ, ಅದರಲ್ಲಿ ಶರಾಬ ರೂಪದ ಎಣ್ಣೆ, ನರ–ನಾಡಿ ರೂಪದ ಬತ್ತಿಗಳು ಇಬ್ರಾಹಿಮನು ಜನ್ಮದಾರಭ್ಯ ಅವುಗಳನ್ನು 'ಸ್ವರ' ರೂಪದಿಂದ ಸುಡುತ್ತಿರುತ್ತಾನೆ !"

ಇಂಥ ವಿವಿಧ ಹೋಲಿಕೆಗಳ ಹಲವಾರು ಗೀತೆಗಳನ್ನು ಇಬ್ರಾಹಿಮನು ರಚಿಸಿದ್ದಾನೆ. ಇಬ್ರಾಹಿಮನು ಒಂದು ಗೀತೆಯಲ್ಲಿ ವಿರಹದ ಪ್ರತ್ಯೇಕ ಕ್ಷಣಗಳನ್ನು ಕೋಟಿ ಕೋಟಿ ರಾಜ್ಯಗಳ ಒಡೆತನದ ಸುಖವನ್ನು ಪಡೆಯುತ್ತಾನಂತೆ. ಹಾಗೂ ಆ ಸುಖ ತನಗಿರಲಿ ಆದರೆ ಗಾಳಿಯೆ ನೀನು ಮಾತ್ರ ದೂರ ಹೋಗು ಏಕೆಂದರೆ, ವಿರಹಾಗ್ನಿಯಿಂದ ನಾನು ಬೆಂದು ಹೋಗುವ ಅಂಜಿಕೆ ನನಗಿಲ್ಲ. ನಿನ್ನಿಂದ ಆ ವಿರಹಾಗ್ನಿ ಪಸರಿಸಿ ಇಡೀ ಪ್ರಪಂಚವೇ ಸುಟ್ಟು ಹೋದೀತೆಂಬ ಅಂಜಿಕೆ ನನಗಿದೆ. ಎನ್ನುತ್ತಾನೆ.[೧] ಇನ್ನೊಂದು ಗೀತೆಯಲ್ಲಿ, 'ಪ್ರಪಂಚದಲ್ಲಿ ವಿರಹ ವೇದನೆಗೆ ಬೇರೆ ಯಾವ ಔಷಧಿಗಳೂ ಇಲ್ಲ. ಆತನ ಪ್ರೇಯಸಿ ಕ್ಷಣಮಾತ್ರ ಅವನತ್ತ ಪ್ರೇಮದಿಂದ ನೋಡುವುದೇ ಅಮೃತ ಸಮಾನವಂತೆ.'[೨]

e . ರಾಗಮಾಲಿಕೆ :

'ಕಿತಾಬ ಎ-ನೌರಸ' ಒಂದು ಕವನ ಸಂಕಲನವಾದರೂ ಅದು ಹಿಂದುಸ್ತಾನಿ ಸಂಗೀತವನ್ನು ಅನ್ಯಭಾರತೀಯರಿಗೆ ತಿಳಿಸುವ ಪ್ರಯತ್ನವೆಂದು ಆಗಲೆ ಹೇಳಿಯಾಗಿದೆ. ಹದಿನೇಳು ರಾಗಗಳಲ್ಲಿ ೫೯ ಗೀತೆಗಳನ್ನು ೧೭ ದ್ವಿಪದಿಗಳನ್ನು ರಚಿಸಿದ ಇಬ್ರಾಹಿಮನು ತನ್ನ ಗೀತೆಗಳನ್ನು ಕೆಲವು ರಾಗಗಳನ್ನು ಮೂರ್ತಿಕರಿಸಿದ್ದಾನೆ. ಸಂಗೀತ ಶಾಸ್ತ್ರದಲ್ಲಿ ಹೇಳಿದಂತೆ ಪ್ರತಿಯೊಂದು ರಾಗವೂ ನವರಸಗಳಲ್ಲಿಯ ಒಂದೊಂದು ರಸವನ್ನು ಪ್ರತಿನಿಧಿಸುತ್ತದೆ. ಬಹುತೇಕ ರಾಗಗಳು ಶೃಂಗಾರ ರಸ ಪ್ರಾಧಾನ್ಯವಾಗಿದ್ದರೂ ಕೆಲವು ರಾಗಗಳು ಶೋಕ, ಆರ್ತ, ಭಕ್ತಿ, ದೈನ್ಯ ಭಾವಗಳಿಗೂ ಪ್ರಾಮುಖ್ಯತೆ ನೀಡುತ್ತವೆ' ಇಲ್ಲಿ ರಸಗಳ ಹೊರತಾಗಿ ಹಿಂದು ಧರ್ಮ, ಪೌರಾಣಿಕ ದೇವ-ದೇವತೆಗಳಲ್ಲಿ ಹಲವು ರಾಗಗಳನ್ನು ಮೂರ್ತಿಕರಿಸಿದ್ದು ಒಂದು ವಿಶೇಷವಾಗಿದೆ.

i . ಭೈರವರಾಗ :

ವಾಸ್ತವದಲ್ಲಿ ಇದು ಆರ್ತ ಇಲ್ಲವೆ ಶೋಕ ಭಾವಕ್ಕೆ ಪ್ರಾಮುಖ್ಯತೆಯನ್ನು ನೀಡುವ ರಾಗ. ಈ ರಾಗದಲ್ಲಿ ಇಬ್ರಾಹಿಮನು ಈಶ್ವರನನ್ನು ಮೂರ್ತಿಕರಿಸಿದ್ದಾನೆ.

> 'ಭೈರವ ಕರ್ಪೂರ ಭಾಲ ತಿಲಕ ಚಂದ್ರಾ ।
> ತ್ರಿನೇತ್ರಾ ಜಟಾ ಮುಕುಟ ಗಂಗಾಧರಾ ॥

ಎಂದು ಪ್ರಾರಂಭಿಸುವಲ್ಲಿ ಭೈರವ ರಾಗದ ನಾಯಕನು ಜಟಾ ಮುಕುಟ ಗಂಗಾಧರನೆಂದು ಹೇಳಿ, ಅಂತರಾ / ಬೈನದಲ್ಲಿ ಆತನ ಇನ್ನುಳಿದ ಲಕ್ಷಣಗಳಾದ ಒಂದು ಹಸ್ತದಲ್ಲಿ ನರಮುಂಡವು. ಇನ್ನೊಂದು ಹಸ್ತದಲ್ಲಿ ತ್ರಿಶೂಲ, ಆತನ ವಾಹನ ಎತ್ತು ಎಂದೆಲ್ಲ ಹೇಳಿ ಕೊನೆಗೆ ಅಭೋಗದಲ್ಲಿ

'ಸರಪ ಸಿಂಗಾರ ತಿಷ್ಕನ ಪರಭಾಈ ಕಲ್ಪತರಾ ।
ರಮಣೀವಾದನ ಮೃದಂಗ, ಧಾಮ ಕೈಲಾಸ ತದೋ ಪರಾ ।

ಎಂದು ಹೇಳುತ್ತ ಕೊನೆಯಲ್ಲಿ

'ಇಬ್ರಾಹೀಮ ಉಖ್ಖಿತ ಲಚ್ಛನ ರಾಗ ಭೈರವ
ಮಹಾ ಉತ್ತಮ ಸುಂದರಾ ॥

ಎಂದು ಉತ್ತಮ ಹಾಗೂ ಸುಂದರ ಭೈರವ ರಾಗದ ಲಕ್ಷಣಗಳು ಇವು ಎಂದು ಹೇಳುತ್ತಾನೆ.

ii. ಆಸಾವರಿ ರಾಗ :

ಅದರಂತೆ ಆಸಾವರಿ ರಾಗವನ್ನು ಗೌರಾಂಗ ಯುವತಿಗೆ ಹೋಲಿಸಿದ್ದಾನೆ. ವಾಸ್ತವದಲ್ಲಿ ಆಸಾವರಿ ರಾಗ ಶೃಂಗಾರ ಪ್ರಧಾನವಾದುದ್ದು.

'ಆಸಾವರೀ ಇಸ್ಕೀ ಗೋರೀ ಚಂಪಕ ಸಾರ
ರಗತ ಪೀತಾಂಬರ ಕಂಚುಕೀ ನೀಲೀ ಸರ್ವ ಸಿಂಗಾರ'

ಆಸಾವರಿ ರಾಗದ ನಾಯಕಿ ಗೌರಾಂಗನೆಯಾದ ಯುವತಿ, ಅವಳ ಗೌರವರ್ಣವು ಚಂಪಕ ಹೂವಿನದ್ದಾಗಿದೆ. ಅವಳು ರಕ್ತವರ್ಣದ ಸೀರೆಯನ್ನುಟ್ಟು ನೀಲವರ್ಣದ ಕುಪ್ಪಸವನ್ನು ತೊಟ್ಟು ಸರ್ವ ಶೃಂಗಾರ ಭೂಷಿತೆಯಾಗಿದ್ದಾಳೆ. ಮುಂದಿನ ಎರಡು ನುಡಿಗಳಲ್ಲಿ ನಾಯಿಕೆಯನ್ನು ಇನ್ನಷ್ಟು ವರ್ಣಿಸಿ ಕೊನೆಗೆ ಆಸಾವರಿ ನಾಯಿಕೆಯ ಕಣ್ಣುಗಳು ಚಂಚಲ ಹಾಗೂ ಚಪಲವಂತೆ, ತನ್ನ ಪ್ರಿಯತಮನನ್ನು ಅನೇಕ ರೀತಿಯಲ್ಲಿ ಪ್ರೀತಿಸುತ್ತಾಳೆ. ಇವುಗಳು ಆಸಾವರಿ ರಾಗದ ಲಕ್ಷಣಗಳು ಎಂದು ಹೇಳುತ್ತಾನೆ.

iii. ಕಲ್ಯಾಣಿ ರಾಗ :

ಕಲ್ಯಾಣಿ ರಮಣಿ ಪೀವರ ಕುಚಾ ತನ್ವಾಂಬರೀ ಮೃಗನಯನೀ
ಬಾಹಾಂತನವೀ ಶ್ಯಾಮ ಕೇಸ ಬದನ ಹಿಮಕರ ।
ಕಾಂತಾ ಕಮ ವಸಂತೀ ಬಾಲೀ ಲಜ್ಜಾ ಡರ ಪುರುಷಾ ಪಶಂತೀ
ರೋಮಾವಲೀ ನೀಲ ಕಂಚುಕೀ ಚಿತ್ರ ವಸ್ತರ ॥

ಒಂದು ದ್ವಿಪದಿಯಲ್ಲಿ ಕಲ್ಯಾಣಿ ರಾಗದ ಲಕ್ಷಣಗಳನ್ನು ಹೇಳುತ್ತ, ಕಲ್ಯಾಣಿ ರಾಗವು ಒಬ್ಬ ಸುಂದರ ಸ್ತ್ರೀ ಇದ್ದಂತೆ. ಅವಳ ಕುಚಗಳು ದೃಢವಾಗಿವೆ. ಶರೀರ ಹಾಗೂ ಬಾಹುಗಳು ಕೋಮಲವಾಗಿವೆ. ಕಣ್ಣುಗಳು ಚಿಗರೆಯ ಕಣ್ಣುಗಳಾಗಿವೆ. ಶ್ಯಾಮ ವರ್ಣದ ಕೂದಲು, ಮುಖವು ಚಂದ್ರ ಕಿರಣಗಳಂತೆ ಪ್ರಕಾಶಮಾನವಾಗಿದೆ.

ಅವಳು ಕಮನೀಯ ಕಾಂತೆ ವಸಂತ ಬಾಲಿಕೆಯು ಮುಖದ ಮೇಲೆ ಲಜ್ಜೆ ಭಯ ಆವರಿಸಿದೆ. ಅವಳ ರೋಮಾವಲಿಗಳು ಕಾಣಲು ಮನಮೋಹಕವಾಗಿವೆ. ನೀಲೀ ಕುಪ್ಪಸ ತೊಟ್ಟ ಅವಳು ಚಿತ್ರವಿಚಿತ್ರ ವಸ್ತ್ರಗಳನ್ನು ಧರಿಸಿದ್ದಾಳೆ.

iv. ಕಾನಡಾ ರಾಗ :

ಕರನಾಟೀ ಗೌರೀ ಮಾನೋ ಕೇತಕೀ ಬಿಚ ಸೇತ ಪತರ ।
ಸಾರೀ ನೀಲೀ ಕಂಚುಕೀ ಪೀಲೀ ಕುಮುದ ಕರ ಕಮಲ ನೇತರ ।

ಕರನಾಟೀ ರಾಗದ ನಾಯಕಿಯು ಗೌರವರ್ಣವು ಕೇತಕಿಯ ಮಧ್ಯದ ಶ್ವೇತವರ್ಣದಂತಿದೆ. ಅವಳ ಸೀರೆ ನೀಲ ವರ್ಣದ್ದಾದರೆ ಕುಪ್ಪಸ ಹಳದಿ ವರ್ಣದ್ದು, ಅವಳ ಹಸ್ತಗಳು ಕುಮುದವಾದರೆ ನೇತ್ರಗಳು ಕಮಲದಂತೆ.

v. ಕೇದಾರ ರಾಗ :

ಕೇದಾರೀ ಬಾಲೀ ವಿರಹಿನೀ ಅತಿ ಸುಂದರ ಕಪೋಲ ಕರ ಘರ ।
ಕೃಷಾಂಗೀ ಕುಟಿಲ ಕೇಶ ಪಾಂಡು ಗಾಲ ಚಮರ ಸೇತ ವಸ್ತರ ॥

ಕೇದಾರ ರಾಗದ ನಾಯಕಿ ಒಬ್ಬ ವಿರಹಿಣಿ ಅವಳ ಗಲ್ಲಗಳು ಸುಂದರವಾಗಿವೆ. ಅವಳು ಗಲ್ಲದ ಮೇಲೆ ಕೈ ಇಟ್ಟುಕೊಂಡು ಕುಳಿತಿದ್ದಾಳೆ. ಅವಳು ಕೃಷಾಂಗಿ, ಕುಟಿಲ ಕೇಶಗಳು, ಅವಳು ಅತ್ಯಂತ ಸ್ವಚ್ಛವಾದ ವಸ್ತ್ರಗಳನ್ನು ತೊಟ್ಟಿದ್ದಾಳೆ.

ಹೀಗೆ ಕೆಲವು ರಾಗಗಳ ಲಕ್ಷಣಗಳನ್ನು ಹೇಳಿದ ಇಬ್ರಾಹಿಮನು ಒಂದು ಗೀತೆಯ ಚರಣದಲ್ಲಿ ತಾಲ-ವಾದ್ಯಗಳ ಹೆಸರುಗಳನ್ನು ಸೂಚಿಸಿದ್ದಾನೆ. ತೋಡೀ ರಾಗದ ಒಂದು ಗೀತೆಯ ಬೈನದಲ್ಲಿ.

ಉತ್ತಮ ಭೂಗಣ ಗಾವೆಂ ನೌರಸ ಅಹಂಗ
ತಂಬೂರಾ, ರುಬಾಬ, ಜಂತರ ಕಮಾಚ, ಚಂಗ
ಢೋಲಕ, ಡಫ, ಹುಡಕ, ತಾಲ, ಬಿರದಂಗ
ಶನಾಈ, ಪಾವಾ, ನಯ, ಖಾಲೂ, ಉಪಂಗ, ॥

ಹೀಗೆ ೧೫ ತರದ ವಾದ್ಯಗಳನ್ನು ಜೊತೆಮಾಡಿ ಉತ್ತಮ ಭೂಗಣರು ನೌರಸ ಗೀತೆಗಳನ್ನು ಹಾಡುತ್ತಾರಂತೆ.

ಮತ್ತೆ ಎರಡು ಗೀತೆಗಳಲ್ಲಿ ನವರಸ ಗೀತಗಳ ಉತ್ಪತ್ತಿಯನ್ನು ಹೇಳುತ್ತಾನೆ.

'ನೌರಸ ಭೇದ ಕೋ ಉತಪತ ಬಚನ ಆಖೂಂ ಸಖನನೆ ಸುನೆ ಹಿತ ಚೀತ

ಲಾವಿ !' ನವರಸ ಭೇದದ ಉತ್ಪತ್ತಿಯಲ್ಲಿ ಎಲ್ಲ ಜನರು ತಮ್ಮ ಹಿತಕ್ಕಾಗಿ ನೋಡುತ್ತಾರೆ. ಅಂಥವರು ಚಿತ್ತವಿಟ್ಟು ಕೇಳಬೇಕು.

ಏನಾದರೂ ತಪ್ಪು ತಡೆಗಳಾಗಿದ್ದರೆ ಅವುಗಳು ನನ್ನವು ಎನ್ನುತ್ತಾನೆ. 'ತಾಲ ಚಟಕ ಸಮ ಸುರ ಮಧ್ಧಿಮ ಉಪಜ ನ್ಯಾರೀ ನ್ಯಾರೀ ಕರದಿಖಾಈ 'ನಾನು ವಿವಿಧ ಪ್ರಕಾರಗಳ ಗೀತಗಳ ಉತ್ಪತ್ತಿಯನ್ನು ಮಾಡಿದ್ದೇನೆ. ಅವುಗಳಲ್ಲಿ ಪ್ರಿಯವಾದಂಥ ತಾಳಗಳ 'ಸಮ' ಇದೆ. ಮಧ್ಯಮ ಸ್ವರದ ಉಪಯೋಗವಿದೆ.

'ಇಬ್ರಾಹಿಮ ಗಾಯೆ ಬಜಾಎ ರಿಝೂಎ ಲಕ್ಷ್ಮೀ ತ್ಯಾಗ ಪಾಈ' ಇಬ್ರಾಹಿಮನು ಆ ಗೀತಗಳನ್ನು ಹಾಡಿ, ಲಕ್ಷ್ಮಿಯನ್ನು ತ್ಯಾಗ ಮಾಡಿದ್ದಾನೆ. (ಸರಸ್ವತಿಯನ್ನು ಪ್ರಸನ್ನಗೊಳಿಸಿಕೊಂಡಿದ್ದಾನೆ.)' ಅದರಿಂದಾಗಿ ಅವನ ಹಾಗೂ ಅವನ ರಾಣಿಯ ಉತ್ಕರ್ಷವು ದಿನದಿಂದ ದಿನಕ್ಕೆ ಅಭಿವೃದ್ದಿ ಹೊಂದುತ್ತಲೆ ಇದೆ ಎಂಬುದಾಗಿಯೂ ಮುಂದಿನ ಚರಣದಲ್ಲಿ ಹೇಳುತ್ತಾನೆ.

೬. ಸಂದೇಶ :

ಇಬ್ರಾಹಿಮನು ತನ್ನ ನವರಸ ಗೀತಗಳ ಸಂದೇಶವನ್ನು ಒಂದು ಪದ್ಯದಲ್ಲಿ ಸುಂದರವಾಗಿ ಹೇಳುತ್ತಾನೆ.

"ಅತಾಈ, ಢಾಢೀ, ಗುನೀಜನ ತಿರಜಗ ಗುಸಾಈಂ ತ್ರಿಲೋಚನ, ।
ಭಾಕಾ ನ್ಯಾರೀ ನ್ಯಾರೀ ಭಾವ ಏಕ ಕಹಾ ತುರಕ ಕಹಾ ಬರಹಾಮನ ।
ಉತ್ತಮ ಭಾಗನೀಕೋ ಸೋ ಸೋಹೀ ಜಾ ಸರಸುತೀ ಹುಈ ಪ್ರಸನ್ನ।
ಇಬ್ರಾಹಿಮ ಸೊಂಸಾರ ಚಾಹೆ ವಿದ್ಯಾ, ಸಬದ ಗುರುಸೇವಾ ಜಪಕರ ಏಕಮನ"

ಅತಾಈ ಉತ್ತಮ ಪ್ರಕಾರದ ಗಾಯಕರು, ಢಾಢೀ ಒಂದು ಬಗೆಯ ಮುಸಲ್ಮಾನ ಗಾಯಕರು ಹಾಗೂ ಗುಣೀಜನರು ಮೂರು ಲೋಕದ ಒಡೆಯ ಈಶ್ವರನ ಮೂರು ಕಣ್ಣುಗಳಿದ್ದಂತೆ.

ಭಾಷೆಗಳು ಬೇರೆ ಬೇರೆ ಯಾದರೇನು ಅವುಗಳ ಭಾವ ಒಂದೇ ಆಗಿದೆ. ಅವರು ತುರುಕರಾಗಿರಲಿ ಬ್ರಾಹ್ಮಣರಾಗಿರಲಿ ಉತ್ತಮರಾಗಿದ್ದರೆ ಅವರಿಗೆ ಸರಸ್ವತಿಯು ಒಲಿದು ಪ್ರಸನ್ನಳಾಗುತ್ತಾಳೆ. ಅಂತೆಯೇ ಇಬ್ರಾಹಿಮನು ವಿದ್ಯೆ, ಸಂಗೀತ ಹಾಗೂ ಗುರುಸೇವೆಯನ್ನು ಬಯಸುತ್ತಾನೆ. ಅವುಗಳಿಗಾಗಿ ಏಕಾಗ್ರ ಚಿತ್ತರಾಗಿ ಜಪಮಾಡಬೇಕಾಗುತ್ತದೆ.

೭. ನವರಸ ಕವನ ಸಂಕಲನ :

ಮೂಲತಃ ಪರ್ಶಿಯನ್ ಲಿಪಿಯಲ್ಲಿದ್ದ ದಖಣೀ ಕವನ ಸಂಕಲನವನ್ನು ೧೯೫೫ರಲ್ಲಿ ಡಾ. ನಜೀರ ಅಹ್ಮದರು ಲಖನೌ ವಿಶ್ವವಿದ್ಯಾಲಯದಿಂದ ಉರ್ದು ಲಿಪಿಯಲ್ಲಿ ಪ್ರಕಟಿಸಿದರು. ಅನಂತರ ೧೯೬೨ರಲ್ಲಿ ಡಾ. ಇಥಾಪೆ ಎಂಬವರು ಪುಣೆ ವಿಶ್ವವಿದ್ಯಾಲಯದಲ್ಲಿ 'ಇಬ್ರಾಹಿಮ ನಾಮಾ ಹಾಗೂ ನವರಸ ಕಿತಾಬ' ಗಳ ಅಭ್ಯಾಸ ಮಾಡಿ ಮಹಾಪ್ರಬಂಧವನ್ನು ಬರೆದರು. ಕೊನೆಯಲ್ಲಿ ೫೭ ಗೀತೆಗಳು ೧೩ ದ್ವಿಪದಿಗಳನ್ನು ದೇವನಾಗರಿ ಲಿಪಿಯಲ್ಲಿ ಕೊಟ್ಟಿದ್ದು ಅದಿನ್ನೂ ಹಸ್ತಪ್ರತಿಯಲ್ಲಿದೆ.

೧೯೮೬-೮೭ರಲ್ಲಿ ವಿಜಾಪುರದ ವಸ್ತು ಸಂಗ್ರಹಾಲಯದ ಪುರಾತತ್ವ ಇಲಾಖೆಯ ಉಪ ಅಧೀಕ್ಷಕರಾದ ಶ್ರೀ ಮಧುಕರ ಜೋಶಿ ಅವರು ಅನ್ಯ ಮೂಲಗಳಿಂದ ದೊರಕಿಸಿದ ಒಂದು ಹಸ್ತಪ್ರತಿಯಿಂದ ೫೯ ಗೀತಗಳನ್ನು ೧೭ ದ್ವಿಪದಿಗಳನ್ನು ದೇವನಾಗರಿ ಲಿಪಿಯಲ್ಲಿ ಬರೆಯಿಸಿದರು.

ಡಾ. ಇಥಾಪೆ ಅವರ ಅಪ್ರಕಟಿತ ಮಹಾ ಪ್ರಬಂಧ ಹಾಗೂ ಶ್ರೀ ಮಧುಕರ ಜೋಶಿ ಅವರಿಂದ ದೊರೆತ ಹಸ್ತ ಪ್ರತಿಗಳ ಆಧಾರದಿಂದ ಈ ಕವನ ಸಂಕಲನವನ್ನು ಸಿದ್ಧಪಡಿಸಲಾಗಿದೆ.

***

ಕಿತಾಬೆ – ಸೌರಸ

ದೋಹಾ–೧

ನೌರಸ ಸೂರ ಜುಗ ಜಗಜೂತಿ ಆಣು ಸರೋಗುನಿ
ಯೋ ಸತ ಸರಸುತಿ ಮಾತಾ ಇಬ್ರಾಹೀಮ ಪರಸಾದ ಭಈ ದೂನಿ

ಹೇ ತಾಯಿ ಸರಸ್ವತೀ, ಇಬ್ರಾಹಿಮನ ಮೇಲೆ ನಿನ್ನ ಕೃಪೆ ಇದೆಯಾದ್ದರಿಂದ , ನಿನ್ನ ಅನುಗ್ರಹದಿಂದ ಆತನ ನವರಸ ಕಾವ್ಯವು ಜಗತ್ತಿನಲ್ಲಿ ಬಹು ಕಾಲ ಬಾಳುತ್ತದೆ.

ಗೀತ–೧

ದರ ಮಕಾಮ ಭೂಪಾಲಿ

ಹಜರತ ಮುಹಮ್ಮದ ಜಗತ್ತರ ಗುರ ಗುಸಾಯಿ
ತುವ ದರಗಹ ಚುಮಕ ಮೇರೋ ಮನ ಸಾರ

ಹಜರತ ಮಹಮ್ಮದರು ಜಗತ್ತಿನ ಗುರುಗಳು, ತಮ್ಮ ಸಮಾಧಿಯು ಲೋಹಚುಂಬಕದಂತೆ ನನ್ನ ಮನಸ್ಸನ್ನು ಸೆಳೆಯುತ್ತಿದೆ.

ಅಂತರಾ

ತಿರಲೋಕ ಜಪತ ತುವ ನಾಂವ ಪಾವೆ ಪರಾನ ಕೀ ಪುರಾನ
ಅಚರಿಜ ಮಹಾಪೀರ ಅಬಲಾಬಲೀ ತೂಹೀಂ ಸಾಂಚೋ ಅವತಾರ

ಮೂರುಲೋಕಗಳ ಜನರು ನಿಮ್ಮ ನಾಮವನ್ನು ಜಪಿಸುತ್ತ ತಮ್ಮ ಮನದಾಸೆಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ. ಆಶ್ಚರ್ಯವೆಂದರೆ ನೀವು ಬಹು ದೊಡ್ಡ ಗುರುಗಳು, ಬಲವಿಲ್ಲದವರಿಗೆ ಬಲವನ್ನು ತುಂಬುವವರು. ನೀವೇ ಸತ್ಯವಾಗಿ ಅವತಾರೀ [ಪುರುಷರು].

ಅಭೋಗ

ಕೋ ಚಾಹೆ ಮಾತಂಗ ತುಖಾರ ಕೋ ರತನ ಮಾಲ
ಕೋ ಭೋಜನ ವಾಸಹ ಕೋ ಧಾಮಾಂ ಧವಲಾರ
ಇಬ್ರಾಹೀಮ ಚಾಹೆ ಉತ್ತಿಮ ಬಿದ್ಯಾ ದಾನ ಧರಮ
ಸಯ್ಯದ ಮುಹಮ್ಮದಕೀ ದುಹಾಈ ಕರೀಮ ಕರತಾರ

ಕೆಲವರು ಆನೆ ಕುದುರೆಗಳನ್ನು ಬಯಸುತ್ತಾರೆ. ಇನ್ನು ಕೆಲವರು ಮುತ್ತು ರತ್ನಗಳನ್ನು ಬಯಸುತ್ತಾರೆ. ಮತ್ತೆ ಕೆಲವರು ಊಟ, ವಸತಿಗಳನ್ನು ಬಯಸುತ್ತಾರೆ. ಇನ್ನೂ ಕೆಲವರು ಉನ್ನತ ಪದವಿಗಳನ್ನು, ಪ್ರಶಸ್ತಿಗಳನ್ನು ಬಯಸುತ್ತಾರೆ. ಇಬ್ರಾಹಿಮನು ಸಯ್ಯದ ಮುಹಮ್ಮದರ ಅನುಗ್ರಹ ಬಲದಿಂದ ಉತ್ತಮ ವಿದ್ಯೆಯನ್ನು, ಧರ್ಮವನ್ನು ಅಲ್ಲಾಹನಿಂದ ಪಡೆಯಲು ಬಯಸುತ್ತಾನೆ.

ದೋಹಾ–೨

ಜೀಉ ಜೀಉ ಸಬ ಕಹೆಂ ಪೀಉ ನ ಕಹೆ ಕೋಈ
ಜೀಉ ಕಾ ಪೀಉ, ಪೀಉ ಕರ ಜಾನೀ ಹೋಎ ಸತೀ ಸೋಈ

ಬದುಕು, ಬದುಕು ಎಂದು ಎಲ್ಲರೂ ಹೇಳುತ್ತಾರೆ. [ಆದರೆ] ಪ್ರೀತಿಸು ಎಂದು ಯಾರೂ ಹೇಳುವುದಿಲ್ಲ. [ಆದ್ದರಿಂದ] ಬದುಕಲೋ ಅಥವಾ ಪ್ರೀತಿಸಲೋ ? ಪ್ರೀತಿಸಿ ಬದುಕಿದರೆ ಆತನು ಅಮರನಾಗುತ್ತದೆ.

ಗೀತ–೨

ದರ ಮಕಾಮ ಭೂಪಾಲಿ

ಸಕಲ ಜನ ವಿದ್ವಾಂಸ ಔರ ಕವಿ ಔರ ಮಹಾ
ಉತ್ತಮ ಚತುರ ಸುನ ಯೊ ಕಹಾ ಧರಾಈ

ಈ ಭೂಮಿಯ ಎಲ್ಲ ವಿದ್ವಾಂಸ ಜನರೆ ಮತ್ತು ಕವಿಗಳೇ ಮತ್ತು ಬಹು ದೊಡ್ಡ ಚತುರರೆ ಕೇಳಿ ಎಂದು ಹೀಗೆ ಹೇಳಿದನು.

ಅಂತರಾ

ಏಕ ಚಂದ ಬೇಬ ಪೇಖತ ಈ ಕೋ ಛಂದ ಮೇರೀ ಮಾಈ
ಬೋಟ ಮಾನೋ ದರಪನ ಭಈ ಮೂರತ ಔರ ಪರಛಾಈ

ಒಂದೇ ಮುಖ ಬೇರೆ ಬೇರೆಯಾಗಿ ಕಾಣುತ್ತದೆ. ಅದೊಂದು ಮಾಯೆ. ಈ ಮುಖವನ್ನು ನೋಡಲು ನೀವು ಕನ್ನಡಿಯನ್ನು ನೋಡಿರಿ. ಅದರಲ್ಲಿ ಒಂದು ನಿಜವಾದ ರೂಪ ಇನ್ನೊಂದು ಅದರ ಛಾಯೆ.

ಅಭೋಗ

ತೇರೀ ಉಪಮಾ ಸುಧಾಂಶು ಲಚ್ಛನ ಚಾಹೆ ಅಮೃತ ದಿಖಾಈ
ಮೊ ಚಖ ಚಕೋರ ಜಪತ ಅಪನೀ ಆದಿ ಸಗಾಈ

ಇಬ್ರಾಹೀಮ ಮೂರ್ಛನ ಭಯೆ ಯೋ ರೀಝೋ ಸುಂದರ ತಾಈ
ಅಧರ ಅಮೃತ ಚಖಾ ಬಹುರಿ ಜಿಲಾಈ

ನಿನ್ನಲ್ಲಿ ಚಂದ್ರನ ಲಕ್ಷಣಗಳನ್ನು ಕಾಣುತ್ತೇನೆ. ಹೇ ಪ್ರಿಯೆ ನಿನ್ನ ಉಪಮೆಯನ್ನು ಚಂದ್ರನಿಗೆ ಹೋಲಿಸುತ್ತಾರೆ. ಅದರಲ್ಲಿ ಅಮೃತವಿದೆ. ಚಕೋರವು ತನ್ನ ಚಂದ್ರನೊಂದಿಗಿನ ಅನಾದಿ ಸಂಬಂಧವನ್ನು ಜಪಿಸುತ್ತ ಜೀವಿಸುತ್ತದೆ. [ಚಂದ್ರ ಹಾಗೂ ಚಕೋರಗಳ ಸ್ನೇಹ ಸರ್ವಶ್ರುತವಿದೆ.] ನಿನ್ನ ಮೋಹಕ ಆಕರ್ಷಕ ರೂಪವು ಇಬ್ರಾಹಿಮನನ್ನು ಮೂರ್ಛಿತನನ್ನಾಗಿ ಮಾಡಿದೆ. ನನ್ನ ಕಣ್ಣು ಚಕೋರ ನಿನ್ನಿಂದ ಅಧರಾಮೃತದ ಯಾಚನೆಯನ್ನು ಮಾಡುತ್ತಿದೆ. ಅದರ ಆಸ್ವಾದನೆಯಿಂದ ನನಗೆ ಮತ್ತೆ ಜೀವದಾನ ನೀಡು.

ದೋಹಾ–೩

ರೇಗ ಕರ ಫಿರಾಊ ದಮ ತನ ಜೋ ಕೀತೆ ಶೀತೆ ತಾಸ
ಫಾಲ ದೇಖೆಂ ಜೀಉ ಪೀಉ ಕಬ ಆವೆ ಮುಂಜ ಪಾಸ

ಪ್ರತಿ ಉಸಿರಿನಲ್ಲಿ ನೀನು ನನ್ನೊಂದಿಗಿರುವೆ, ನಿನ್ನ ಸುತ್ತಲೇ ತಿರುಗುತ್ತಿರುವೆ. [ಆದರೆ] ಈ ವರೆಗೆ ನಿನ್ನನ್ನು ಕೂಡುವ ಸಂದರ್ಭವೇ ಬರಲೊಲ್ಲದು. ಅದು ಎಂದು ಬರುತ್ತದೆ ?

ಗೀತ–೩

ದರ ಮಕಾಮ ರಾಮಕರೀ [ರಾಮಕಲಿ]

ರಾಮಕರೀ ಬಿನಾ ಆಯೊ ಸೇಜಸಂಗ್ರಾಮ ಚಿತ ಚಾಹಿಯೋ
ಚೊಪ ಚಲೀ ಚಂಚಲ ಚಪಲಾ

ರಾಮಕಲಿ [ರಾಗ] ಬಹು ಚಪಲ ಚಂಚಲೆಯಾಗಿದ್ದು ಮನಸ್ಸಿಗೆ ಬಂದಂತೆ ಹೇಳದೇ ಕೇಳದೆ ಪುಷ್ಪ [ಧಾರೆಯಾಗಿ] ರಣರಂಗದಲ್ಲಿ ಗುಪ್ತವಾಗಿ ಬಂದು ಹೋಗಿ ಬಿಡುತ್ತಾಳೆ.

ಅಂತರಾ

ಸಖ್ಯಾ ಸಂಗತ ಸುಂದರಿ ಹಸತ ಖೇಲತ ಛಾಡ ಪೀತರಮ ಅನೋಖೀ
ಠಕಲಾ

ಸಖಿಯರ ಸಂಗಡ ಸುಂದರಿಯು ನಗುತ್ತ ಆಡುತ್ತಾಳೆ. ಪ್ರಿಯತಮನಿಗೆ ಛೇಡಿಸುತ್ತ ಮೋಸ ಮಾಡುತ್ತಾಳೆ

ಅಭೋಗ

ಮುಗತಾ ಭೂಷಣ ಭೂಷಿತಾ ಸೇತ ರಗತಾಂಬರ ಚಟಕ ಛಬೀಲಾ
ಇಬ್ರಾಹೀಮ ರಾಮಕರೀ ರಾಗಿನೀ ಕಸ್ತೂರೀ ಸ್ಯಾಮ ಸುಕೇಶ ಕಸೆ ಧಾಮ್ಮಿಲಾ

ಮುಗ್ಧೆಯು [ಸುಂದರವಾಗಿ] ಭೂಷಣಭೂಷಿತಳಾಗಿ ಸಿಂಗರಿಸಿಕೊಂಡು ರಕ್ತಾಂಬರಿಯಾಗಿ ಅತಿ ಲಾವಣ್ಯವಾಗಿ ಕಾಣುತ್ತಿದ್ದಾಳೆ. ಸುಗಂಧಿತ ಕಪ್ಪು ಕೇಶಗಳಿಂದ [ಅಲಂಕೃತಳಾದ] ಯಾರಿಗೂ ಸಿಗದ ರಾಮಕಲಿ ರಾಗಿಣಿಯು ಇಬ್ರಾಹಿಮನಿಗೆ ಹೇಗೆ ದೊರೆಯುತ್ತಾಳೆ.

ದೋಹಾ-೪

ಪಾಕಾ ಖೀಲ್ಲನ ಹರೀ ಆಯೆ ಸದಾ ಭವುರ ಜಾಯೆ
ಮಸ್ತ ಮಾತಂಗ ದಾಕು ಚಾರ ವುಮಾ ನಜರ ಕೋಲೆ ಕ್ಯೋಂಕರ ಖಾಯೆ

ಸಿಂಹವು [ಪ್ರತಿದಿನ] ಬೇಟೆಯಾಡಲು ಹೋಗುತ್ತದೆ. [ಆದರೆ] ನಾಲ್ಕೂ ನಿಟ್ಟಿಗೂ ದೃಷ್ಟಿ ಹಾಯಿಸಿದರೂ ಮದಗಜದ ಬೇಟೆ ಸಿಗದೆ ಮರಳುತ್ತದೆ. ಹಾಗೆಂದು ಅದು ನರಿಯನ್ನು ಯಾಕೆ ತಿನ್ನುತ್ತದೆ.

ಗೀತ –೪

ದರ ಮುಕಾಮ ರಾಮಕರೀ

ಬಿರದನ ಬದನ ಮೋಹನ ಪೋತರೀ
ಮೇರಾ ಬಾಬೂ ಸೋಮ ಅಯೋ ಭಿಜ್ಞಾ ಮಾಗನ

ಸುಗಂಧ ದೇಹ, ಮನಮೋಹಕ ಕಣ್ಣುಗಳುಳ್ಳ ಚಂದ್ರನಂತಿರುವ ನನ್ನ ಮಗು,[ರಾಮಕಲಿ ರಾಗ] ನನಗೆ ಆಸೆ ತೋರಿಸಿ ಹೋಗುತ್ತಿದೆ.

ಅಂತರಾ

ಛಕ ಕಚಕೋಲ ಲೇ ಧಾಈ ಯಾಹೀ ಧೀಂ ಪಾವೆ
ಪುರ ಸುಂದರ ಉಡಗನ ಅಸೇಗನ

ಅದೃಶ್ಯವಾಗುವ ಸುಂದರ ಚಂದ್ರನಂತಿರುವ [ಇವಳನ್ನು] ಹೇಗೆ ಪಡೆಯುವುದು. ಕಣ್ಣುಕುಕ್ಕುವ [ಮಿಂಚಿನಂತೆ] ಬೆಳಕಿನೊಂದಿಗೆ ಬಂದು

ಅಭೋಗ

ಝೂಟೀ ಪೀರತ ಕೋ ಲಚ್ಛನ ಯಾಹೀ ಹೈ
ಫಿರೇ ಘಡೀ ಘಡೀ ಘರ ಘರ ಗಗನ
ಇಬ್ರಾಹೀಮ ವೋ ಸುಖ ಧಾಮ ದ್ವಾರ ಪಂಥ

ಸೀಸ ಧರ ಮನ ಏ ಕಠೋರ ಜ್ಯೂಂ ಧುರ ಮಂಡಲ ಉಡಗನ

[ನಕ್ಷತ್ರ] ಮಂಡಲದಲ್ಲಿಯ ಮುತ್ತಿನಂತಿರುವ ಚಂದ್ರಿ [ರಾಮಕಲಿ] ಬಹು ಕಠೋರೆ, ನನ್ನ ವಶದಲ್ಲಿ ಬರುತ್ತಿಲ್ಲ. ಗಗನದ ಮನೆಮನೆಗಳಲ್ಲಿ ಪದೇ ಪದೇ ತಿರುಗುತ್ತಾಳೆ. [ರಾಮಕಲಿಯ] ಸುಳ್ಳು ಪ್ರೀತಿಯ ಲಕ್ಷಣವೆಂದರೆ ಇದುವೆ. [ಆದರೆ] ಇಬ್ರಾಹಿಮನು ಅವಳ ಮನೆಯ ದ್ವಾರದಲ್ಲಿಯೇ ಸುಖ ಪಡುತ್ತಿರುವನು.

ದೋಹಾ–೫

ದಿನಕರ ಜೋತ ಪತೀ ಸೋತುಜ ನಾಂವ ನಹೀ ಕೋಈ ತುಜ ಸಾರ ರೀ
ಸಾರೆ ತಾರೆ ಚಾಂದ ಹೋಏ ನಹೀಂ ಜೋತ ತುಜ ತಾರ ರೀ

ರವಿಯು ಬೆಳಕಿನ ಒಡೆಯ, ಅವನಂತೆ ಇನ್ನೊಬ್ಬರು ಯಾರೂ ಇಲ್ಲ. ಅವನ ಹೆಸರಿನವರೂ ಇಲ್ಲ. ಚಂದ್ರನೊಂದಿಗೆ ಎಲ್ಲ ತಾರೆಗಳೂ ಅವನಿಂದಲೇ ಬೆಳಕನ್ನು ಪಡೆಯುತ್ತಾರೆ.

ಗೀತ-೫

ದರ ಮುಕಾಮ ಭೈರವ

ಭೈರವ ಕರ್ಪೂರ ಗೋರಾ ಭಾಲ ತಿಲಕ ಚಂದ್ರಾ
ತ್ರಿನೇತ್ರಾ ಜಟಾ ಮುಕುಟ ಗಂಗಾಧರಾ

ಶಿವನದು [ಭೈರವ] ಕರ್ಪೂರದಂಥ ಗೌರವರ್ಣ. ಹಣೆಯಲ್ಲಿ ಚಂದ್ರನ ತಿಲಕ. ಮೂರು ಕಣ್ಣುಗಳು, ಜಟೆಯ ಮುಕುಟದಲ್ಲಿ ಗಂಗೆಯನ್ನು ಧರಿಸಿದ್ದಾನೆ.

ಬೈನ

ಏಕ ಹಸ್ತ ರುಂಡ ನರಾ ತ್ರಿಸೂಲ ಜುಗಲ ಕರಾ
ವಾಹನ ಬಲಿವರ್ದ ಸೇತ ಜಾತ ಗುಸಾಂಯೀ ಈಶ್ವರಾ
ಗಾಂಸ ಕುರುತ ಕುಂಜರ ಪೃಷ್ಠ ಚರಮ ವ್ಯಾಗ್ರಾ

ಒಂದು ಕೈಯಲ್ಲಿ ನರನ ರುಂಡ, [ಇನ್ನೊಂದರಲ್ಲಿ] ತ್ರಿಶೂಲ ಹಿಡಿದಿದ್ದಾನೆ. ಅವನ ವಾಹನ ವೃಷಭ, ಈಶ್ವರನು ಭಸ್ಮ ಲೇಪಿತನಾಗಿದ್ದಾನೆ. ಆನೆ, ಹುಲಿ ಚರ್ಮಗಳು ಅವನ ಆಸನಗಳು.

ಅಭೋಗ

ಸರಪ ಸಿಂಗಾರ ತಿಷ್ಟನ ಪರಭಾಈ ಕಲ್ಪತರಾ
ರಮನೀ ವಾದನ ಮರದಂಗ ಧಾಮ ಕೈಲಾಸ ತದೋ ಪರಾ
ಇಬ್ರಾಹೀಮ ಉಖಿತ ಲಚ್ಛನ ರಾಗ ಭೈರವ ಮಹಾ ಉತ್ತಮ ಸುಂದರಾ

[ಅವನು] ಸರ್ಪಭೂಷಣನು. ಕಲ್ಪವೃಕ್ಷದ ನೆರಳಲ್ಲಿ ಕುಳಿತಿದ್ದಾನೆ. ಅವನ ವಾಸ ಕೈಲಾಸ, [ಎದುರಿಗೆ] ರಮಣಿಯೊಬ್ಬಳು ಮೃದಂಗವನ್ನು ಬಾರಿಸುತ್ತಿದ್ದಾಳೆ. ಬಹು ದೊಡ್ಡ, ಉತ್ತಮ ಭೈರವ ರಾಗದ ಲಕ್ಷಣಗಳನ್ನು ಇಬ್ರಾಹಿಮನು ಹೇಳುತ್ತಿದ್ದಾನೆ.

ದೋಹಾ–೬

ಸೋಮ ದುರ ಸೇತ ಮದ ಸ್ಯಾಮ ಮಾನೋ ನ್ಯೆನ ಸುಂದರೀ ರೂಪ ಲಚ್ಛನ
ಬಾದರ ಅಂಚರ ತಾಪರ ಮರೂತ ಲಾಗೇ ಕಬ ಗುಪತ ಕಬ ಪರಗಟ ದಿಸೆ ಬದನ

ಸಿಂಪಿಯ ಮಧ್ಯದಲ್ಲಿದ್ದ ಮುತ್ತಿನಂತಿರುವ ನಯನ ಮನೋಹರ ಸುಂದರಿಯಾದ ಚಂದ್ರವದನೆಯು, ಮೋಡ ಮಧ್ಯದ ಚಂದ್ರನಂತೆ ಆಕೆಯ ದೇಹ ಒಮ್ಮೆ ಪ್ರಕಟವಾಗಿ ಕಂಡರೆ ಇನ್ನೊಮ್ಮೆ ಗುಪ್ತವಾಗಿ ಬಿಡುತ್ತದೆ.

ಗೀತ–೬

ದರ ಮಕಾಮ ಭೈರವ

ದುನಿಯಾ ಘಡಾ ಭರೆ ಚಂದನಾ ದೂದ
ಊಪರ ನಿರ್‌ಮಲ ಮಸ್ಕಾ ಸೋ ಚಾಂದ ಸೂದ

[ಈ] ಜಗತ್ತು ಬೆಳದಿಂಗಳ ಹಾಲು ತುಂಬಿದ [ಒಂದು] ಕೊಡ. ಅದರ ಮೇಲೆ ತೇಲುತ್ತಿರುವ ಸ್ವಚ್ಛವಾದ ಬೆಣ್ಣೆಯೇ ಚಂದ್ರ

ಬೈನ

ಯಾ ಚಕರಂಗ ಚಂದ್ರ ಚಂದನಾ ರಾಸ ಮೋತೀ
ಯಾ ಇಂದ್ರಾ ಇಂದು ಚಂದನಾ ಐರಾವತ ಹತೀ
ಯಾ ಬೀಧಾ ವೀಧೂ ಚಂದನಾ ಜಲ ಭಾಗೀರಥೀ

ಚಂದ್ರನು ಚಕೋರನಾದರೆ ಬೆಳದಿಂಗಳು ಮುತ್ತಿನ ರಾಶಿ ಅಥವಾ ಚಂದ್ರನು ಇಂದ್ರನಾದರೆ ಬೆಳದಿಂಗಳು ಐರಾವತ ಆನೆ ಅಥವಾ ಚಂದ್ರನು ವೇದಗಳನ್ನು ಬಲ್ಲ ಬ್ರಾಹ್ಮಣನಾದರೆ ಬೆಳದಿಂಗಳು ಗಂಗಾಜಲ.

ಅಭೋಗ

ಯಾ ಕಪಾಲೀ ಚಂದರ ಚಂದನಾ ಮಂಡಲ ವಿಭೂತೀ

ಯಾ ಬದನ ಛಾಈ ಚಂದರ ಚಂದನಾ ಅರಿಸೀ ಜೋತೀ
ಯೋ ಕವೀತ ಆಖೇಂ ಇಬ್ರಾಹೀಮ ಸೊಂಸಾರ ಗುರೂಪತಿ

ಚಂದ್ರ ಶಿವನಾದರೆ ಬೆಳದಿಂಗಳು ಅವನ ಹಣೆಯ ಮೇಲಿನ ವಿಭೂತಿ, ಚಂದ್ರನು ದೇಹದ ಪ್ರತಿ ಛಾಯಯಾದರೆ ಬೆಳದಿಂಗಳು ಕನ್ನಡಿಯಲ್ಲಿ ಕಾಣುವ ಜ್ಯೋತಿ. ಈ ಕವಿತೆಗಳು ಇಬ್ರಾಹಿಮನ ಕಣ್ಣುಗಳಾದರೆ ಜಗತ್ತು [ಆತನ] ಜಗದ್ಗುರು

ದೋಹಾ-೭

ಲೋಅನ ಬಿಛ ಪರಛಾಈ ಪೀಯು ಕೀ ಮೂರತ ಅಚರಜ ಚಮತ್ಕಾರ
ಇಬ್ರಾಹೀಮ ಮಹಾ ಸುಂದರ ಯೂಸುಫ ಪವಿತ್ತರ ಭಯಾ ಕೂಪ ದೀಜೆ ಡಾರ

ಕಣ್ಣಿನ ಮಧ್ಯ ಸಿಕ್ಕಿ ಹಾಕಿಕೊಂಡ ಪ್ರಿಯತಮನ ಮೂರ್ತಿ ಒಂದು ಅದ್ಭುತ ಮತ್ತು ಆಶ್ಚರ್ಯ.
ಕತ್ತಲೆಯ ಭಯ ಮಿಶ್ರಿತ ನೀರಿಲ್ಲದ ಬಾವಿಯಲ್ಲಿ ಬಿದ್ದ ಪವಿತ್ರ ಯೂಸೂಪನಂತೆ ಮಹಾ ಸುಂದರನಾದ ಇಬ್ರಾಹಿಮ

ಗೀತ–೭

ದರ ಮುಕಾಮ ಭೈರವ

ನೌರಸ ಗಾವೋ ಗೀತ ಗುನೀಜನ ಗುಣ ಗಜಪತೀ
ಜಮ ಜಮ ಜೀವೋ ಆತಶಖಾನ ಸದಾ ಮಸ್ತ ಹತೀ

ಗುಣೀಜನರೇ ಗಜಪತಿಯ ಪ್ರಶಂಸೆಯಲ್ಲಿ ನವರಸ ಗೀತೆಗಳನ್ನು ಹಾಡಿರಿ.
ಆತಶಖಾನ ಆನೆಯು ಯಾವತ್ತಿಗೂ ಸದಾ ಸುಖಿಯಾಗಿ ಬಾಳಲಿ

ಬೈನ

ಆಪೇಂ ಪಾರದೀ ಹುವಾ ಬಹುತ ಚತುರ ಶಾನಾ
ಘಂಟ ನಾದ ಸುನಾ ಜಗ ಕೀಯಾ ದಿವಾನಾ
ಅಬ ದೀಪಕ ಹೋನಾ ಸೋ ತುಜ ನಾಂವ ಆತಶಖಾನಾ

[ಆತಶ್ ಖಾನ ಆನೆಯು] ತಾನೇ ಬಹು ಚತುರ ಹಾಗೂ ಜಾಣನಾಗಿದ್ದಾನೆ. [ಆನೆಯ] ಗಂಟೆಯ ನಾದವನ್ನು ಕೇಳಿ ಜಗತ್ತಿಗೆ ಹುಚ್ಚು ಹಿಡಿಸಿದೆ. ನಿನ್ನ ಹೆಸರು ಆತಿಶ್ ಖಾನ [ಆತಿಶ್ –ಬೆಂಕಿ, ಪ್ರಕಾಶ] ಇದ್ದುದರಿಂದ ಈಗ ಎಲ್ಲೆಡೆ ಪ್ರಕಾಶ ಬೀರಲಿ.

ಬೈನ

ಧನೀ ಧರ ತರೀ ದಮಾಮಾಂ ದಾಯಮ ಧರೇ ಹಾತಾ

ನಿತ ಖುಶಿಯಾಂ ಅಲೋಲ ಬಜಾವೆ ಭುಈಂ ಪರ ಮಾರೆ ದಾಂತಾ
ಬಾಜೆ ಫತಹ ನುಸ್‌ರತ ಅತೀತ ಅನಘಾತಾ

ಆನೆಯ ನಿರಂತರ ಘೀಳಿನಿಂದ ಧರಿಣಿಯು ಧನ್ಯಳಾದಳು.ತನ್ನ ಸೊಂಡಿಲನ್ನು ನೆಲಕ್ಕೆ ಅಪ್ಪಳಿಸಿ ಹರ್ಷದಿಂದ ಢೋಲಿನಂಥ ಶಬ್ದವನ್ನು ಹುಟ್ಟಿಸುತ್ತಿದೆ. ಅದರ ಈ ಸಮಯದ ಕೂಗು ವಿಜಯೋತ್ಸಾಹದ ಕಹಳೆಯಾಗಿದೆ.

ಅಭೋಗ

ಸೂಂಡ ಉಚಾವೆ ನಫೀರೀ ಬಜಾವೆ ಜಗ ರಿಝಾವೆ ದೀಲ
ಇಬ್ರಾಹೀಮ ಅಂಬರ ಲೋಕ ಅಪ್ ಪರಾಏ ರಾಖೆಂ ಮೀಲ
ಯೋ ಗಜ ನಾಂವ ತುಜ ಕ್ಯೂಂ ಸಾಜೆ ಇಸ್ರಾಫೀಲ

ಸೊಂಡಿಲನ್ನೆತ್ತಿ ಮೊಳಗಿಸಿದ ಅದರ ಘೀಳು ಎಲ್ಲರ ಮನಗಳನ್ನು ಆಕರ್ಷಿಸುತ್ತಿದೆ. [ಅದರಿಂದಾಗಿ] ಕೇಳು ಇಬ್ರಾಹಿಮ, ಸ್ವರ್ಗದಲ್ಲಿರುವವರೂ ಈಗ ಈ ಲೋಕದಲ್ಲಿರುವವರ ಸ್ನೇಹವನ್ನು ಬಯಸುತ್ತಿದ್ದಾರೆ. [ಆದರೆ] ಓ ಇಸ್ರಾಫೀಲನೆ ಈ ಆನೆಯ ಹೆಸರನ್ನು ನೀನು ಪಡೆಯ ಬಯಸಿದರೆ, ಅದು ಹೇಗೆ ನಿನಗೆ ಒಪ್ಪುತ್ತದೆ ?
ಇಸ್ರಾಫೀಲ = ದಿವ್ಯದೂತ

ದೋಹಾ–೮

ದಿರಗ ಧೊನೀ ಪಾಂಡು ಪೇಹ ಪೂರ ಪಲಖಾಂ ಪಾಲ
ಸೋಹೆ ತಾಪರ ತಾರಿಕಾ ಮಾನೋ ನಲಿಯನ ಅಂಜನ ನಾಲ

ಕಣ್ಣು ಬಿಳಿಯ ಬಣ್ಣದ ನೀರನ್ನು ಹರಿಸುವ ಒಂದು ನದಿ. ರೆಪ್ಪೆಗಳು ಅದರ ದಡ. ಕಣ್ಣಪಾಪೆಗಳೇ ಕಮಲವಾದರೆ ಕಾಡಿಗೆಯ ಗೆರೆಯೇ ಅದರ ದಂಟು.

ಗೀತ –೮

ದರ ಮಕಾಮ ಭೈರವ

ಮುಕ ಗೋರಾ ಫಟಿಕ ತಿಲಕ ಝಾಈ ಅಧರ
ತಿಲಕ ಅಕ್ಷತಾ ಸೋ ಈಶ್ವರ ಅಗನ ನೇತ್ರ

[ಗೌರವರ್ಣದ] ಸುಂದರಿಯ ಮುಖವು ಸ್ಫಟಿಕದಂತಿದೆ. ತುಟಿಯು [ಮುಖದ] ತಿಲಕವಾದರೆ, [ಹಣೆಯಮೇಲಿನ] ತಿಲಕದ ಅಕ್ಷತೆಯು ಈಶ್ವರನ ಅಗ್ನಿ ನೇತ್ರವಾಗಿದೆ.

ಬೈನ

ತಿಲಕ ಚಂದನ ಬಿಚ ಅಕ್ಷತಾ ಮಂಡಲ ಸಮುದ್ರ ಮಧ ಮೇರೂ ಪರ್ಬತಾ
ಯೋ ಉಪಮಾಂ ಮೋ ಮನಲಾಗೀ ನಿಸ ಪತೀ ಲಚ್ಛನ ಧರತಾ

ಚಂದನ ತಿಲಕದ ಮಧ್ಯ ಇರುವ ಅಕ್ಷತೆಯ ಬಿಂದು, ಸಮುದ್ರದ ಮಧ್ಯ ಇರುವ ಮೇರು ಪರ್ವತದಂತಿದೆ. ಈ ಲಕ್ಷಣವಾದ ಉಪಮೆಯು ನನ್ನ ಮನಕ್ಕೆ ಹೊಳೆಯುತ್ತಿದೆ.

ಅಭೋಗ

ಉಪಮಾಂ ಅಕೂಂ ಭಾಲ ತಿಲಕ ಜಗತ್ತಿರ
ಕೌನ ಕನಕ ಕಸೆ ಕಸೌಟೀ ಕರ
ಇಬ್ರಾಹೀಮ ಹೇಮ ಪರಚಿತ ತಾರಿಕಾ ಮಧೋತ ಪರ

ಇನ್ನೊಂದು ಉಪಮೆಯನ್ನು ಕೊಡುವೆ. ಹಣೆಯಲ್ಲಿರುವ ತಿಲಕವು ಜಗತ್ತಿನ ಬಂಗಾರವನ್ನು ಪರೀಕ್ಷಿಸುವ ಒರೆಗಲ್ಲಿನಂತಿದೆ. [ಆದರೆ] ಇಬ್ರಾಹೀಮನು ತನ್ನ ಮೇಣದಂಥ ಕಣ್ಣಿನ ಗುಡ್ಡೆಯಿಂದ ಈ ಬಂಗಾರವನ್ನು ಪರಿಚಯಿಸಿಕೊಂಡು ಬಿಟ್ಟಿದ್ದಾನೆ. [ಪರೀಕ್ಷಿಸಿದ್ದಾನೆ]

ಮೇಣವು ಬಂಗಾರದ ತುಣುಕುಗಳನ್ನು ಸಂಗ್ರಹಿಸುತ್ತದೆ. ಕವಿಯ ಕಣ್ಣ ಬೊಂಬೆಗಳು ಆ ಕೆಲಸ ಮಾಡಿದುವು ಎಂಬ ಭಾವ

ದೋಹಾ–೯

ವಿದ್ಯಾ ಭಾಂಡ ಜೀವನಾ ಯೋ ಅಚರಜ ಸುನ ಮೂರಖ ಮೋಯೋ ಪರಾನ
ಕೋ ಖೀಜೋ ನಾ ಇಬ್ರಾಹಿಮ ಸಂದೇಸಾ ಆಪಕಾ ಕಹೇ ಸಮೇತ ಮೋತೀಖಾನ

ಮೂರ್ಖ ನನ್ನ ಪ್ರಾಣವೇ ಕೇಳು, ವಿದ್ಯೆ ಇಲ್ಲದ ಜೀವನ ಎಂಥದ್ದು ? ಇಬ್ರಾಹಿಮನು ತನ್ನ ಮೋತೀಖಾನ [ತಂಬೂರಿ] ವನ್ನು ಜಗ್ಗಿ [ಬಾರಿಸುತ್ತ] ತನ್ನ ಸಂದೇಶವನ್ನು ಹೇಳುತ್ತಿದ್ದಾನೆ.

ಗೀತ-೯

ದರ ಮಕಾಮ ಭೈರವ

ಆತಶಖಾಂ ಕೀ ಬಿರಹೀ ಕೈಸೀ ಬರಸೇ ಆಗ
ಆಖಿರತ ಸುಮಂಗಲ ಭಈ ಕೌನ ಕನಿಷ್ಟ ಕೇರೇ ಭಾಗ

ಆತಶ್‌ಖಾನ [ಎಂಬ ಆನೆಯ] ವಿರಹದ ಬೆಂಕಿ ಹೇಗೆ ಮಳೆಗರೆಯುತ್ತಿದೆ ಎಂದರೆ, ಕೊನೆಯಲ್ಲಿ ಸುಮಂಗಲದ ಭಾಗ್ಯವನ್ನು ಕಳೆಯಲು ಯಾವ ದುರದೃಷ್ಟದ ಕಾರಣವೋ ತಿಳಿಯದು.

ಬೈನ

ಧಾಯಾ ಆಪ ಕೋಂ ಆಗಿನ ಭೈರೀ ಜಲ ಜಾನ
ತಲಾಜ ಬಿಚ ಡಾರ್‍ಯಾ ಡೀಂಗ ಗರಬ ಆನ
ಜಗ ಜಲ ಬುಡಬುಡಾ ಕ್ಯೋ ಕರ ಥಾರೆ ನಾ ಬೂಝೂಂ ಸುಭ್‌ಹಾನ

ತಾನು [ಆತಶಖಾನ ಆನೆ] ಬೆಂಕಿ, ನೀರಿನ ವೈರಿ ಎಂದೇ ತಿಳಿದು ಗರ್ವದಿಂದ ಕೆರೆಯ ಮಧ್ಯದಲ್ಲಿ ಧುಮುಕಿತು. ಜಗತ್ತು ಜಲದ ಬುದ್ಬುದ, ಬೆಂಕಿ ಅದೇಕೆ ಆರಲಿಲ್ಲವೋ, ದೇವರೇ [ನನಗೆ] ತಿಳಿಯದು

ಅಭೋಗ

ಸೂರ ಸರಾಯತ ಸರಾಂವ ಸಟ ಸಾರೆ ಸರಹಾಎಂ ಆತಶಖಾನ
ಚಿತಾರೀ ಚಿತ್ರ ಛಾಡೇ ಭಾಟ ಭೂಲೇ ಬಖಾನ
ಸಬ ದೇಖೊಂ ಠಕ ರಹೆ ಇಬ್ರಾಹೀಮ ಬೀಚ ಹೈರಾನ

ಶೂರರು, ವೀರರು, ರಣಧೀರರು ಎಲ್ಲರೂ ಆತಶಖಾನ [ಆನೆಯನ್ನು] ಹೊಗಳುತ್ತಿದ್ದಾರೆ. ಚಿತ್ರಕಾರ [ಕಲಾವಿದ] ಚಿತ್ರವನ್ನು ಬಿಡಿಸುವುದನ್ನು ಬಿಟ್ಟುಬಿಟ್ಟ. ಕವಿಗಳು ಹೊಗಳುವುದನ್ನು ಮರೆತು ಬಿಟ್ಟರು. ಎಲ್ಲವನ್ನೂ ನೋಡಿದ ಇಬ್ರಾಹಿಮನು ಮಧ್ಯದಲ್ಲಿ ಹೈರಾಣನಾಗಿದ್ದಾನೆ.

ದೋಹಾ-೧೦

ಕಾಗತ ಸೇತ ನಿರಮಲ ನಯನ ಸುಂದರಾ ಅಖ್ಬರ ಖತ ಕೇರ ಕಾಜರ
ಬೀಚ ಸಿಕಾ ತಾರಿಕಾ ಲಖೋಟೆ, ಲಪೇಟೆ ತಾಪರ

[ಪ್ರೇಯಸಿಯ] ಸುಂದರ ನಿರ್ಮಲ ಹಾಗೂ ಶ್ವೇತ ವರ್ಣದ ಕಣ್ಣುಗಳೇ ಕಾಗದ, ಅವುಗಳಿಗೆ ಹಚ್ಚಿದ ಕಾಡಿಗೆ ಅಕ್ಷರಗಳು. ಮಧ್ಯ ಕಾಣುವ ಗೊಂಬೆಗಳು ಸಿಕ್ಕಾ [ಮುದ್ರೆ], ರೆಪ್ಪೆಗಳು ಅವುಗಳನ್ನು ಮುಚ್ಚಿದ ಲಕೋಟೆ.

ಗೀತ–೧೦

ದರ ಮಕಾಮ ಭೈರವ

ಪ್ಯಾರೇ ಚಾಂದಾ ಆಖೂಂ ಕಂಥ ದೀನ ದುಈ ದುಖೀ
ಮನ ಚಾಹೀ ಸೋ ನಿಸ ಭಈ ಹಮ ತುಮ ರಹೇಂ ಅಬ ಸುಖೀ

ಪ್ರಿಯ ಚಂದ್ರ ನಿನ್ನಲ್ಲಿ ನನ್ನ ಮನದ ಮಾತನ್ನು ಹೇಳುವೆ. ಹಗಲಿನಲ್ಲಿ ನಾವಿಬ್ಬರೂ ದುಃಖಿಗಳು. ನಾವಿಬ್ಬರೂ ಬಯಸುವ ರಾತ್ರಿ ಈಗ ಬಂದಿದೆ. ಈಗ ನಾವು ನೀವು ಇಬ್ಬರೂ ಸುಖಿಗಳು

ಬೈನ

ಬುಝೂವೋ ದೀಪಕ ಕೌನ ತರಾಸೋಂ ದೀನಕರ ಆವೇಗಾ
ಘರ ಘರ ಭಪ ರಹ ಜಾಸೂಸ ಸಬ ಸುಧ ಪಹುಂಚಾ ವೇಗಾ
ಪೋಹ ಫಾಟೀ ತೋ ದೇಖ ಜಾ ಟಾಕ ಧಾವೇಗಾ

ದೀಪಗಳನ್ನು ಆರಿಸಿ ಬಿಡು. ಯಾರಿಗೆ ಗೊತ್ತು ಸೂರ್ಯ ಹೇಗೆ ಬರುತ್ತಾನೆಂಬುದು. ಮನೆ ಮನೆಗಳಲ್ಲಿ ಇರುವ [ದೀಪಗಳು] ಆತನ ಗೂಢಚಾರರು ಎಲ್ಲ ಸುದ್ದಿಯನ್ನು ಮುಟ್ಟಿಸುತ್ತಾರೆ. ಬೆಳಗು ಹರಿಯಿತೆಂದರೆ ಇದನ್ನೆಲ್ಲ ಬಿಟ್ಟು ಓಡಿ ಹೋಗಬೇಕಾಗುತ್ತದೆ.

ಅಭೋಗ

ಇಬ್ರಾಹೀಮ ನ ಸೋ ಜಾಗ ಐಸಾ ಪಿಉ ಕಹಾಂ ಪಾವೇಗಾ
ಸಿಂಧ್ಯಾಂ ಕರ ಸಿಂಗಾರ ಲೋಬ ಕಂಠಲಾವೇಗಾ
ರಾತ ಥೋಡೀ ಮದನ ಬಹುತ ಬನಾ ಉಠ ಜಾವೇಗಾ

ಇಬ್ರಾಹಿಮ ಮಲಗಬೇಡ, ಇಂಥ ಪ್ರೇಯಸಿ ಎಲ್ಲಿ ದೊರೆತಾಳು ? ಸ್ನಾನ ಮಾಡಿ ಶೃಂಗರಿಸಿಕೊಳ್ಳು. ಅವಳು ನಿನ್ನನ್ನು ಅಪ್ಪಿಕೊಳ್ಳುತ್ತಾಳೆ. ರಾತ್ರಿ ತುಂಬ ಕಡಿಮೆ ಅವಧಿಯದು ಮದನನೋ ಬಹಳ, ಅವಳು ಎದ್ದು ಹೋಗುತ್ತಾಳೆ.

ದೋಹಾ–೧೧

ಬಿರದನ ಧುಪಾರತೀ ಸುವರನ ಇಸ್ಬಂದ ಸಾರೆ ತಾರೆ,
ಮುಂಡಾಗಿನೀ ದಂಡೀ ಗಗನ ಪಖಾ ಫಿರೇ ಸದಾ ಪಹಾರೆ

ಸೂರ್ಯ ಧೂಪಾರತಿ ಅದರಲ್ಲಿ ಸಾಸಿವೆಯಂತೆ ಎಲ್ಲ ತಾರೆಗಳು ಉರಿಯುತ್ತಿವೆ.. ಮಂದಾಕಿನಿ ದಡದ ಮೇಲೆ ಗಗನವು ಬೀಸಣಿಗೆಯಂತೆ ಸದಾ ಸುತ್ತುತ್ತಿದೆ.

ಗೀತ –೧೧

ದರ ಮಕಾಮ ಹಜೀಜ
ಜಮ ಜಮ ಜೀಯೊ ಬಡೇ ಸಾಹಿಬ ಅಪ ಪೂತ ಸೀಸ ಪರ
ಜಬ ಲಗ ಅಭರಮ ಅಸುಮತಿ ನಿಸಪತಿ ದೀನಕರ

ಬಡೇ ಸಾಹಿಬರು [ತಾಯಿ] ಸಂತೋಷದಿಂದ ಬಾಳಲಿ. ಸೂರ್ಯ ಚಂದ್ರ, ಭೂಮಿ ಗಗನಗಳು ಇರುವವರೆಗೆ ನಿಮ್ಮ ರಕ್ಷೆ ನಿಮ್ಮ ಮಗನ ಮೇಲಿರಲಿ.

ಬೈನ

ಭಾಗ ಬುಲಂದ ದೀನ ದೀನ ಸದಾ ಜೋತ ಮಂಗಲ ಕರೋ
ಖುಶಿಯಾಂ ಜಪನ
ಗೀತ ತಂತ ತಾಲ ಮಂದಲ ರಾಜ ಭೋಗೋ ಆನಂದ ಸೋಂ
ಜುಗ ಜುಗ ಭೂ ಮಂಡಲ

[ನಿಮ್ಮ] ಅದೃಷ್ಟದ ನಕ್ಷತ್ರ ಜ್ಯೋತಿ ನಿರಂತರ ಉಜ್ವಲವಾಗಿರಲಿ.ಸಂಗೀತ ನೃತ್ಯಗಳ ಉತ್ಸವಗಳನ್ನು ಸಂತೋಷದಿಂದ ಜರುಗಿಸಿರಿ. ಯುಗಯುಗಗಳ ವರೆಗೆ ಭೂಮಂಡಲದ ರಾಜ್ಯವನ್ನು ಆನಂದದಿಂದ ಭೋಗಿಸಿರಿ.

ಅಭೋಗ

ಮನ ಸಾಗರ ದಾನ ಮುಗತಾ ಚಕರಂಗ ಜಗ ಪೂರ ಸರಸ
ಸಯ್ಯದ ಮುಹಮ್ಮದ ಪೀರ ಮದತ ಯೋ ರೋಶನಾಈ ಸುರಸ
ಇಬ್ರಾಹೀಮ ಪಾಯಾ ಉತ್ತಮ ಮನಕಾ ನಾರೀ ನೌರಸ

ಮನಸ್ಸೊಂದು ಸಮುದ್ರ, ದಾನವೇ [ಅದರಲ್ಲಿಯ] ಮುತ್ತು. ಈ ಜಗತ್ತು [ಆ] ಮುತ್ತುಗಳನ್ನು ತಿನ್ನುವ ಹಂಸ. ಸಯ್ಯದ ಮಹಮ್ಮದ ಪೀರರ ಬೆಂಬಲ, ಅವರ ತೇಜೋಮಯ ದರ್ಶನದಿಂದ ಇಬ್ರಾಹಿಮನು ಉತ್ತಮ ಮನಸ್ಸಿನ ನವರಸ ಗುಣಗಳ ನಾರಿಯನ್ನು ಪಡೆದಿದ್ದಾನೆ.

ದೋಹಾ-೧೨

ಅಗಾಸ ಉಪಮಾ ಬುಧ ಬಲ ಸಾಂಚೀ ಸಾರಾ ಉರ್ಗುನ ಸಾರೇ
ನಿಸಪತಿ ಕಿಯಾ ಬುರ್ದ ದಿನಕರ ಬಾಜೀ ಹಾರೇ

ಆಕಾಶವು ಬುದ್ಧಿಬಲ [ಚದುರಂಗ] ಆಟದ ಮಣೆಯಂತೆ. ತಾರೆಗಳೆಲ್ಲವೂ ದಾಳಗಳು. ಚಂದ್ರ ಎದುರಾಳಿಯಾದ. ಸೂರ್ಯ ಪಂದ್ಯದಲ್ಲಿ ಸೋತನು.

ಗೀತ –೧೨

ದರ ಮಕಾಮ ಮಾರೂ

ಝುಲಕತ ನಿಕಲ್ಯಾ ನಿಸ ಚಾಂದ
ಆಪೇಂ ಪಾರದೀ ಹೋ ಲಿಯಾ ಕೀರನ ಕಾ ಫಾಂದಾ

ಹೊಳೆಯುತ್ತ ಬಂದ ಚಂದ್ರ, ತಾನೆ ತನ್ನ ಕಿರಣಗಳ ಜಾಲದಲ್ಲಿ ಸಿಕ್ಕಿ ಬಿದ್ದ.

ಬೈನ

ಅಜಬ ಘನ ಕ್ಯೊಂ ಕರ ಜಾಯಾ ಭಾರಾ
ಮತ ಐಸೀ ನಾ ದೇಖೆ ಕೋಈ ಫಿರೇ ನವಾರಾ
ಜೇತೇ ತಾರೆ ಗೋದ ಭರ ಲ್ಯಾಯಾ ಚಾರಾ

ಅದ್ಭುತ ! ಆ ಜಾಲದಿಂದ ಹೊರಬಂದ, ಯಾರೂ ನೋಡದಂತೆ ಸುತ್ತೆಲ್ಲ ಅಲೆದಾಡಿದ. ಸಾಧ್ಯವಿದ್ದಷ್ಟು ತಾರೆಗಳನ್ನು ತನ್ನ ಮಡಿಲ್ಲಿ ತುಂಬಿಕೊಂಡ.

ಅಭೋಗ

ಚಂದನಾ ಅಮೃತ ಜಲ ಪುರ ನಿರ್ಮಲಾ
ಚಂದ ಕೀರನ ಡೋರೀ ಬೂನ ಮೇಲೇ ಚಾಲಾ
ಇಬ್ರಾಹೀಮ ಮೀನ ನಈಂ ಪೂಲ ಖೀಲೇ ಕಮಲಾ

ಬೆಳದಿಂಗಳು ಅಮೃತಜಲದಂತೆ ಪೂರ್ಣವಾಗಿ ನಿರ್ಮಲವಾಗಿದೆ.. ಚಂದ್ರನು ಹೆಣೆದ ಕಿರಣ ಜಾಲವು ದೂದೂರ ಹರಡಿದೆ. ಇಬ್ರಾಹಿಮನು ಮೀನ, ಅವನ ಕಣ್ಣುಗಳು ಅರಳಿದ ಕಮಲ.

ಗೀತ–೧೩

ದರ ಮಕಾಮ ಮಾರೂ

ಪ್ಯಾರೇ ಪ್ಯಾರೀ ಏಕ ಫಲ
ಹಾ ಜ್ಯೂಂ ಫೂಲ ಥೀಂ ಬಿವುರೆ ಫೂಲ ಬಾತ

ಪ್ರಿಯಕರ, ಪ್ರೇಯಸಿಯರು ಒಂದುಗೂಡಿದರು. ಅವರ ಮಾತುಗಳು ಹೂವುಗಳಿಂದ ಬರುವ ಪರಿಮಳದಂತಿದೆ.

ಬೈನ

ಕಿತನಾ ದೇಖೂಂ ಯೋ ಮುಖ
ಇನ ನೈನೋಂ ಥೀಂ ಸಬ ಹುಈ ಚೂಕ
ದಂದೀ ದೇವೇ ದಿಲ ಪರ ದಾಗ ದೂಖ

ಎಷ್ಟೆಂದು ನೋಡಲಿ ಈ ಮುಖವನ್ನು. ಎಲ್ಲ ತಪ್ಪು ಆದದ್ದು ಈ ಕಣ್ಣುಗಳಿಂದಲೇ. ಶತ್ರು ಹೃದಯದಮೇಲೆ ದುಃಖದ ಬರೆಯನ್ನು ಹಾಕುತ್ತಿದ್ದಾನೆ.

ಅಭೋಗ

ಜಲ ಬಿನ ಜ್ಯೂಂ ತಲಮಲೆ ಮೀನ
ಘಡೀ ಏಕ ಮುಂಜ ಜಾವೆ ದೀನ

ಇಬ್ರಾಹೀಮ ಚಕೋರ ಚಾಂದ ಬೀನ

ನೀರಿಲ್ಲದೆ [ನೀರಿನಿಂದ ಹೊರಬಿದ್ದ] ಮೀನು ಹೇಗೆ ತಳಮಳಿಸುತ್ತದೆಯೋ ಹಾಗೆ, ಒಂದು ಗಳಿಗೆ ನನಗೆ ಒಂದು ದಿನವಾಗಿದೆ. ಚಂದ್ರನಿಲ್ಲದ ಚಕೋರನಾಗಿದ್ದಾನೆ ಇಬ್ರಾಹಿಮ.

ಗೀತ–೧೪

ದರ ಮಕಾಮ ಆಸಾವರೀ

ಅಸಾವರೀ ಅಸ್ತ್ರೀ ಗೋರೀ ಚಂಪಕ ಸಾರ
ರಗತ ಪಿತಾಂಬರ ಕಂಚುಕೀ ನೀಲೀ ಸರ್ವ ಸಿಂಗಾರ

ಆಸಾವರಿ ರಾಗದ ನಾಯಕಿ ಗೌರಾಂಗನೆಯಾದ ಯುವತಿ, ಅವಳ ಗೌರವರ್ಣವು ಚಂಪಕ ಹೂವಿನದ್ದಾಗಿದೆ. ಅವಳು ರಕ್ತವರ್ಣದ ಸೀರೆಯನ್ನುಟ್ಟು, ನೀಲವರ್ಣದ ಕುಪ್ಪಸವನ್ನು ತೊಟ್ಟು ಸರ್ವ ಶೃಂಗಾರ ಭೂಷಿತೆಯಾಗಿದ್ದಾಳೆ.

ಅಂತರಾ

ಜೀಂತಿ ಜೀಂತಿ ಹಂಸ ಬೋಲತ ಪೀ
ಬೈನ ಚೌಪರ ಘಾಸೆ ಡಾರ
ಐಂಚತ ವಸ್ತ್ರ ನರಕರ ಧರನಾರ

ಪಕಪಕನೆ ಅವಳು ನಗುತ್ತ ಮಾತನಾಡುತ್ತಾಳೆ. ಇನ್ನಷ್ಟು ಚೆಲುವಾಗಿ ಕಾಣುತ್ತಾಳೆ. ತನ್ನ ಉಡುಪನ್ನು ಬಲವಾಗಿ ಬಿಗಿಯುತ್ತ ಅವಳು ಪುರುಷನ ಕೈಯನ್ನು ಹಿಡಿಯುತ್ತಾಳೆ.

ಅಭೋಗ

ಚಂಚಲ ಚಪಲ ಚಖ ಪೀತರಂ

ಕೊ ಅನೇಕ ಪ್ಯಾರ
ಯೋ ಲಚ್ಛನ ಆಖೇಂ ಇಬ್ರಾಹೀಮ ಕವಿತ ಕಾರ

ಚಂಚಲ ಚಪಲ ನೇತ್ರಗಳಿಂದ ಅವಳು ಪ್ರಿಯತಮನನ್ನು ಮತ್ತೆ ಮತ್ತೆ ನೋಡುತ್ತಿದ್ದಾಳೆ. ಈ ಲಕ್ಷಣಗಳನ್ನು ಇಬ್ರಾಹಿಮ ಕವಿ ಹೇಳುತ್ತಿದ್ದಾನೆ.

ಗೀತ –೧೫

ದರ ಮಕಾಮ ಆಸಾವರೀ

ಮೋತೀಖಾನ ಸಾಗರ ಉಪಮಾ ಪೂರ
ತಾ ಪರ ತಂತ ಕಲೋಲ ಲಹೊ ಗೌರ

ಮೋತೀಖಾನ [ತಂಬೂರಿ] ಸಮುದ್ರವಿದ್ದಂತೆ ಅದರ ತಂತಿಗಳಿಂದ ಹೊರಡುವ ನಾದಗಳು [ಸಾಗರದಲ್ಲಿಯ] ಸುಂದರ ತೆರೆಗಳಿದ್ದಂತೆ.

ಬೈನ
ಯೊ ಮುಗತಾ ಸಮುದ್ರ ವೊ ಜಲ ಖಾರೆ
ಯೇ ಜಲ ಮೀಠಹ ವೊ ಜಲ ಖಾರೇ

ಈ ತಂಬೂರಿಯು [ಮಧುರ ಸ್ವರಗಳ] ಮುತ್ತುಗಳಿಂದ ಕೂಡಿದ್ದರೆ ಆ ಸಮುದ್ರವು ಬರೀ ನೀರಿನಿಂದ ಕೂಡಿದೆ. ಮಧುರ ಸ್ವರಗಳ ನೀರು ಸಿಹಿಯಾಗಿದ್ದರೆ ಸಮುದ್ರದ ನೀರು ಉಪ್ಪು.

ಬೈನ

ವೋ ಪೂರ ಝುಕ ದಾದೂರ ಯೋ ಪೂರ ಗುನಿ ಜನ
ಏಕ ಜಲ ಜಿವು ಏಕ ವಿದ್ಯಾ ಮನ

ಆ ಸಮುದ್ರದಲ್ಲಿ ಕಪ್ಪೆಗಳು ವಟಗುಟ್ಟುತ್ತಿದ್ದರೆ, ಇದರಲ್ಲಿ ಪೂರ್ತಿಯಾಗಿ ಗುಣೀ

ಜನರಿದ್ದಾರೆ. ಸಮುದ್ರದ ನೀರಿನಲ್ಲಿ ಜಲಜೀವಿಗಳಿದ್ದರೆ, ಈ [ತಂಬೂರಿಯ] ಸಮುದ್ರದಲ್ಲಿ ವಿದ್ಯೆಯ ಮನಸ್ಸುಗಳಿವೆ.

ಅಭೋಗ

ಮೋ ಬಿದ್ದಿಯಾ ಅಧಿಕ ಕೃಪಾ ಕೀ ಪರವರದಿಗಾರ
ಗುರ ಇಬ್ರಾಹೀಮ ತಂಬೂರ ಕಾರ

ಸೃಷ್ಟಿಕರ್ತನು ನನಗೆ ಅಧಿಕ ಕೃಪೆಯನ್ನು ಮಾಡಿ ವಿದ್ಯೆಯನ್ನು ನೀಡಿ [ಈ] ಇಬ್ರಾಹಿಮನನ್ನು ತಂಬೂರಕಾರನನ್ನಾಗಿ [ತಂಬೂರಿ ವಾದಕನನ್ನಾಗಿ] ಮಾಡಿದ್ದಾನೆ.

ಗೀತ ೧೬

ದರ ಮಕಾಮ ದೇಸೀ

ಏಕ ನಾರ ದೇಖಿಯಾ ಖಡೀ ಸಾಮನೀ
ಪೂನಮ ರಾತ ಕೀ ಮಕರ ಚಾದನೀ
ಯಾ ಝುಮಕೆ ಮೇಘ ಋತ ಸೌದಾಮೀನೀ

ಎದುರಿಗೆ ನಿಂತ ಒಬ್ಬ ನಾರಿಯನ್ನು ನೋಡಿದೆ. ಹುಣ್ಣಿಮೆಯ ರಾತ್ರಿಯ ಮಕರ ಚಂದ್ರನ ಬೆಳದಿಂಗಳ ಚೆಲುವಿದೆ. ಅದು ಒಮ್ಮೊಮ್ಮೆ ವರ್ಷಾ ಋತುವಿನಲ್ಲಿಯ ಮಿಂಚಿನಂತೆ ಕಾಣುತ್ತಿದೆ.

ಬೈನ

ಬಹು ರೂಪ ಖೇಲೆ ಖೇಲ ಕಾಮಿನೀ
ಹೋನಾ ಜಾನೂಂ ತುರ್ಕನೀ ಬರಹಾಮಿನೀ
ಅಪೇಂ ನರರೂಪ ಆಪೇಂ ರೂಪ ಸುಹಾಗಿನೀ
ದಸರೂಪ ಈಸೂರಕೀ ಲಿಯಾಈ ನಿಶಾನೀ

ಕಾಮಿನಿಯು ಹಲವು ವಿಧದ ಆಟಗಳನ್ನು ಆಡುತ್ತಿದ್ದಾಳೆ. ಅವಳು ಮುಸಲ್ಮಾನಳೋ [ತುರ್ಕನೀ] ಬ್ರಾಹ್ಮಣಳೋ ನನಗೆ ಗೊತ್ತಿಲ್ಲ. ಒಮ್ಮೆ ನರ ರೂಪ ಮತ್ತೊಮ್ಮೆ ಮುತ್ತೈದೆಯ [ಸುಹಾಗಿನಿಯ] ರೂಪ. ಈಶ್ವರನ ಹತ್ತು ಅವತಾರಗಳ ಲಕ್ಷಣಗಳೂ ಅವಳಲ್ಲಿವೆ.

ಅಭೋಗ

ಚಿತಾರೀ ಚಿತರ ನ ಸಕೆ ಹೊಯ ಮಾನೀ
ಜ್ಯೂಂ ಮೌಜ ಪರ ಮೌಜ ಆವೇ ಪಾನೀ
ಬೋಲೀ ಬಾತಾ ಶೀರೀಂ ಜುಬಾನೀ
ಇಬ್ರಾಹೀಮ ಮಿಲತೀಂ ಚರನ ಧರೋಂ ಪೇಶಾನೀಂ

[ನಮ್ಮ] ಮಾನಿ [ಸಮಕಾಲೀನ ವಿಖ್ಯಾತ ಚಿತ್ರಕಾರ] ಕೂಡ ಅವಳ ಚಿತ್ರವನ್ನು ಬಿಡಿಸಲಾರ. ಅವಳ ಸೌಂದರ್ಯದ ಕಾಂತಿಯು ನೀರಿನ ಮೇಲಿನ ತೆರೆಯಂತೆ ಅಲೆ ಅಲೆಯಾಗಿ ಬರುತ್ತಿದೆ. ಅವಳು ತನ್ನ ಮಧುರ ವಾಣಿಯಿಂದ ಸವಿಯಾದ ಮಾತುಗಳನ್ನಾಡುತ್ತಿದ್ದಾಳೆ. [ಒಂದು ವೇಳೆ] ಅವಳು ಇಬ್ರಾಹಿಮನಿಗೆ ದೊರೆತರೆ, ಅವನು ಅವಳ ಪಾದಗಳ ಮೇಲೆ ತನ್ನ ಹಣೆಯನ್ನು ಇಡಬಯಸುತ್ತಾನೆ.

ಗೀತ –೧೭

ದರ ಮಕಾಮ ಪೂರಬಾ

ಮುಖ್ದೂಮ ಸಯ್ಯದ ಮುಹಮ್ಮದ ಹುಸೈನೀ ಗೇಸೂದರಾಜ
ಆಶೀಕ ಶಹಬಾಜ ಸರಫರಾಜ

ಮುಖ್ದೂಮ ಸಯ್ಯದ ಮುಹಮ್ಮದ ಹುಸೈನೀ ಗೇಸೂದರಾಜರ ಸ್ಥಾನ ಪ್ರಿಯವೆನಿಸುವ ರಾಜಗಿಡುಗ [ಶಹಬಾಜ] ಗಿಂತಲೂ ಉನ್ನತ ಸ್ಥಾನವಾಗಿದೆ.

ಬೈನ

ತುಮಾರೀ ಕಬ್ರ ಸೀಂಪೀ
ಸಯ್ಯದ ಮುಹಮ್ಮದ ಆಛೀ ಮೋತೀ
ಊಪರ ಗಲೀಫ ದರ್‍ಯಾ ಆಸಮಾನ ಗುಮತೀ
ದಿವೆ ತಾರೆ ಕಲಸ ಕುದರತೀ

ನಿಮ್ಮ ಸಮಾಧಿ ಸಿಂಪೆ, ಅದರ ಮಧ್ಯ ಇರುವ ಮುತ್ತು ಸಯ್ಯದ ಮುಹಮ್ಮದರು. ಸಮುದ್ರವು ಅದರ ಮೇಲಿನ ಹೊದಿಕೆಯಾದರೆ [ಗಲೀಫಾ] ಆಕಾಶವೇ ಗುಮ್ಮಟ, ತಾರೆಗಳು ದೈವದತ್ತ ಕಲಶಗಳು.

ಅಭೋಗ

ಬಿಹಿಶ್ತ ದರ್ವಾಜೇ ಫೆರಿಶ್ತೆ ಖಿದಮತಗಾರ
ಊದಕಾ ಧುವಾ ಭರೇ ಹರ ದೋ ಜಹಾ ಪಾರಾ
ಮುಕಾಮ ಇಬ್ರಾಹೀಮ ತುಮಾರಾ ಥಾರಾ

ಸ್ವರ್ಗವೇ ದ್ವಾರ, ಅಲ್ಲಿ ಸೇವಕರು ದೇವದೂತರು.ಎರಡೂ ಲೋಕಗಳಲ್ಲಿ ಲೋಬಾನದ [ಸುಗಂಧ] ಹೊಗೆ ಅಪಾರವಾಗಿ ತುಂಬಿದೆ. ಅವರ ವಿಳಾಸ 'ಮುಕ್ಕಾಮ ಇಬ್ರಾಹಿಮ'

• ಇಬ್ರಾಹಿಮ = ಇಸ್ಲಾಮ ಧರ್ಮ ಸಂಸ್ಥಾಪಕರಾದ ಇಬ್ರಾಹಿಮ. ಅವರಿರುವುದು ಪವಿತ್ರ ಕಾಬಾದಲ್ಲಿ.

ಗೀತ–೧೮

ದರ ಮಕಾಮ ಬರಾಡೀ

ಮೋ ಸೋಗೀ ತುಂಬ ಮಈಂ ಜಲ ಥೀ

ಕಾಡಿಗೆಯ ಗೆರೆ ನೀರಿನ ಕಾಲುವೆಯ ಹಾಗೆ

ಅಂತರಾ

ಪಲಖಾ ಥೋರ ನೈನ ಭಾಗೀರಥೀ
ಕಣ್ಣಿನ ಎವೆಗಳೇ ದಂಡೆ, ಕಣ್ಣುಗಳೇ ಭಾಗೀರಥಿ.

ಅಭೋಗ

ಜುಲ್ಫ ತೇರೀ ಗಲ ಆಕಸ ಪೂತರೀ ಮೇರೋ ಮನ ಹತೀ
ಇಬ್ರಾಹೀಮ ತಾನೂಡ ಜಡಾಊ ಯು ದೀಪೆಂ ಪಾಛೆಂ
ಪಾರದ ಆ ವತ ಛತ್ರಪತಿ

ನನ್ನ ಕಣ್ಣಬೊಂಬೆಯ ಮೀನು ಮತ್ತು ಸಲಗಕ್ಕೆ ನಿನ್ನ ಮುಂಗುರುಳು ಜಾಲ ಹಾಗೂ ಅಂಕುಶವಿದ್ದ ಹಾಗೆ. ಇಬ್ರಾಹಿಮ ಹೇಳಿದ, ಬೇಟೆ ರತ್ನಗಳಿಂದ ಚಿಮ್ಮುವ ಬೆಳಕು, ಛತ್ರಪತಿಯು ಹಿಂದೆ ಬರುತ್ತಿದ್ದಾನೆ.

ಗೀತ–೧೯

ದರ ಮಕಾಮ ತೋಡೀ
ಸಂಘಾತೀ ಸಂಘಾತ ಸಬ ಸಹೇಲಿಯಾ ಸಂಗ
ಕರೆ ಪೀರತ ಕಿರೀಯಾ ಬಾಜಿಯಾ ಝೂಂಟ ಧರನೀ ಜಂಗ

ಗೆಳತಿಯರೆಲ್ಲ ಜೊತೆಯವರೊಂದಿಗೆ ಆಡುತ್ತಿರುವರು ಆಟ, ಒಬ್ಬರೊಬ್ಬರ ಕೇಶಗಳನ್ನು ಜಗ್ಗುತ್ತ ಪ್ರೇಮಸಲ್ಲಾಪದ ರಣರಂಗದಲ್ಲಿಹರು.

ಬೈನ

ಹುಯಾ ಹೊ ಲಟ ಪಟ ಸಟ ಬಿಟ ರಂಗ ತರಂಗ
ಜೇ ದೇಖೇ ಭೂಲೇ ಮನ ನೌರತ್ನ ನಾರೀ ಅಂಗ

ಲಟಿ ಪಟ, ಸಟಪಟ ಎಂದು ಬಣ್ಣವನ್ನು ಎರಚುತ್ತ ಅದರಲ್ಲಿ ಒದ್ದೆಯಾಗಿಹರು. ನವರತ್ನದಂತಿರುವ ಅವರ ಅಂಗಗಳನ್ನು ನೋಡಿದವನು ಮೈಮರೆಯುವನು.

ಬೈನ

ಕದಮ ಕಸ್ತೂರೀ ಕೇಸರೀ ಕುಸುಮ ರಂಗ
ಡೋಲತಿಯಾ ಝೂಮತಿಯಾ ಮದ ಶರಾಬ ಭಂಗ

ಕದಮ್ ಕಸ್ತೂರಿ ಕೇಸರಿಯ ಕುಸುಮಗಳ ಬಣ್ಣದಲ್ಲಿ ಮಿಂದಿರುವ ಅವರು ಶರಾಬು ಮತ್ತು ಭಾಂಗಗಳ ಮತ್ತಿನಲ್ಲಿ ತೂಗುತ್ತಿದ್ದಾರೆ ತೊನೆಯುತ್ತಿದ್ದಾರೆ.

ಬೈನ

ಉತ್ತಮ ಭೂಗನ ಗಾವೇರಿ ನೌರಸ ಆ ಹಂಗ
ತಂಬೂರಾ ರಬಾಲು ಜಂತರ ಕಮಾಚ ಚಂಗ
ಧೋಲಕ ಡಫ ಹುಡಕ ತಾಲ ಬಿರ್ದಂಗ
ಶನಾಈ ಪಾವಾ ನಯ ಖಾಲೂ ಉಪಂಗ

ಶ್ರೇಷ್ಠ ಬಹುಗುಣಿಗಳು ನವರಸ ರಾಗಗಳನ್ನು ಹಾಡುತ್ತಿದ್ದಾರೆ. ತಂಬೂರಿ, ರಬಾಬ್, ಜಂತರ್ ಕಮಾಚ್ ವಾದ್ಯಗಳನ್ನು ನುಡಿಸುತ್ತಿರುವರು. ಢೋಲು, ಡಪ್ಪು, ಹುಡುಗ್, ತಾಲ ಮೃದಂಗಗಳನ್ನು ಬಾರಿಸುತ್ತಿರುವರು. ಶಹನಾಯಿ ಕೊಳಲು, ಖಾಲೂಗಳನ್ನು ಊದುತ್ತಿರುವರು.

ಅಭೋಗ

ಇಬ್ರಾಹೀಮ ಬಸಂತ ಖೇಲೇ ಸಮುದ್ರ ಗಂಗ
ಭಾನೂ ಬಸಂತ ಬಿನತಿ ಕರೇಂ ಅರುಣ ರಂಗ ಮಂಗ

ಸಮುದ್ರ ಗಂಗೆಯಲ್ಲಿ ಇಬ್ರಾಹಿಮನು ಹೋಳಿ [ಬಸಂತ] ಹಬ್ಬವನ್ನು ಆಚರಿಸುತ್ತಿರುವನು. ಬಸಂತದಲ್ಲಿ ಅರುಣ ರಾಗದ ಹಳದಿ ಗುಲಾಬಿ ಬಣ್ಣಗಳನ್ನು ನೀಡೆಂದು ಸೂರ್ಯನನ್ನು ವಿನಂತಿಸಿಕೊಳ್ಳುತ್ತಿದ್ದಾನೆ.

ಗೀತ-೨೦

ದರ ಮಕಾಮ ತೋಡೀ
ಶರೀರ ಶೀಶಾ ನಿರಮಲ ಪೂರ ರಗತ ದಾಖ ಶರಾಬ
ಮದನ ಸದಾ ಮಸ್ತ ಮತವಾಲಾ ಭೋಜ ದಿಲ ಕಬಾಬ

ಶರೀರವು ನಿರ್ಮಲವಾದ ಒಂದು ಗಾಜಿನ ಬಾಟಲಿ, ಅದರಲ್ಲಿ ರಕ್ತ ರೂಪದ ದ್ರಾಕ್ಷಾರಸವನ್ನು ತುಂಬಲಾಗಿದೆ. ಮದವೇರಿದ ಮದನನು ಈ ಶರಾಬನ್ನು ಕುಡಿಯುತ್ತಾನೆ. 'ಹೃದಯ' ಕಬಾಬನ್ನು ತಿನ್ನುತ್ತಾನೆ.

ಬೈನ

ದೀಪಕ ಸೋ ಪರಾನ ಬಾದಮಾನ ಸಂವಾರ್ಯಾ ತನ
ಕಾಜರ ಕೇರೆ ಝೂಟ ಧುವಾ ದಿಸೆ ಅಂಜನ

ಪ್ರಾಣವೊಂದು [ಜೀವ] ದೀಪ. ಅದು ಶೃಂಗರಿಸಿದ ಶರೀರದ ಮೇಲೆ ಇಟ್ಟ ಕಂದೀಲಾಗಿದೆ. ಅದರಲ್ಲಿಯ ಕಪ್ಪು ಕಾಡಿಗೆ ಸುಳ್ಳು ಹೊಗೆ ಅಂಜನದಂತೆ ಕಾಣುತ್ತಿದೆ.

ಅಭೋಗ

ತೇಲ ಶರಾಬ ರಗಾಂ ಬತ್ತಿಯಾಂ ಧರೇ ತೋಲಾ ಮನ
ಇಬ್ರಾಹೀಮ ಸುಲಗಾಯೆ ಸದಾ ಜನಮ ತೆ ಸರ ಪವನ

ಶರಾಬು ಎಣ್ಣೆ, ನರಗಳು ಬತ್ತಿಗಳು, ಮನಸ್ಸು ಅದರ ಕುಡಿಕೆ. ಇಬ್ರಾಹಿಮನು ಜನ್ಮದಾರಭ್ಯ ಅವುಗಳನ್ನು ಸ್ವರ ರೂಪದಿಂದ ಸುಡುತ್ತಿದ್ದಾನೆ.

ಗೀತ –೨೧

ದರ ಮಕಾಮ ತೋಡೀ

ಸೋಮ ಬಿಚ ನೂರ ಉತ್ತಮ ಉಚಾಯಾ ಕರತಾರ
ಕಲಂಕ ಝೂಟ ಜಹಾಂ ಖಾರ ತಹಾ ಅಂದಕಾರ

ಸೃಷ್ಟಿಕರ್ತನು ಚಂದ್ರನ ಮಧ್ಯದ ಉತ್ತಮ ಬೆಳಕನ್ನು ಕಿತ್ತಿದನು, ಅವನ ಮುಖದಲ್ಲೊಂದು ಮೂಡಿತು ಕಳಂಕ. ಅದೊಂದು ಕತ್ತಲ ಕೂಪ.

ಬೈನ

ಬಹುರ ಉಸ ನೂರ ಸೂರತ ಸಂವಾರ್ಯಾ ಜಮಾಲ
ಹುರಾಂ ಪರ್ಯಾ ಭಪ್ಯಾ ಕೋ ಅಗಾಸ ಕೊ ಪತಾಲ

ನಂತರ ಆ ಬೆಳಕಿನಿಂದ ಸುಂದರ ಮುಖವನ್ನು ಸೃಷ್ಟಿಸಿದನು. ಹಾಗೆ ಸೃಷ್ಟಿಸಿದ ಅಪ್ಸರೆ, ಯಕ್ಷಿಯರಲ್ಲಿ ಕೆಲವರು ಆಕಾಶದಲ್ಲಿ ಅವಿತುಕೊಂಡರೆ ಇನ್ನು ಕೆಲವು ಪಾತಾಳ ಸೇರಿದರು.

ಅಭೋಗ

ಇಬ್ರಾಹೀಮ ಸಬ ಸುಂದರೀ ದೇಖ್ಯಾ ಯೋ ಲಚ್ಛನ ಹೈ ಕಹಾಂ
ಜಾತ ಚಾಂದ ಸುಲತಾನ ನಾಂವ ಬೀಬಿ ಮುಲ್ಕೀ ಜಹಾನ

ಇಬ್ರಾಹಿಮನು ಎಲ್ಲ ಸುಂದರಿಯರನ್ನು ಕಂಡಿದ್ದಾನೆ. ಆದರೆ ಚಾಂದ ಸುಲ್ತಾನಾಳಲ್ಲಿರುವ ಲಕ್ಷಣಗಳು ಯಾರಲ್ಲಿವೆ ? ಅವಳ ಹೆಸರು 'ನಯಲ್ಕೆ ಜಹಾಂ'

- ಚಾಂದ ಸುಲ್ತಾನಾ = ಎರಡನೆಯ ಇಬ್ರಾಹಿಮನ ಹೆಂಡತಿಯಲ್ಲೊಬ್ಬಳು. ಅವಳನ್ನು 'ಮಲಿಕಾಎ ಜಹಾಂ' ಎಂದೂ ಕರೆಯುತ್ತಿದ್ದರು. ಅವಳ ಹೆಸರಿನ ಸುಂದರ ಸೂಕ್ಷ್ಮ ಕೆತ್ತನೆಯ ಮಸೀದಿಯೊಂದು ವಿಜಯಪುರದಲ್ಲಿದೆ.

ಗೀತ-೨೨

ದರ ಮಕಾಮ ತೋಡೀ

ಧನೀ ಬೀಬೀ ಚಾಂದ ಸುಲ್ತಾನ ಮುಲ್ಕೀ ಜಹಾನ
ಉತ್ತಮ ಸುಂದರ ನಾರೀ ಐಸೀ ಹೈ ಭೀ ಕಹಾ

ಧನ್ಯಳು ಬಿಬಿ ಚಾಂದ ಸುಲ್ತಾನ, ಮಲಿಕಾ ಜಹಾಂಳು, ಅವಳಂತಹ ಉತ್ತಮ ಸುಂದರ ಹೆಣ್ಣು ಮತ್ತೆಲ್ಲಿ ದೊರೆಯುವಳು ? [ಎಲ್ಲಿಯೂ ದೊರೆಯುವುದಿಲ್ಲ]

ಬೈನ

ರೋಮ ರೋಮ ಚಾತುರ ಸಬ ಭೇದ ಸಂಪೂರ ಅತಿ ಮಹಾ ಗುಣ
ಸಾರ್‍ಯಾ ಲಾಜ ಠಕ್ಯಾಂ ನಾರ್‍ಯಾ ಐಸೀ ತವ ಕೀರತ ಸುನ

ರೋಮ ರೋಮಗಳಲ್ಲೂ ಅವಳು ಬಲು ಜಾಣೆ, ಮಹಾ ಗುಣವಂತಳು. ನಿನ್ನ ಈ ಕೀರ್ತಿಯನ್ನು ಕೇಳಿ ಎಲ್ಲ ನಾರಿಯರು ಲಜ್ಜಿತರಾದರು.

ಅಭೋಗ

ಅಮೃತ ವಚನ ಬುಧವಂತ ನಿರ್ಮಲ ಮನ ಏಕ ಚಿತ ಏಕ ಭಾವ
ಇಬ್ರಾಹೀಮ ರೀಝ್ಯಾ ಪಲ ಪಲ ಲೋಚನ ಪನ ಕರ ಚಲಮೆಂ ಆಂವ

ಮಾತು ಅಮೃತ, ಬುದ್ಧಿವಂತೆ, ನಿರ್ಮಲ ಮನದವಳು. ಒಂದೇ ಕನಸ್ಸು, ಒಂದೇ ಭಾವ. ಇಬ್ರಾಹಿಮನು ಕ್ಷಣ ಕ್ಷಣವೂ ಅವಳತ್ತ ಒಲಿದು, [ತನ್ನ] ಕಣ್ಣುಗಳನ್ನೇ ಪಾದಗಳಾಗಿಸಿ ನಡೆಯುವನು.

ಗೀತ–೨೩

ದರ ಮಕಾಮ ಮಲಾರ

ಮೋತೀಖಾ ಬಾಜಾ ಕೋ ಭೇದ ಕೋವಾಕೆ ಬತಾಂವ ಉತ್ಪತ ಲಚ್ಛನ

ಮೋತಿಖಾನ ತಂಬೂರಿಯ ವಿಶೇಷತೆಯನ್ನು ಅದರ ಉತ್ಪತ್ತಿ, ಲಕ್ಷಣಗಳನ್ನು ಹೇಳಲೆ ?

ಅಂತರಾ

ಕಾಠ ಕಲ್ಪಬೃಚ್ಛ ತಜ ಬಕಲಾ ಜರ ಬಾಲಾ ತಂಬೂಲ ಪತ್ರ ಫಲ
ರಸಾಲ ಚಂಪಕ ಸುಮನ

[ಅದನ್ನು] ಕಲ್ಪವೃಕ್ಷ ಕಟ್ಟಿಗೆಯಿಂದ ಮಾಡಿದೆ. ಅದರ ಬೇರು ಗಿಡಮೂಲಿಕೆಯದು. ತೊಗಟೆ ದಾಲಚಿನ್ನಿಯದು ಫಲ ಹಣ್ಣಿನ ರಸ ಚಂಪಕ ಕುಸುಮ [ಪರಿಮಳ]

ಅಭೋಗ

ಕಸ್ತೂರೀ ಕಪೂರ ಭೂಮ ಕೇಸರೀ ಪಾಲ ಮಕರಂದ ಉದ ಮಾಲೀ ಮದನ
ಇಬ್ರಾಹೀಮ ಮುಲ್ಕೀ ಜಹಾ ತಂತ ಘೋರ ಜೀಲ ಸ್ವರ ದೋಊಕೊ
ಏಕ ಮಂದಿರ ಮನ

ಕಸ್ತೂರಿ ಕರ್ಪೂರ ಭೂಮಿಯಲ್ಲಿ ನೆಟ್ಟ [ಅದನ್ನು] ಕೇಸರಿಯಿಂದ ಪೋಷಿಸಲಾಗಿದೆ. ಮಕರಂದ ಎರೆಯಲಾಗಿದೆ. [ಅದರ] ತೋಟಿಗ ಮದನನು. ಇಬ್ರಾಹಿಮ, ಮುಲ್ಕೆ ಜಹಾಂ ಎಂದರೆ ಅದರ ತಂತಿಗಳಿಂದ. ಬರುವ ಒಂದೇ ಸ್ವರ ಆಗಿದ್ದು, ಒಂದೇ ಮನ ಮಂದಿರದವರಾಗಿದ್ದೇವೆ.

ಗೀತ –೨೪

ದರ ಮಕಾಮ ಮಲಾರ

ಗಣಪತಿ ಮೂರತ ಹಸ್ತ ಮೇಘ ಮದ ಬರಖತ ಪಾನೀ

ಗಣಪತಿ ಮೂರ್ತಿಯು ಹಸ್ತಾ [ನಕ್ಷತ್ರದಂತಿದೆ. ಹಸ್ತಾ ನಕ್ಷತ್ರದಲ್ಲಿ ಹೇಗೆ] ವರ್ಷಾಧಾರೆಯಾಗುತ್ತದೆಯೋ ಹಾಗೆ ಆತನ ಹಣೆಯಿಂದ 'ಮದ' ಹೊರಬೀಳುತ್ತದೆ.

ಅಂತರಾ

ದಂತ ದಾಮಿನೀ ಘಂಟ ಘೋರ ಘೋರ ಗೋರ ಮಂಡಾನ
ಭಾಲ ಬಿಧು ಬಾನೀ

[ಆತನ] ದಂತಗಳು ಮಿಂಚು, ಗಂಟೆಯ ನಾದ ಮೋಡಗಳ ದನಿಯಾದರೆ, ಆತನ ಹಣೆಯೇ ಕಾಮನ ಬಿಲ್ಲು. ಆತನ ವಾಣಿಯು ಅಮೃತ ಸಮಾನವಾಗಿದೆ.

ಅಭೋಗ

ಸರಸ್ವತಿ ಪವಿತ್ತರ ಸ್ವಾಂತ ಘನ ಜಲ ಕಸೆ ನ ಜೀ ಜಾನೀ
ಇಬ್ರಾಹೀಮ ನೌರಸ ಮುಗತಾ ನಿದ್ಸತ ಯಾ ಕಾರನ ನಿಹಿಚೆಂ ಮಾನೀಂ

ಪವಿತ್ರ ಸರಸ್ವತಿಯು ಸ್ವಾತಿ ನಕ್ಷತ್ರದ ಮೋಡಗಳಂತೆ. ಸ್ವಾತಿ ನೀರಿನ ಮಹಿಮೆ ಯಾರಿಗೆ ಗೊತ್ತಿಲ್ಲ. ಅಂತೆಯೇ ಇಬ್ರಾಹಿಮನು ಅವಳ ಕೃಪೆಯಿಂದ ನವರಸ ಗೀತ ರೂಪದ ಮುತ್ತುಗಳನ್ನು ಹೊರತೆಗೆಯುತ್ತಾನೆ. ಆ ಕಾರಣದಿಂದಲೇ ಅವನು ಅದನ್ನು ಸ್ವೀಕರಿಸಿದನು..

ಗೀತ–೨೫

ದರ ಮಕಾಮ ಮಲಾರ

ಸೋಭಾ ದೇತ ಹೈ ರೀ ಮೇಘ ಧಾಮ ಜೈಸೆ ಮೇಘ ರಾಗ ಅಸಾವರೀ
ಸಮೇತ ಭಈ ಆನಂದ ಕರ

ಮೇಘ ರಾಗದ ಜೊತೆಗೆ ಆಸಾವರಿ ರಾಗ ಸೇರಿ ಆನಂದ ಕೊಡುವಂತೆ, ಮೋಡ ಹಾಕಿದಾಗಿನ ಬೆವರು [ನೀಡುವ ಸುಖ] ಶೋಭೆಯನ್ನು ಕೊಡುತ್ತದೆ. [!]

ಅಂತರಾ

ಘುನ್ನೀ ಐಸೆ ಲಾಗತ ದುರ್ಗಾ ದರಸನ ದೇಖತ
ಮಾನೋ ಸೂರ ಪಸೀಜತ ಲಜ್ಜಾ ಸಕೋಚನೀ ಕಂಪತ ಥರಥರ

ದುರ್ಗೆಯ ದರ್ಶನದ ನಂತರ ಮೌನವಾಗುವಂತೆ, ಸೂರ್ಯನೂ ಕೂಡ ಲಜ್ಜೆ ಸಂಕೋಚಗಳಿಂದ ಥರ ಥರ ನಡುಗುತ್ತ ಬೆವರು ಸುರಿಸುತ್ತ ಲಜ್ಜಿತನಾಗುತ್ತಾನೆ.

ಅಭೋಗ

ಬಹುರ ಕಾಂಚನ ಥಾಲ ಮೋತ್ಯೊಂ ಭರ
ಇಂದರ ಪಠಾಯೊ ನೇಛಾವರ
ವಾರ ಡಾರ‍್ಯಾಬಾನೀ ಪರ

ಇಬ್ರಾಹೀಮ ಆಖೇಂ ಯೋ ಸಮಯೊ ರಸ ಬರನ ರಾಜತ ರಜತ
ಛೀಂಟ ಕೇಸರೀ ವಸ್ತರ

ಬಂಗಾರದ ಚೀಲದಲ್ಲಿ ಮುತ್ತುಗಳನ್ನು ತುಂಬಿ ಇಂದ್ರನು ಕಳಿಸುತ್ತಿದ್ದಾನೆ. ಇಬ್ರಾಹಿಮ ಹೇಳಿದ ಬೆಳ್ಳಿಯ ಬಿಂದುಗಳಿಂದ ತುಂಬಿರುವ ಕೇಸರಿ ಬಣ್ಣದ ಸೀರೆ ತೊಟ್ಟಂತಿರುವ ಜಗತ್ತು ಈಗ ಮೋಹಕವಾಗಿ ಕಾಣುತ್ತಿದೆ.

ಗೀತ–೨೬

ದರ ಮಕಾಮ ಮಲಾರ

ಉಪಮಾ ಸುಂದರೀ ಸೋಹೇ ಸುದ ಸದಾ ಬರಸಾತ
ಬಿಜಲಿಯಾ ಝುಮಕ ಜಗಾ ಜೋತ ಸೋ ಬತ್ತೀಸೀ ದಾಂತ

ಸುಂದರಿಯು ಎಲ್ಲ ವಿಧದಲ್ಲಿ ಮಳೆಗಾಲವನ್ನು ಹೋಲುತ್ತಾಳೆ. ಮಿಂಚು ಹೊಡೆದಾಗ ಜಗತ್ತೆಲ್ಲ ಬೆಳಗುವಂತೆ ಅವಳ ಮೂವತ್ತೆರಡು ಹಲ್ಲುಗಳೂ ಕೂಡ.

ಬೈನ

ಕಿಸ್ಟತ ರಂಗ ರಂಗ ದಿಸೆ ಜ್ಯೋಂ ಬಾದಲ
ಛಾಯೆ ಬರಸೆ ಮೇಗ ಸೋ ಖೇಯೇ ಜಲ
ಸಬ ತನ ಕೇಸ ರೂಖ ಪರಕಾರ
ಸರಸ ಜಾನೇ ಋತ ಆಈ ಬಾರ

ಮೋಡಗಳು ಬಣ್ಣ ಬಣ್ಣದ ವಸ್ತ್ರಗಳಂತಿವೆ, ಮೋಡಗಳಿಂದ ಬರುವ ಮಳೆಯೇ ಅವುಗಳ ಬೆವರು. ದೇಹದೊಳಗಿನ ರೋಮುಗಳೆಲ್ಲ ಸಸಿಗಳಿದ್ದ ಹಾಗೆ, ತಾರುಣ್ಯವೇ ವಸಂತ ಋತುವೆಂದು ಚೆನ್ನಾಗಿ ತಿಳಿ.

ಅಭೋಗ

ಗರಜೆ ಸೋ ತೂ ಕಹೆ ರಾಗ ಮಲಾರ
ಇಬ್ರಾಹೀಮ ಮೋರ ರೀಝು ನಾಚೆ ಪುಕಾರ

ನೀನು [ಮೋಡಗಳು] ಗರ್ಜನೆ ಮಾಡಿದಾಗ ಮಲಾರ ರಾಗವಿದ್ದಂತೆ, ಇಬ್ರಾಹಿಮನು ನವಿಲಾಗಿ ಕೂಗಿ ಕುಣಿಯುತ್ತಾನೆ.

ಗೀತ –೨೭

ದರ ಮಕಾಮ ಮಲಾರ

ಝುನನ ಝುನನ ಝುನ ಮೋತೀ ಖಾ ಕೀ ತಾಂತ ಗಾಜೆ
ತಾಲ ಬಿರದಂಗ ಭೇದ ಸೋಂ ನೌರಸ ಬಾಜೆ

ಝುನನ ಝುನನ ಝುನ್ ಎಂದು ಮೋತೀಖಾನನ [ತಂಬೂರಿಯ] ತಂತಿಗಳು ಮಿಡಿದಾಗ, ತಾಳ, ಮೃದಂಗಗಳು ನವರಸವನ್ನು ಬಾರಿಸುತ್ತಿವೆ.

ಬೈನ

ಇಸ ಜಗ ಮೆಂ ದೋ ಕುಛ ಲೀಜೆ
ಎಕ ತಂಬೂರಾ ಎಕ ಕಾಮಿನೀ ಕೀಜೆ

ಈ ಜಗತ್ತಿನಲ್ಲಿ ಎರಡನ್ನು ಪಡೆದುಕೋ, ಒಂದು ತಂಬೂರಿ ಇನ್ನೊಂದು ಕಾಮಿನಿ.

ಅಭೋಗ

ಇಬ್ರಾಹೀಮ ಜಬ ತೂ ಬೂಝೆ
ತಬ ಬಿಹಿಸ್ತ ಅಮೃತ ಕ್ಯಾಕರೂಂ ಮೂಝೆ

ಇಬ್ರಾಹಿಮನಿಗೆ [ಇವೆರಡು] ದೊರೆತರೆ ಆಗ ಅಮೃತ, ಸ್ವರ್ಗಗಳ ಅಗತ್ಯವೇ ನನಗಿಲ್ಲ.

ಗೀತ–೨೮

ದರ ಮಕಾಮ ಗೌರೀ

ಸಯ್ಯದ ಮುಹಮ್ಮದ ಮೇರೆ ದಿಲ ಪರ ನಾಂವ
ಜ್ಯೂಂ ರಸೂಲ ಕರ ಲಿಖೆ ಆರ್ಶ ಠಾಂವ

ಸಯ್ಯದ ಮುಹಮ್ಮದರ ಹೆಸರು ನನ್ನ ಹೃದಯದಲ್ಲಿದೆ, ಸ್ವರ್ಗದ ಸಿಂಹಾಸನದಲ್ಲಿ ಪೈಗಂಬರರ ಹೆಸರು ಬರೆದಂತೆ.

ಬೈನ

ಗುಮತ ದಿಸೆ ಜ್ಯೂಂ ಖುರದ ಮದೀನಾ
ಕಿಯೆ ಗಲೇಫ ಭರ ಮೋತಿಯೊಂ ಚುನಾ
ಜ್ಯೂಂ ದೀಪಕ ಮೆಂ ದಿಸೆ ಮಧ ನಾಯಕ ನಗೀನಾ
ಮಶ್ಕ ಅಬೀರ ಬಿಛಾಯೆ ಅಂಗನಾ
ಸೇವೀ ಆವೇ ಜಗ ಜುಲಕಾದ ಮಹೀನಾ

[ಅವರ] ಗುಮ್ಮಟವು ಸಣ್ಣ ಮದೀನಾದಂತೆ ಕಾಣುತ್ತಿದೆ.ಅದರ ಮೇಲೆ ಮುತ್ತುಗಳ ಸುಣ್ಣದಿಂದ ಸಾರಿಸಲಾಗಿದೆ. [ಅವುಗಳು] ದೀಪದ ಮಧ್ಯದ ವಜ್ರಗಳಂತೆ ಹೊಳೆಯುತ್ತಿವೆ.ಜಿಲ್ಕಾದ ತಿಂಗಳು ಬಂದಾಗ ಅಂಗಳದಲ್ಲಿ ಕಸ್ತೂರಿ, ಗುಲಾಬಿ ಗಂಧ, ಕೇಸರಿಗಳು ಪಸರಿಸುತ್ತಿರುತ್ತವೆ.

ಅಭೋಗ

ಪೂತ ನಬೀಕಾ ಪೀರ ಮದೀನಾ
ಜಿಸ ಪಗ ಪರಸ ಹೊಯೆ ಜಮೀನಾ
ಇಬ್ರಾಹೀಮ ಖಾಕ ಪರಸೊ ಹುವಾ ಸುನ್ನಾ
ಜ್ಯೂಂ ನೂರ ಸೂರ ಥೀಂ ಲೇ ಚಾಂದ ಹೂವಾ ರೋಶನಾ
ಕಿಯೆ ನವಾಜಿಶ್ ಸಬ ಬಖ್ಯೆ ಗುನಹಾ

ಪ್ರವಾದಿಯವರ ಪುತ್ರ ನಬಿಯವರು ಬಲಾಢ್ಯ ಗುರುಗಳು. ಅವರ ಪಾದಸ್ಪರ್ಶದಿಂದ ಈ ಭೂಮಿ ಬಂಗಾರವಾಯಿತು. ಇಬ್ರಾಹಿಮನೂ ಆ ನೆಲದಮೇಲೆ ಚಿನ್ನವಾದನು. ಸೂರ್ಯನಿಂದ ಚಂದ್ರನು ಬೆಳಕು ಪಡೆದು ಹೊಳೆಯುವಂತೆ, ನನ್ನ ಪಾಪಗಳನ್ನೂ ಕ್ಷಮಿಸಿ ಎಂದು ಬೇಡಿಕೊಳ್ಳುವೆ.

ಗೀತ–೨೯

ದರ ಮಕಾಮ ಗೌರೀ

ಜಾತ ಬರಹಾಮಿನೀ ಅಂಖಡ್ಯಾ ಕಾಮಿನೀ
ಅಂಜನ ಜಾನವಾ ನೈನದೇತೀ ಪಲಖಾ ಪಿತಂಬರ ಬೂಂದ ಲೇತೀ
ಆಂಝೂ ಜಲ ಝುಲಕ ಕೀತೀ ಜಪಕರ ದೀಷ್ಠ ಈಶ್ವರ ಪಾರಬತೀ

ಜಾತಿಯಿಂದ ಬ್ರಾಹ್ಮಣಳು, ಸಂಪೂರ್ಣ ಸುಂದರಿ. ಕಣ್ಣಿನ ಕಾಡಿಗೆ ಜನಿವಾರ, ರೆಪ್ಪೆಗಳು ಪೀತಾಂಬರದ ಸೆರಗು, ಕಣ್ಣೀರು ಸ್ನಾನ, ದೃಷ್ಟಿ ಈಶ್ವರ ಪಾರ್ವತಿಯರ ಜಪದಲ್ಲಿ..

ಅಭೋಗ

ಪುಸ್ತಕ ಚಚ್ಛು ಸೋ ಸುಂದರೀ ಖತ ಕಾಜರ ಕಾಗದ ಪಾಂಥರೀ
ಪಲಖಾಂ ಜಿಲ್ದ ಜೋಡ ಬಾಂದೆ ರೀ
ಇಬ್ರಾಹೀಮ ಪೂತರೀ ಮೂರತ ದೇವ ಮಹಾದೇವ ರೀ

ಕಣ್ಣು ಸುಂದರ ಪುಸ್ತಕ, ಕಾಡಿಗೆ ಓಲೆ, [ಕಣ್ಣಿನ] ಕಾಗದ, ರೆಪ್ಪೆಗಳು ಅವುಗಳನ್ನು ಜೋಡಿಸಿ ಕಟ್ಟಿದ ಹೊದಿಕೆ. ಇಬ್ರಾಹಿಮ [ನಿಗೆ] [ಅವಳ ಕಣ್ಣು] ಪುತ್ಥಳಿ ದೇವ ಮಹಾದೇವನ ಮೂರ್ತಿ

ಗೀತ–೩೦
ದರ ಮಕಾಮ ಕಲ್ಯಾಣ

ಚತುರ ಚಿತಾರೀ ಚಿತ್ರ ಚಿತಾರೆ
ಗಗನ ಕಾಗತ ಸೋಮ ಮುಹರಾ ದೇತಾರೆ

ಚತುರ ಚಿತ್ರಕಾರನ ಚಿತ್ರ ಬಲು ಸೊಗಸು, ಗಗನವೇ ಕಾಗದ [ಅದರಲ್ಲಿ] ಚಂದ್ರನೇ ಮುದ್ರೆ [ಸಿಕ್ಕಾ– ಮೋಹರು].

ಬೈನ

ಸೂರ ಕನಕ ಜಲ ಧೋಲ ಸಂವಾರೆ
ಪರಚತ ಕಿಯೆ ಲಿಖೆ ಲಿಖನ ಹಾಕಿ
ತುಮಕೀ ಧರೆ ಝುಮಕೆ ಸಾರೆ ಸಿತಾರೆ

ಸೂರ್ಯ ಬಂಗಾರದ ನೀರನ್ನು ಕಲೆಸಿ ಸಿದ್ಧಪಡಿಸಿದ್ದಾನೆ., ಚಿತ್ರಕಾರನಿಗೆ ಚಿತ್ರ ಬಿಡಿಸಲು ಸುಲಭವಾಗಲೆಂದು. ಎಲ್ಲ ತಾರೆಗಳು ಜಗಮಗ ಮಿನುಗತೊಡಗಿದುವು.

ಅಭೋಗ

ಧನಿ ಯೊ ಅನಹಾರ ಜೀಓ ಮುಲ್ಕೀ ಜಹಾ ರೀ
ಸುಂದರ ಸಮುದ್ರ ಸಿನಗಾರ ಕರತಾರ ಕೀತಾ ರೀ
ಇಬ್ರಾಹೀಮ ಆಖೇಂ ಛಟಕ ಸರ್ವ ಬನಿತಾ ರೀ

ಧನ್ಯ ಈ ಉಪಮೆ, ಮುಲ್ಕೀ ಜಹಾಂಳು ಜೀವಂತವಾಗಿರಲಿ, ಕರ್ತಾರನ ಕೈಯಲ್ಲಿ ಅವಳು ಸಮುದ್ರ ಸುಂದರಿ. ಇಬ್ರಾಹಿಮ ಹೇಳುತ್ತಿರುವನು, ಉಳಿದೆಲ್ಲ ವನಿತೆಯರ ಚೆಲುವು ತುಸು ಮಾತ್ರ.

ಗೀತ –೩೧

ದರ ಮಕಾಮ ಕಲ್ಯಾಣ

ಅರೀ ಪವನ ನ ಜಾ ಉನಪರ ಜಿನ ಬಿರಹೀ ಕಠಿಣ ಆಗಿನ ಭಾಗ
ಹೌಂ ಜಲೂಂ ಕುಚ ಡರ ನಹೀಂ ಮುಜ ಡರ ಜಗ ಜಾಎ ಉಸ ಆಗ

ಓ ಪವನ [ಗಾಳಿಯೇ] ವಿರಹದ ಅಗ್ನಿಯಲ್ಲಿ ಬೇಯುತ್ತಿರುವವರ ಹತ್ತಿರ ಹೋಗಬೇಡ. ನಾನು ಸುಟ್ಟು ಹೋಗುತ್ತೇನೆಂಬ ಭಯ ನನಗಿಲ್ಲ. ಆದರೆ ಆ ಅಗ್ನಿಯಲ್ಲಿ ಇಡೀ ಜಗತ್ತು ಸುಟ್ಟು ಹೋದೀತೆಂಬ ಭಯ ನನಗಿದೆ.

ಬೈನ[1]

ಜಗ ಸುಖ ನಿತ ಆನಂದ ಭಯೆ ಹೌಂ ಸದಾ ಜನ ಖೋಎ ಬಿರಹೀ ಕಾಜ
ಎ ಬಿರಹೀ ಬಚನ ಆಖೇಂ ಇಬ್ರಾಹೀಮ ತಿಸ ಬಿಚ ಜರ್ರಾ ಛಟಕ ಚೂರ

ಜಗತ್ತು ನಿತ್ಯ ಆನಂದದಲ್ಲಿದೆ, ನಾನು ಮಾತ್ರ ವಿರಹದ ತಾಪದಲ್ಲಿರುವೆ. ಈ ವಿರಹವು ನನಗೆ ವಿಚಿತ್ರ ಆನಂದವನ್ನು ನೀಡುತ್ತಿದೆ. ಪ್ರತಿ ಕ್ಷಣವೂ ನಾನು ಕೋಟಿ ಕೋಟಿ ರಾಜಭೋಗವನ್ನು ಅನುಭವಿಸುತ್ತಿರುವೆನೆಂದು ನನ್ನ ಮನಸ್ಸು ಹೇಳುತ್ತಿದೆ.

ಅಭೋಗ

ಬಿರಹೆ ಸಾಥಿ ಭೂಜಂಗ್ ಮಾನೂಸ ಪ್ರಗಟ ಅಧಿಕ ಸೋಮಾ ಸೂರ
ಯೇ ಬಿರಹೆ ಬಚನ್ ಆಕಹೆಂ ಇಬ್ರಾಹಿಮ ತಿಸ್ ಬೀಚ್ ಜರಾ ಛಟಕ್ ಚೂರ್

ವಿರಹತಾಪದಲ್ಲಿ ಬಳಲುತ್ತಿರುವ ಜನರು ಸೂರ್ಯ ಚಂದ್ರರಿಗಿಂತ ಅಧಿಕ ಪ್ರಕಟರು.
ಈ ವಿರಹ ವಚನಗಳನ್ನು ಹೇಳುವ ಇಬ್ರಾಹಿಮನು ಅವರ ಮಧ್ಯ ತೀರ ಅಲ್ಪನು.

ಗೀತ–೩೨

ದರ ಮಕಾಮ ಕಲ್ಯಾಣ

ಮೇರಾ ಪಿಯು ಘುಂಡೂರೇ ದಿಲ ಸೋ ಅಖಿಯಾ ಭೀತರ ರೀ

ನನ್ನ ಪ್ರೇಯಸಿಯನ್ನು ಹುಡುಕುತ್ತಿರುವೆ, ಅರೇ, ಹೃದಯದಿಂದ ಹಿಡಿದು ಕಣ್ಣಿನ ಆಳದ ವರೆಗೆ.

ಬೈನ

ಜಿತಾ ದೇಖೂ ಕಹಾನಾ ಪಾ ಊ ರೀ
ಇಸ ಪಲಖಾ ಕೆ ಪರ್ದೆ ಮೆ ಅಛೇರೀ
ಮುಂಜ ಗುನಹ ಅಜಾಬ ನಾ ಛೋಡೇ ರೇ

ಜೀವಂತ ನೋಡಬೇಕೆಂದರೆ ಎಲ್ಲಿಯೂ ಸಿಗುತ್ತಿಲ್ಲ, ಈ ಕಣ್ಣು ರೆಪ್ಪೆಗಳ ಪರದೆಯಲ್ಲಿ ಅವಿತಿದ್ದಾಳೆ, ಆಶ್ಚರ್ಯವೆಂದರೆ, ನನ್ನ ಅಪರಾಧಗಳು ನನ್ನನ್ನು ಬಿಡುತ್ತಿಲ್ಲವಯ್ಯ.

ಅಭೋಗ

ಜ್ಯೂಂ ಭಯ್ಯಾ ಖಿಜರ ಜುಲೂಮಾತ ಮೆ ರೀ
ಮೇರಾ ಮನ ಸಿಕಂದರ ಹುವಾ ಢೂಂಡನೇ ರೀ
ಸಯ್ಯದ ಮುಹಮ್ಮದ ಇಬ್ರಾಹೀಮ ಕೋ ದಿಖಾಗೆ ರೀ

ಖಿಜರ್ ಕತ್ತಲಲ್ಲಿ ಹೇಗೆ ಅವಿತಿದ್ದರೋ, ನನ್ನ ಮನಸ್ಸು ಹುಡುಕುವುದರಲ್ಲಿ ಸಿಕಂದರನಾದನು. ಸೈಯ್ಯದ ಮುಹಮ್ಮದರು ಇಬ್ರಾಹಿಮನಿಗೆ ದಾರಿಯನ್ನು ತೋರುವರು.

ಗೀತ–೩೩

ದರ ಮಕಾಮ ಕಲ್ಯಾಣ

ಹರ ದಮ ಆವೆ ಪ್ಯಾರೆ ತೇರೆ ಇಶ್ಕಕೀ ಬಾಓ ಮುಜ
ವಹೀ ಸುಲೆಗಾಯೆ ಜಿಯು ಕೋ ನಹೀಂ ತೂ ಜಾಯೇಗಾ ಬುಜ

ಪ್ರಿಯೆ, ನನ್ನ ಬಳಿ ನಿನ್ನ ಪ್ರೇಮದ ಗಾಳಿ ನಿರಂತರ ಸುಳಿಯುತ್ತಿದೆ, ಅದುವೇ ನನ್ನ ಜೀವವನ್ನು ಉಳಿಸಿದೆ, ಇಲ್ಲವಾದಲ್ಲಿ ನನ್ನ ಜೀವ ನಂದಿ ಹೋಗುತ್ತಿತ್ತು..

ಬೈನ

ಮಸ್ತ ನೈನ ಹೂರ ಅಚಪಲ ಅಮೋಲೆ ಯು ರೀ
ಮೌಲ ರಾಖೇ ಜಿಯು ಸಾಥ ತೋ ಅವ್ವಲ ಹು ದೇಯು ರೆ

[ನಿನ್ನ] ಉನ್ಮತ್ತ ಕಣ್ಣುಗಳು ಅಚಪಲ ಅಮೂಲ್ಯ, ಜೀವದ ಬೆಲೆಗೆ ಅವುಗಳು ದೊರೆಯುವುದಾದರೆ, ಮೊಟ್ಟ ಮೊದಲು ನಾನು ಅದನ್ನು ಕೊಡುವೆನು.

ಅಭೋಗ

ಜೆ ಗುಣ ಸಬ ತೂ ಹೀ ಗುನ ಕೌನ ಗುನ ಲಾಯೆ ರೀ
ಇಬ್ರಾಹೀಮ ವೆ ಗುನ ಬಸ ತುಝು ಉಸ ಮಿಯಾನೆ ಆಯೆ ರೀ

ನಿನ್ನಲ್ಲಿರುವ ಗುಣಗಳನ್ನೆಲ್ಲ ಯಾರು ಯಾರಿಂದ ತಂದಿರುವಿ, ಇಬ್ರಾಹಿಮ, ಅಷ್ಟು ಗುಣಗಳು ಸಾಕು. ನಿನ್ನಂತ ವ್ಯಕ್ತಿ ದೊರೆಯಲಾರ.

ಗೀತ–೩೪

ದರ ಮಕಾಮ ಧನಾಶ್ರೀ

ನಿಸ ದಿನ ಜೀತೆ ಮೀಠೆ ಬಚನ ಕರ,
ಸರವನ ತರಾಜೂ ಕರ ಲೇಯು ಜೋಖ ಶಕರ

ನಿತ್ಯ ನಿನ್ನ ಸವಿ ಮಾತುಗಳನ್ನು ಸ್ಮರಿಸುತ್ತೇನೆ. ಕೇಳುತ್ತ, ಕಿವಿ ತಕ್ಕಡಿಯಲ್ಲಿ ಅವುಗಳ ಸಕ್ಕರೆಯನ್ನು ತೂಗುತ್ತಿರುವೆ.

ಬೈನ

ಕಿಯಾ ಮಂದಿರ ಮೆ ಜಿಯು ದೀಪಕ ಟುಕ ರಹಾ
ಜಗಾ ಜೋತ ಸೋ ಭೇಜ ಭಾಜ ಪ್ಯಾರೆ ದಯಾ
ಅಬ ತಕ್ಯಾ ತುಜ ಪರ ಕರ ಹೋ ಸಬ ಸಹ್ಯಾ

[ದೇಹ] ಮಂದಿರದಲ್ಲಿ ಪ್ರಾಣದೀಪ ಕ್ಷಣ ಕಾಲ ಇಹುದು. ಲೋಕ ಬೆಳಗಿಸುವಂತ ಸೂರ್ಯನನ್ನು ಕಳಿಸು ಹೇ ಪ್ರಿಯ ದೇವ, ಎಲ್ಲವನ್ನೂ ಸಹಿಸಿ ಈಗ ನಿನ್ನನ್ನು ಅವಲಂಬಿಸಿರುವೆ.

ಅಭೋಗ

ವೇಗ ಮಿಲಾರೆ ಪ್ಯಾರೆ ಸುಬ್ಹಾನ
ನಾ ಭಾವೆ ಸುಖ ಮುಂಜ ಅನಪಾನ
ಇಬ್ರಾಹೀಮ ಬಿರಹೀ ಮೋತೀಖಾನ

ಪ್ರಿಯ ದೇವಾ ಬೇಗ ದೊರಕಿಸು, ನನಗೆ ಊಟ, ನೀರು ಯಾವುದೂ ರುಚಿಸುತ್ತಿಲ್ಲ. ಇಬ್ರಾಹಿಮನು ಮೋತೀಖಾನನ ವಿರಹಿಯಾಗಿರುವನು.

ಗೀತ-೩೫

ದರ ಮಕಾಮ ಧನಾಶ್ರೀ

ಈತೀ ಭಾಟ ದೇಖೀ ಮ್ಯೆಂ ಪಿಯು ಕೀ
ಕೀತಾ ಢೂಂಡತೀ ಫಿರೀ ಮ್ಯೆಂ ತೊ ಕೀ

ನಾನು ಪ್ರೇಯಸಿಯ ದಾರಿಯನ್ನು ಎಷ್ಟೊಂದು ಕಾಯ್ದೆ, ನಿನ್ನನ್ನು ಹುಡುಕುತ್ತ ನಾನು ಎಷ್ಟೊಂದು ತಿರುಗಾಡಿದೆ.

ಬೈನ

ಆಸ ಪಕಡೀ ಪಾಸ ರಹನೇ ಕೀ
ನಹೀಂ ತಾಕತ ಹೋರ ಮುಂಜ ಸಹನೇ ಕೀ
ಬಾತ ನಹೀಂ ಕಿಸ ಧಿರ ಕಹನೇ ಕೀ

[ನಿನ್ನ] ಹತ್ತಿರವೇ ಇರುವ ಆಶೆಯಾಯಿತು. ಸಹಿಸುವ ಶಕ್ತಿ ನನಗೆ ಇಲ್ಲ. [ಇದು] ಯಾರಿಗೂ ಹೇಳುವ ಮಾತಲ್ಲ.

ಅಭೋಗ

ಸಯ್ಯದ ಮುಹಮ್ಮದ ಮಿಲತೀ ಪಾಂಊ ಸುಖ

ತಬ ದಿಲ ಪರ ಥೀಂ ಸಬ ಜಾವೆ ದುಖ
ಇಬ್ರಾಹೀಮ ಗುನಹಗಾರ ತೂ ಬಖ್ಶೆ ಚೂಖ

ಸಯ್ಯದ ಮುಹಮ್ಮದರು ದೊರೆತರೆ ಸುಖ ಸಿಗುತ್ತದೆ. ಆಗ [ನನ್ನ] ಹೃದಯದಲ್ಲಿರುವ ದುಃಖಗಳೆಲ್ಲವೂ ಶಮನವಾಗುತ್ತವೆ. ಇಬ್ರಾಹಿಮನ ಅಪರಾಧಗಳನ್ನೆಲ್ಲ ಮನ್ನಿಸಿರಿ ನೀವು.

ಗೀತ–೩೬

ದರ ಮಕಾಮ ಕಾನಡಾ

ಕರ್ನಾಟೀ ಗೋರೀ ಮಾನೋ ಕೇತಕೀ ಬೀಚ ಸೇತ ಪತರ

ಕರ್ನಾಟಕೀ [ಕಾನಡಾ ರಾಗ] ಗೌರ ಬಣ್ಣದವಳು. ಕೇದಗೆಯ ಮಧ್ಯದ ಶ್ವೇತ ಪತ್ರದಂತೆ.

ಅಂತರಾ

ಸಾರೀ ನೀಲೀ ಕಂಚುಕೀ ಪೀಲೀ ಕುಮುದ ಕರ ಕಮಲ ನೇತ್ರ

ನೀಲೀ ಸೀರೆ, ಹಳದಿಯ ಕುಪ್ಪುಸವನ್ನು ತೊಟ್ಟಿಹಳು, ಕುಮುದ ಕೈ, ಕಮಲ ನೇತ್ರ

ಅಭೋಗ

ಕೊಎಲ ಕೂಕೀ ಕ್ರೀಡಾ ಕರತ ವಸಂತಿ ಭೂಲೀ ಕಲಪತರ
ಇಬ್ರಾಹೀಮ ಮನಾಯೆ ಬಿರಹೆ ಫೇರೇ ಅಬ ಆಎಂ ಲಾಲ ಕಘುನ ಡರ

ಕಲ್ಪತರು ವೃಕ್ಷದಲ್ಲಿರುವ ಕೋಗಿಲೆ ವಸಂತ ಋತುವಿನಲ್ಲಿ ಹಾಡುತ್ತಿದೆ. ನಿನ್ನ ಸುಖದ ದಿನಗಳು ಬಂದುವು ಎಂದು ವಿರಹದಿಂದ ಬಳಲುತ್ತಿರುವ ಇಬ್ರಾಹಿಮನು ಹೆದರಬೇಡವೆಂದು ಸಂತೈಸಿಕೊಳ್ಳುತ್ತಿಹನು.

ಗೀತ-೩೭

ದರ ಮಕಾಮ ಕಾನಡಾ
ಸರಸುತಿ ಗೋರೀ ಜೈಸೆ ಗಜದಂತ ಪೋತರೀ ಕೋಕಸ
ಸುತಾರೆ ಸಂವಾರೆ ಬನಾ

ಗೌರ ವರ್ಣದ ಸರಸ್ವತಿಯು, ಪರಿಣತ ಶಿಲ್ಪಿ ಗಜದಂತದಲ್ಲಿ ಕೊರೆದ ಮೂರ್ತಿಯಂತಿಹಳು.

ಅಂತರಾ

ಯಾ ಕಾರನ ಗನಪತೀ ದಿನೋ ಮಾನ ಮಾತಂಗ
ಮುಖ ಸೊರೂಪ ಕೀನೋ ಅಪನಾ

ಆದ್ದರಿಂದಲೇ ಗಣಪತಿಯು ತನ್ನ ರೂಪವನ್ನು ಆನೆಯಂತೆ ಮಾಡಿಕೊಂಡಿರಬೇಕು.

ಅಭೋಗ

ಘುನಿ ಐಸೆ ಲಾಗ ದುರ್ಗಾ ಗೋರೀ ಸುಬಾಸ ಸೇತ ಸೇವತೀ ಸುಮನಾ
ಇಬ್ರಾಹೀಮ ಮಾಲಾ ಪೇನತ ಸೀಸ ನವಾ ಮಾನೋದಂಡವತ ಕರತ ಜಪನಾ

ಗೌರ ವರ್ಣದ ದುರ್ಗೆಯು [ಸರಸ್ವತಿ] ಶ್ವೇತ ಸೇವಂತಿಗೆಯ ಹೂವಿನಂತೆ ಕಾಣುತ್ತಿದ್ದಾಳೆ. ಇಬ್ರಾಹಿಮನು ಮಾಲೆಯನ್ನು ಧರಿಸಿ ಹೊಸ ಶಿಷ್ಯನಂತೆ ತಲೆಬಾಗಿ ಜಪಿಸುತ್ತಿದ್ದಾನೆ.

ದೋಹಾ-೧೩

ಪ್ರಥಮ ಸುಪ್ರಭಾತ ಕೀ ಸುತ್ರೀ ಬಿಯಾರ ಮಾನೋ
ಕೂಹೀ ಅರೂಹೀ ಸಾಸ ನೌರಸ ಕೂ
ಬಾರೀ ಬಾರೀ ಕುಪ ಹಸ್ತ ಉಡಗನ ಪರ ಪೀಖ
ದನೇ ತುಮ ಆಭೀ ಛಟ ಮೂ

ಮೊದಲ ಸುಪ್ರಭಾತದ ಜೀವ ತುಂಬುವ ತಂಗಾಳಿಯನ್ನು ನವರಸದ ಆರೋಪ ಅವರೋಹಗಳೆಂದು ತಿಳಿ. ಮತ್ತೆ ಮತ್ತೆ ಹೂವು ತಲೆದೂಗುತ್ತಿದೆ. ನಕ್ಷತ್ರ ಮಂಡಲದಲ್ಲಿ [ನಿನ್ನನ್ನು] ದಿಟ್ಟಿಸಿ ನೋಡಿದಾಗ ನಿನ್ನ ಸುಂದರ ಮುಖ ಕಾಣುತ್ತದೆ.

ದೋಹಾ-೧೪

ಗನಪತಿ ರೀಜಾ ದೇನೂ ಸುನ ಸಕಲ ದೇವತಾ ಕಹೆ ಟೀರ ಆಮೀನ
ಸರಸುತಿ ಪ್ರಸನ ಭಈ ಇಬ್ರಾಹಿಮ ಕಠ ಬಸ ಅಧಿಕ ಅಧಕಾಯೆ
ದೀನ ವೀನ

ಗಣಪತಿಯು ಮೋಹಗೊಂಡನು, ಸಕಲ ದೇವತೆಗಳೂ ತಥಾಸ್ತು ಎಂದರು. ಇಬ್ರಾಹಿಮನ ಮೇಲೆ ಸರಸ್ವತಿಯೂ ಪ್ರಸನ್ನಳಾದಳು. ಅದಕ್ಕೆಂದೇ ಅವನ ಕಂಠ [ಸ್ವರವು] ದಿನ ದಿನಕ್ಕೆ ಅಧಿಕಾಧಿಕವಾಯಿತು [ಆಕರ್ಷಕವಾಗಿ].

ಗೀತ–೩೮

ದರ ಮಕಾಮ ಕಾನಡಾ

ಗನಪತಿ ತುಮ ರೂಪ ಕೀ ತನಕ ಜೋತ ಮಾನೋ
ಸೂರ ಜಗಮಗೆ ಋತ ಬಸಂತ

ಗಣಪತಿ, ನಿನ್ನ ರೂಪವನ್ನು ತುಸುವೇ ನೋಡಿದರೂ ಸಾಕು, ವಸಂತ ಋತುವಿನಲ್ಲಿ ಸೂರ್ಯ ಥಳಥಳಸಿದಂತೆ ಕಾಣುವುದು.

ಅಂತರಾ

ಸೂದಿಷ್ಟ ಸಾದಿಷ್ಟ ಭಏ ವಿನಾಯಕ ಮನೋಹರ ಸನ ಮುಖ
ದೇಖನ ಕಠಿಣ ಸಾವಕ ನೈನ ಪಂತ

ವಿನಾಯಕನ ಸುಂದರ ಮುಖ ಕಣ್ಣಿಗೆ ಮೋಹಕವಾಗಿ ಕಾಣುತ್ತಿದೆ. ಎದುರಿಗೆ ಬಂದ ಮರಿಜಿಂಕೆಯ ಕಣ್ಣು ಕೋರೈಸಿ ದಾರಿ ಕಾಣದಂತಾಯಿತು.

ಅಭೋಗ

ಚಿಂತಾ ಭಾಈ ಚಂದರ ಮುಖ ಕಲಂಕ ಅಸ್ತುತೀ ತೇರೀ 'ಸುನೆ ಕಂಥ
ಇಬ್ರಾಹೀಮ ಆಖೇಂ ನೌರಸ ಗನೇಸ ಪದ ಗಾವತ ಚೋಂಪ ಸೇವಕ ಕಲಾವಂತ

ನಿನ್ನ ಸ್ತುತಿ ಕೇಳಿ ಚಂದ್ರನಿಗೆ ಚಿಂತೆಯಾಯಿತು. [ಅಂತೆಯೇ] ಅವನ ಮುಖದಲ್ಲಿ ಕಲೆ ಮೂಡಿತು.

ಇಬ್ರಾಹಿಮನು ಗಣೇಶನ ಕುರಿತು ನವರಸಗಳಲ್ಲಿ ಪದಗಳನ್ನು ಹಾಡುವನು. ಅವುಗಳನ್ನು ಆಸ್ಥಾನದ ಎಲ್ಲ ಕಲಾವಂತರು ಹಾಡುತ್ತಿರುವರು.

ಗೀತ–೩೯

ವಿದ್ಯಾ ಪಂಥ ಸೂಜತ ನಹೀಂ ಯಾ ಕಾರನ ಸರಸುತಿ
ಗನಪತೀ ರಬಿ ಸಸಿ ಭಯೆ ಪರಗಾಸ

ವಿದ್ಯೆಯ ಮಾರ್ಗವೇ ತೋಚುತ್ತಿಲ್ಲ.. ಆದ್ದರಿಂದಲೇ ಸರಸ್ವತಿ ಮತ್ತು ಗಣಪತಿಯರು

ಅಂತರಾ

ವಾಕ ವಿನಾಯಕ ಜುಗಲ ತುಂಬರ ಬೀನ
ಭೂಲೇ ರೀ ದುಖ ಧರನ ಕೊ ಸುಖ ಕರನ ಭೋಗ ವಿಲಾಸ

ಸರಸ್ವತಿ, ಗಣಪತಿಯರ ತುಂಬರ ವೀಣೆಯ ಜುಗಲಬಂದಿ ದುಃಖಗಳನ್ನೆಲ್ಲ ದೂರ ಮಾಡಿ ಭೋಗ ವಿಲಾಸಗಳ ಸುಖವನ್ನು ಸೃಷ್ಟಿಸಿದ್ದಾರೆ.
ಸೂರ್ಯ ಚಂದ್ರರಾಗಿ ಪ್ರಕಟವಾದರು.

ಅಭೋಗ

ಸಾರದಾ ಗನೇಸ ಮಾತಾ ಪಿತಾ ತುಮ ಮಾನೋ
ನಿರಮಲ ಬೇಬ ಫಟಿಕ ಸೀಸೆ ತಾಸ
ಇಬ್ರಾಹೀಮ ಗುಪಿತ ಧೀಸೋ ಅಪ ನವಾಜ
ಪರಗಟ ಕೀನೋ ಧನಿ ಮೇರೋ ರಾಸ
ಮಾತಾ ಪಿತೃಗಳಾದ ಶಾರದೆ, ಗಣಪತಿಯರು, ನೀವು ಎರಡು ಸ್ಫಟಿಕದ ನಿರ್ಮಳ ಗಾಜುಗಳಂತಿದ್ದೀರಿ. ಅನಾಮಿಕನಾಗಿದ್ದ ಇಬ್ರಾಹಿಮನಿಗೆ ನೀವು ಆಶೀರ್ವದಿಸಿದ್ದರಿಂದ ನನ್ನ ಕೀರ್ತಿಯು ಅಧಿಕಾಧಿಕವಾಗಿದೆ.

ಗೀತ–೪೦

ದರ ಮಕಾಮ ಕಾನಡಾ

ನೌರಸ ಭೇದ ಕೋ ಉತಪತ ಬಚನ ಆಖೂಂ ಸಖನಸೆ
ಸುನೆ ಹಿತ ಚಿತ ಲಾಜೆ*

ಅತಿ ಎತ್ತರವಾದ ಏಳು ಅಂತಸ್ತಿನ ಕಟ್ಟಡವು ದೈವದ ಮೂರ್ತಿಯಾಗಿದೆ. ಅದು ಸಮಯವನ್ನು ತಿಳಿಯಲು ಅತ್ಯಂತ ಪರಿಶ್ರಮ ಪೂರ್ವಕವಾಗಿ ಕಟ್ಟಿದ ಗಡಿಯಾರದಂತಿದೆ.

ನವರಸ ಗೀತೆಗಳು ಹುಟ್ಟಿಸುವ ವಿವಿಧ ವಚನಗಳನ್ನು ಹೇಳುವೆನು ಕಿವಿಗೊಟ್ಟು ಕೇಳಿರಿ, ಮನದಲ್ಲಿ ತನ್ನಿರಿ.

ಅಂತರಾ

ತಾಲ ಚಟಕ ಸಮ ಸುರ ಮಧ್ಧಿಮ, ಉಪಜ ನ್ಯಾರೀ ನ್ಯಾರೀ ಕರ ದಿಖಾಈ
ತಾಳ ಚಟಕ ಸಮ್, ಸ್ವರ ಮಧ್ಯಮ, ಬಗೆ ಬಗೆಯ ಸ್ವರಗಳಲ್ಲಿ ಮಾಡಿ ತೋರಿಸುತ್ತದೆ.

ಅಭೋಗ

ಇಬ್ರಾಹೀಮ ಗಾಎ ಬಜಾಎ ರಿಝಾಎ ಲಕ್ಷ್ಮೀ ತ್ಯಾಗ ಪಾಈ *
ಹಮ ಸೇವಕ ಸಿವ್‌ಕೀ ಬಲ ಬಲ ಮೈಯ್ಯಾ ಕೀ
ದೀನ ದೀನ ಅಧಿಕ ಅಧಿಕಾಈ

ಇಬ್ರಾಹಿಮನು ಹಾಡಿದರೆ, ಬಾರಿಸಿದರೆ ಲಕ್ಷ್ಮಿಯು ತ್ಯಾಗ ಮಾಡಿದಳು. ನಾವು ಶಿವನ ಸೇವಕರು, ನಮ್ಮ ಸೇವೆ, ಪ್ರೀತಿಗಳು ದಿನ ದಿನವೂ ಅಧಿಕವಾಗುತ್ತಿವೆ.

ಗೀತ –೪೧

ಧರ ಮಕಾಮ ಕಾನಡಾ
ಬುಲಂದ ಮಹಲ ಸಪ್ತ ಖಿನ ದೀನ ಕೀ ಮೂರತ_
ಸೋಪಾ ಕೀನೇ ಘಡಿಯಾಲ ಕೀ ಉಧಮ ಕರ
ಅಂತರಾ
ಸಪ್ತ ಉಡಗನ ಸಪ್ತ ಖಿನ ಕೆ ದೀಪಕ ನಿಹಚೆ ಕರ ಕರ ಔರ
ಸರ್ವ ನಚ್ಛಿತರ ಭವಿ ಆರತೀ ನೀಛಾವರ

ಏಳುಅಂತಸ್ತಿನ ಕಟ್ಟಡದಲ್ಲಿ ಎಲ್ಲ ನಕ್ಷತ್ರಗಳೂ ನಿಶ್ಚಯವಾಗಿಯೂ ಬೆಳಗುತ್ತಿವೆ. ಮತ್ತು ಎಲ್ಲ ನಕ್ಷತ್ರಗಳೂ ಆ ಕಟ್ಟಡದ ಮೇಲೆ ಆರತಿಯನ್ನು ಬೆಳಗುತ್ತಿವೆ.

ಅಭೋಗ
ಸಪ್ತ ಖಿನ ಸಪ್ತ ಸೂರ ಬಾನೀ ಬನಾಈ ಅಮರ
ಔರ ಕವಿತ್ತ ಮಾಂಜ ಮಾನೋ ಪಾರಸ ಕೀನೋ ದೀನಕರ
ಇಬ್ರಾಹೀಮ ಮುಲ್ಕೀ ಜಹಾಂ ರಾಗ ರಾಗಿನಿ ಸುರತ
ನೌರಸ ಧುನಿ ಸುನಿ ಮುರ್ಛ್ಚನ ಭಈ ಅಪ್‌ಛರಾ ಇಂದರ

ಮಹಲಿನ ಏಳು ಅಂತಸ್ತುಗಳೆಂದರೆ ಏಳು ಸ್ವರಗಳಿದ್ದಂತೆ. ಅದರಿಂದಾಗಿ ಸ್ವರಗಳು ಅಮರವಾಗಿವೆ. ಕವಿತ್ವವು ಸ್ಪರ್ಶಮಣಿಯಂತೆ ಇಲ್ಲವೆ ಸೂರ್ಯನಂತಿದೆ. ಅಲ್ಲಿ ಇಬ್ರಾಹಿಮ ಹಾಗೂ ಅವನ ಹೆಂಡತಿ ಮುಲ್ಕಿ ಜಹಾಂರು ರಾಗ ರಾಗಿಣಿಯರಂತೆ, ನವರಸಗಳಲ್ಲಿ ಮಗ್ನರಾಗಿದ್ದಾರೆ. ನವರಸ ಸಂಗೀತವನ್ನು ಕೇಳಿ ಇಂದ್ರನ ಅಪ್ಸರೆಯರೂ ಮೂರ್ಛಿತರಾಗಿದ್ದಾರೆ !

ಗೀತ–೪೨

ದರ ಮಕಾಮ ಕಾನಡಾ

ದರಪಕ್ ದೃಗ್ ದಾರ ಆವತ ಪೂತರೀ ಪ್ರಥಮ ಭೇಟ
ಭಈ ಭೇಟ ಪೇಹ ಪೂರ ಗಾಗರ

ನೀರು ತುಂಬಿದ ಎರಡು ಬಿಂದಿಗೆ [ಕಣ್ಣುಗಳು]ಗಳೊಂದಿಗೆ [ನನ್ನ] ಕಣ್ಣ ಮುಂದೆ ಬಂದ [ಅವಳ] ಪ್ರಥಮ ಭೇಟಿಯಾಯಿತು.

ಅಂತರಾ

ಉಸಾಸ ಸಮೇತ ಜಾಯ ಚಾಹತ ಪಂಥ ಛೀಂಕ
ಭಈ ಧನಿ ಮೇರೋ ಭಾಗ ಉಜಾಗರ

ನಿಟ್ಟುಸಿರೊಂದಿಗೆ ತಿರುಗಿಹೋಗಬೇಕೆಂದಾಗ ದಾರಿಯಲ್ಲಿ ಸೀನು ಬಂದಿತು, ನನ್ನ ಭಾಗ್ಯ ಬೆಳಗಿತು.

ಅಭೋಗ

ಸಗುನ ಅಬಸಗುನ ನೀಕೇಂ ಪರಚೀತ ಜಾನತ ತುಮ ಸಕಲ
ಬುಧ ಕೋ ಸಾಗರ
ಇಬ್ರಾಹೀಮ ಆಖೇಂ ಆಸಿರವಾದ ಚಿರಂಜೀವೋ ಪರಾನ
ದೇಓ ನೀಛಾವರ*

ಶಕುನ, ಅಪಶಕುನಗಳೆಲ್ಲವನ್ನು ಬಲ್ಲ ನೀನು ಸಕಲ ವಿದ್ಯೆಗಳ ಸಾಗರವಾಗಿರುವಿ. ಇಬ್ರಾಹಿಮ ಹೇಳಿದ, ಪ್ರಾಣದೇವನು [ನಿನ್ನನ್ನು] ಚಿರಂಜೀವಿಯಾಗುವಂತೆ ಆಶೀರ್ವದಿಸಲಿ.

ಗೀತೆ–೪೩

ದರ ಮುಕಾಮ ಕಾನಡಾ
ಬಿರಹನೀ ಜಪಾ ಕುಸುಮ ಸುಮನ ಅರೆ ದುಖ್ ಪಾಖೇಂ ಪತರ್ ನಕಲ್

ವಿರಹಿಣಿಯು ಕುಸುಮ ಸುಮನಗಳೊಂದಿಗೆ ಜಪದಲ್ಲಿದ್ದಾಳೆ, ಎಲೆಗಳೇ ನೀವು ಅಲುಗಾಡದೆ ನಿಲ್ಲಿರಿ.

ಪವನ್ ಥೀಂ ಪಾವಕ್ ಅಧಿಕ್ ಭೀ ಮೇರೋ ಕಹ್ಯೋ
ಸಾಂಚ ಮಾನ್ ಸೀತಲ್ ನ ಹೋಯ್ ಕರ್

ಗಾಳಿಯು ಬೆಂಕಿಯನ್ನು ಅಧಿಕಗೊಳಿಸುತ್ತದೆ, ನನ್ನ ಮಾತು ಸತ್ಯವೆಂದು ತಿಳಿ, [ಆದರೆ ಅದು ವಿರಹಾಗ್ನಿಯನ್ನು] ಶೀತಲಗೊಳಿಸಲಾರದು.

ಅಭೋಗ

ಛಾರ್ ಯಾಹೀ ಖೌರ್ ಚಂದನ ತನ್ ತಾಪರ್ ಅಂಗಾರ್
ಕಹೂಂ ಕಹೂಂ ಬುಝ್ ರಹೆ ಕೋಯಲೇ ಮಾನೋ ಮಧುಕರ್
ಇಬ್ರಾಹಿಮ ಆ ಕಹೇಂ ಯೋ ಕವಿತ್ ನವರಸ್, ನವರಸಪೂರ್ ಗುನ್ ನಗರ.

ಮೈಗೆ ಲೇಪಿಸಿದ ಚಂದನವು ಕೆಂಡಗಳ ಮೇಲಿನ ಬೂದಿಯಂತಿವೆ. ಅಲ್ಲಿ ಇಲ್ಲಿ ಕೆಂಡ ಆರುತ್ತಿದ್ದಂತೆ ಇದ್ದಿಲಾಗುತ್ತಿದ್ದು ಅವುಗಳು ದುಂಬಿಗಳಂತೆ. [ಕಾಣುತ್ತಿವೆ]. ಇಬ್ರಾಹಿಮ ಹೇಳಿದ, ಈ ನವರಸ ಕವಿತೆಗಳನ್ನು , ನವರಸಪುರದ ನಗರದಲ್ಲೆಲ್ಲ ಹಾಡುತ್ತಿದ್ದಾರೆ.

ಗೀತ–೪೪

ದರ ಮಕಾಮ ಕಾನಡಾ

ಬನಾ ಬನೀ ಬಾಲಕ ಬಾಲಾ ಮಾನೋ ಬೇಬ ಮಹುಪ ಕಲೀ ಏಕ ಡಾಲೀ

ಬಾಲಕ ಬಾಲಿಕೆಯರು ಪ್ರೇಮಿಗಳಾದರು, ಒಂದೇ ಕೊಂಬೆಯ ಎರಡು ಹೂವುಗಳಂತೆ.

ಬೈನ

ಬನ ಬೀಚ ಠಾಡೀ ನೌರಸ ಗಾತೀ, ಭರ ಭರ ದಾರೂ ಪ್ಯಾಲಾ ಪಿಲಾತಾ
ಚಾಲ ಚಲತೀ ಡಗ ಮಗತೀ

ವನದ ಮಧ್ಯ ನಿಂತು ನವರಸ ಗೀತೆಗಳನ್ನು ಹಾಡುತ್ತಿದ್ದಾಳೆ. ಬಟ್ಟಲು ತುಂಬಿದ ಮದ್ಯವನ್ನು ಕುಡಿಸುತ್ತಿದ್ದಾಳೆ. ನಡಿಗೆಯಲ್ಲಿ ತೂಗಾಡುತ್ತ ನಡೆಯುತ್ತಿದ್ದಾಳೆ.

ಅಭೋಗ

ಚೂನರೀ ಕಸೆ ಲಟಪಟಾತೀ ಅಧರ ಚೂಮ ಚೂಮ ಗರೆ ಲಗಾತೀ
ಇಬ್ರಾಹೀಮ ಕೋಂ ದೇಖ ಉಲಾಸ ಮುಸಕಾತೀ

ಸೆರಗನ್ನು [ಚುನರಿ–ದುಪಟ್ಟಾ] ಲಟಪಟಾಯಿಸುತ್ತ, ತುಟಿಗಳನ್ನು ಮುದ್ದಾಡುತ್ತ ಅಪ್ಪಿಕೊಳ್ಳುತ್ತಿದ್ದಾಳೆ. ಇಬ್ರಾಹಿಮನನ್ನು ನೋಡಿ ಸಂತಸದಿಂದ ಮುಗುಳು ನಗುತ್ತಿದ್ದಾಳೆ.

ಗೀತ –೪೫

ದರ ಮಕಾಮ ಕಾನಡಾ

ಮಸ್ತ ನೈನ ಗಜಾ ಸಮುಖ ರಖೇ ಧಜಾ ಕರ ಸಕೆ ಆಪೇಂ ರಖೇ ರಜಾ

ಉನ್ಮತ್ತ ನಯನಗಳು ಆನೆಯ ಕಣ್ಣುಗಳಂತಿವೆ. ಎದುರಾದರೆ ಆನೆಯಂತೆ ಎದುರಿಸಬಲ್ಲವು.

ಬೈನ

ಲಾಲ ಗೋರ ಮುಖ ಕಿಯೆ ರಂಗ ಸಿಂದೂರ ಆಫತಾಬ
ಏಕ ಥಾ ಇಂದರ ಪಾಸ ಏ ದೂ ಐರಾವತ ಆಬ
ಬಾಜೂ ದೋನೋಂ ಅನ್ಯಾ ದಂತ ಸಿನೇನ ಆಬ

ಕೆಂಪು ಸುಂದರ ಸಿಂಧೂರ ಲೇಪಿತ ಮುಖವು ಸೂರ್ಯನಂತೆ ಹೊಳೆಯುತ್ತಿದೆ. ಇಂದ್ರನ ಹತ್ತಿರ ಒಂದು ಇತ್ತು. ಇದು ಎರಡು ಐರಾವತಗಳಿಗೆ ಸಮನಾಗಿದೆ. ಎರಡೂ ಬದಿಗಿರುವ ಮೊನಚು ದಂತಗಳು ಬರ್ಚಿಗಳಂತಿವೆ

ಬೈನ

ಕಂಬಲ ಪುತಲೀ ಯಾ ಪುತಲೀ ಘಾಂಟಸಾರ
ಸೋಗೀ ದುಮ ಯಾ ಸೋಗೀ ಲಂಗಾರ
ಪಲಖಾ ನಾಡೇ ಯಾ ಪಲಖಾ ನೇಜೆ ಆರ

ಕಪ್ಪು ಕಣ್ಣ ಪುತ್ಥಳಿಯೋ ಅಥವಾ ಗಂಟೆಯ ಪುತ್ಥಳಿಯೋ. ಕಾಡಿಗೆಯ ಗೆರೆಯು ಬಾಲವೋ ಅಥವಾ ಸರಪಳಿಯೋ, ಕಣ್ಣ ರೆಪ್ಪೆಗಳು ಲಾಡಿಗಳೋ [ಪುರಿ] ಅಥವಾ ರೆಪ್ಪೆಗಳಂತಿರುವ ಬಾಣಗಳೋ.

ಬೈನ್

ಝುರೇ ಬೌಹೆಂ ಇಶ್ಕೊಂ ಆ ಝೂ ಧಾರಾ
ಭವಾ ಆಕುಸ ಕರ ರಾಖೆಂ ತುಝು ಸಾರಾ
ಉಸಕೀ ಜಲ್ದೀ ಬಹುತ ಕೊ ಕರ ಸಕೆ ನಜಾರಾ

ಗಲ್ಲಗಳ ಮೇಲೆ ಪ್ರೇಮಿಯ ಕಣ್ಣೀರ ಧಾರೆ ಹರಿಯುತ್ತಿದೆ. ಹುಬ್ಬುಗಳು ಅಂಕುಶವಾಗಿ ಅವುಗಳನ್ನು ರಕ್ಷಿಸುತ್ತಿವೆ. ವೇಗ ಎಷ್ಟೆಂದರೆ ದೃಷ್ಟಿವೇಗ.

ಬೈನ್

ಹಸ್ತ ತೂಂ ಹೀಂ ಕರತಾರ ರಖೆ ಪನಾಹ
ಜಬ ಲಗ ನಾದ ಸತನ ಬಚನ ರಸ ನಾಹ
ಅವಲ ಉಮರ ತೇರೀ ಸೂರಜ ಸೋಮಾಹ

ಓ ಗಜವೇ, ಸೃಷ್ಟಿಕರ್ತ ನಿನಗೆ ರಕ್ಷಣೆ ನೀಡಲಿ. ಎಲ್ಲಿಯ ವರೆಗೆ ಕಿವಿಯಲ್ಲಿ ನಾದ ಕೇಳುತ್ತದೋ, ನಾಲಿಗೆಗೆ ಮಾತಾಡುವ ಶಕ್ತಿ ಇರುತ್ತದೋ ಅಲ್ಲಿಯವರೆಗೂ]ಅಂದರೆ] ಸೂರ್ಯ ಚಂದ್ರರಿರುವವರೆಗೂ ನಿನ್ನ ಆಯುಷ್ಯವಿರಲಿ.

ಬೈನ್

ಆಬ ಆತಶ ಬಾದ ಖಾಕ ನಾರೀ
ಸೋ ಯೊ ಪೈದಾ ಆಪೆಂ ಹುವಾ ರೀ
ಸಿಫತ ತೇರಾ ತುಜ ಕೋಂ ಸಾರೀ

ನೀರು, ಬೆಂಕಿ, ಗಾಳಿಗಳು ಮಣ್ಣಿನಿಂದ ಹುಟ್ಟಲಿಲ್ಲ. ಅವುಗಳು ತನ್ನಿಂದ ತಾನೇ ಹುಟ್ಟಿದುವು. ಹಾಗೆಯೇ ನೀನು ನಿನ್ನಿಂದಲೇ ಹುಟ್ಟಿರುವಿ.

ಅಭೋಗ

ನೂರ ತುಜ ಅರಜಾನೀ ದಾಯಮ
ಸೂರ ನಾ ರಖ ಸಕೆ ತುಜ ಕಾಯಮ
ಪಾಂಕರ ತೇರಾ ಇಶ್ಕ ಇಬ್ರಾಹೀಮ

ನಿನ್ನ ಬೆಳಕು ನಿರಂತರ ವೃದ್ಧಿಸುತ್ತಿರಲಿ. ಸೂರ್ಯ ನಿನ್ನನ್ನು ಕಾಯಮಾಗಿ ಇಡಲಾರ. ಪಾನಪ್ರಿಯ ಇಬ್ರಾಹಿಮನು ನಿನ್ನ ಪ್ರೇಮಿ.

ಗೀತ–೪೬

ದರ ಮಕಾಮ ಕಾನಡಾ
ಅತಾಈ ಢಾಡೀ ಗುನೀಜನ ತಿರಜಗ ಗುಸಾಈಂ ತ್ರಿಲೋಚನ

ಅತಾ ಈ ಉತ್ತಮ ಪ್ರಕಾರದ ಗಾಯಕರು, ಢಾಢೀ ಒಂದು ಬಗೆಯ ಮುಸಲ್ಮಾನ ಗಾಯಕರು ಹಾಗೂ ಗುಣೀಜನರು ಮೂರು ಲೋಕದ ಒಡೆಯ ಈಶ್ವರನ ಮೂರು ಕಣ್ಣುಗಳಿದ್ದಂತೆ.

ಬೈನ

ಭಾಕಾ ನ್ಯಾರೀ ನ್ಯಾರೀ ಭಾವ ಏಕ ಕಹಾ ತುರಕ ಕಹಾ ಬರಹಾಮನ
ಉತ್ತಮ ಭಾಗ ನೀಕೋ ಸೋ ಸೋಹೀ ಜಾ ಸರಸುತಿ ಹುಈ ಪ್ರಸನ್ನ

ಭಾಷೆಗಳು ಬೇರೆ ಬೇರೆ ಯಾದರೇನು ಅವುಗಳ ಭಾವ ಒಂದೇ ಆಗಿದೆ. ಅವರು ತುರುಕರಾಗಿರಲಿ ಬ್ರಾಹ್ಮಣರಾಗಿರಲಿ ಉತ್ತಮರಾಗಿದ್ದರೆ ಅವರಿಗೆ ಸರಸ್ವತಿಯು ಒಲಿದು ಪ್ರಸನ್ನಳಾಗುತ್ತಾಳೆ.

ಅಭೋಗ

ಇಬ್ರಾಹೀಮ ಸೊಂಸಾರ ಚಾಹೀ ಬಿದ್ಯಾ ಸಬದ ಗುರೂಸೇವಾ ಜಪಕರ ಏಕ ಮನ

ಇಬ್ರಾಹಿಮನು ವಿದ್ಯೆ, ಸಂಗೀತ ಹಾಗೂ ಗುರುಸೇವೆಯನ್ನು ಬಯಸುತ್ತಾನೆ. ಅವುಗಳಿಗಾಗಿ ಏಕಾಗ್ರ ಚಿತ್ತರಾಗಿ ಜಪಮಾಡಬೇಕು.

ಗೀತ–೪೭

ದರ ಮಕಾಮ ಕಾನಡಾ

ಲಾಲ ಮೋಸೋಂ ನಕರ ಕೀತೀ ಹಠ ಪರ ಸೇಜ ರಹೆ ಮುಜ ಸೇಜ ಸಟ

ಪ್ರಿಯಕರನು ನನ್ನ ಮೇಲೆ ಸಿಟ್ಟಾಗಿ, ಗರ್ವದಿಂದ ಹೋಗಿ ಬೇರೊಬ್ಬರೊಂದಿಗೆ ಸೇರಿಕೊಂಡಿದ್ದಾನೆ.

ಬೈನ

ಇಸ ಫಿರಾಕೋಂ ಹುವಾ ತುಕರೆ ತುಕರೆ ದಿಲಾ
ಸುಮಿರನ ಕೀತಿ ಸಬ ಲೇ ಚುನ ಚುನ ಮಿಲಾ
ತೇರಾ ಧ್ಯಾನ ಅಮೃತ ಆಬ ಮರನಾ ಮುಶ್ಕಿಲಾ

ಇದರಿಂದಾಗಿ ನನ್ನ ಹೃದಯ ಒಡೆದು ಚೂರು ಚೂರಾಗಿದೆ. [ಆ ಚೂರುಗಳಲ್ಲಿ] ಆಯ್ದು ಸೇರಿಸಿ ಜಪಮಾಲೆಯನ್ನು ಸಿದ್ಧಪಡಿಸಿದೆ. ನಿನ್ನ ಧ್ಯಾನವೇ ಅಮೃತ ಸಮಾನವಾದುದು. [ಅದರಿಂದಾಗಿ] ಈಗ ಸಾಯುವುದು ಕಷ್ಟವಾಗಿದೆ.

ಅಭೋಗ

ನಾ ಛೋರ್ಯಾ ಜಾವೆ ಧ್ಯಾನ ಜೋ ಜೀವ ದೇ ಸಕೂಂ
ಕೌನ ಪಂಡಿತ ಯೊ ಯೊ ದುಬುಧ ಸೇತೀ ರಾಖೂಂ
ಇಬ್ರಾಹೀಮ ಮಿಲತೆಂ ಯೊ ಸಬ ಮುಶ್ಕಿಲ ಆಖೂ

ಜೀವ ಬಿಟ್ಟರೂ ಈಗ ಅವನ ಧ್ಯಾನವನ್ನು ಬಿಡಲಾರದಾಗಿದೆ. ಯಾವ ಪಂಡಿತನು ಇದಕ್ಕೆ ಪರಿಹಾರ ಹೇಳುವನು. ಇಬ್ರಾಹಿಮನು ಭೆಟ್ಟಿಯಾದರೆ [ಅವನೆದುರಿಗೆ] ಈ ಎಲ್ಲ ಕಷ್ಟಗಳನ್ನು ಹೇಳಿಕೊಳ್ಳುವೆ.

ದೋಹಾ –೧೫

ರಸ ಸುನ್ನಾ ತನ ತ್ಯೂಂ ಚಂದನಾ ಮುಕ ಊಪರ ಚಾಂದ
ನೈನ ಹಮಾರೆ ಚಕೋರ ಲೇ ಪಿರತ ಸೋಂ ರಹೆ ಬಾಂದ

ಚಿನ್ನದ ತನುವು ಬೆಳದಿಂಗಳಂತಿದೆ, ಮೇಲೆ ಚಂದ್ರನ ಮುಖ. ನನ್ನ ನಯನಗಳು ಅವಳ ಪ್ರೀತಿಯಲ್ಲಿ ಬಂದಿಯಾಗಿರುವ ಚಕೋರ. ಆದ್ದರಿಂದ ಚಂದ್ರನಿರಲಿ.

ಗೀತ–೪೮

ದರ ಮಕಾಮ ಕಾನಡಾ
ಆಪೆಂ ಮಿಲ ರೀ ಪ್ಯಾರೀ ಸಜನ ನವಲ ಲಾಲ ದಾಲಿದ್ರ ಭಂಜನ

ಬಾ, ಪ್ರಿಯಕರ ಕೂಡಿಕೊಳ್ಳೋಣ, ಚೆಲುವ ನೀನು [ನನ್ನ] ದರಿದ್ರ ಭಂಜಕ.

ಬೈನ

ಯಾಕೂತನೀ ಹರದ ಬೀಚ ರತೀ ಧನ ಸೋ ಪಾನನೀ ಪೀಕ ರಸ ಬೀಚ ದಸನ

ನಿನ್ನ [ಮುಖದಲ್ಲಿಯ] ವೀಳ್ಯದೆಲೆಯ ರಸದಲ್ಲಿ ಮಧ್ಯ ಕಾಣುವ ಹಲ್ಲುಗಳು ಕೆಂಪು ವಜ್ರವಾದರೆ, ರಸವು ಧನ ಭಾಂಡಾರ.

ಬೈನ

ಅಧರ ಸಿಂಪೀ ಢಾಲ ಮೋತೀ ಬಚನ ಜುಹರಾ ಮುಶ್ತರೀ ನುಖೂಶಾರೀ

ಚಂದ್ರಬದನ

ನಿನ್ನ ಅಧರಗಳು ಸಿಂಪಿ, [ಅವುಗಳು] ನುಡಿ ಮುತ್ತುಗಳನ್ನು ಚೆಲ್ಲುತ್ತಿರಲಿ. ಚಂದ್ರನಂತಿರುವ ದೇಹದಲ್ಲಿಯ ಮುಖ ಬೃಹಸ್ಪತಿ, ಶುಕ್ರರಂತೆ ಉಜ್ವಲವಾಗಿವೆ.

ಬೈನ
ಸರಸ ಮಸ್ತ ಮಸ್ತ ಕಪೋಲ ಜೋಬನ ಸಬ ತನ ಮಹಕೆ ಬಾಸ ಅಗರ ಚಂದನ

ನಿನ್ನ ಗಲ್ಲ, ಕುಚಗಳಲ್ಲಿ ಮದಗಜದ ಮಾದಕತೆ ಇದೆ. ಇಡೀ ಶರೀರ ಶ್ರೀಗಂಧ ಚಂದನಗಳ ಸುಗಂಧದಿಂದ ಘಮಘಮಿಸುತ್ತಿದೆ.

ಬೈನ
ಶರಾಬ ನೈನ ಶೀಶೆ ಸೋಗೀ ಧಾರಾ ಅಂಜನ ಭರೀ ಭರೀ ಸೋಹೆ ಪ್ಯಾಲೀ ಸರವನ

ಕುಂದನ
ನಯನ ಮದ್ಯ ಬಟ್ಟಲಿನಲ್ಲಿಯ ಕಾಡಿಗೆಯ ಗೆರೆ ಅದರ ಧಾರೆ. ತುಂಬ ತುಂಬಿರುವ ಕಿವಿಯ ಮಧುಪಾತ್ರೆ ಅದಕ್ಕೆ ಕುಂದಣವಿಟ್ಟಂತೆ.

ಬೈನ

ದಾಊದ ಅಲಹಾನ ಕೋಯಲ ಕೂಕೀ ಬನ ಸೀಸ ಕೇಸ ನಾಗ ಲಟಪಟೆ ಫನ

ಬನದಲ್ಲಿ ದಾವೂದನ ದನಿಯಲ್ಲ ಕೋಗಿಲೆ ಕೂಗುತ್ತಿದೆ. [ನಲ್ಲೆಯ] ತಲೆ ಕೂದಲು ನಾಗರ ಹಾವಿನ ಸಿಂಬೆಯಂತೆ ಕಾಣುತ್ತಿದೆ.

ಅಭೋಗ

ಯೂಸುಫ ಸೂರತ ಪದ್ಮಿನೀ ತನ
ಇಬ್ರಾಹೀಮ ಮಧುಕರ ಸೀಸ ಧರೆ ಕಮಲ ಚರನ

ಯೂಸುಫನಂಥ ಮುಖ, ಪದ್ಮಿನಿಯಂಥ ಅಂಗ ಸೌಷ್ಠವ, ಇಬ್ರಾಹಿಮ ಮಧುಕರ, [ಅವಳ] ಚರಣ ಕಮಲಗಳಲ್ಲಿ ತಲೆ ಇಟ್ಟಿಹನು.

ಗೀತ–೪೯

ದರ ಮಕಾಮ ಕಾನಡಾ

ಪ್ರಥಮ ಸಿಂಧ್ಯಾ ಕರ ಉದ ಗಂಗ ನಖಸೀಸ ತೇ ಭಜಾ ಅಷ್ಟ ಅಂಗ

ಮೊದಲ ಸಂಧ್ಯೆಯಲ್ಲಿ [ಉದಯ ಕಾಲದಲ್ಲಿ] ಗಂಗೆಯ ನೀರಿನಿಂದ ನಖ, ಶಿಖಾಂತ ತಲೆ ಭುಜ, ಅಷ್ಟಾಂಗಗಳನ್ನು ತೊಳೆದುಕೋ.

ಅಂತರಾ

ಸೂತರೆ ವಸ್ತ್ರ ಪಹರಾವನ ಚೋಖೆ ಥಾಂವ ಯಾ ಥೀನ ಜಪಕರ ಫಟಿಕ ಮೂಲ ಸಂಗ

ಶುಭ್ರ ವಸ್ತ್ರಗಳನ್ನು ಧರಿಸಿ, ಶುಚಿಯಾದ ಸ್ಥಳವನ್ನು ಆರಿಸಿಕೊಂಡು ಸ್ಫಟಿಕದ ಮಾಲೆಯನ್ನು ಹಿಡಿದುಕೊಂಡು ಜಪ ಮಾಡು.

ಅಭೋಗ

ಲಿಯೋ ಶುಭ ನಾಮ ಸಿರೀ ಸರಸುತೀ ಕೋ ತಬ ಪಾಯೊ ಜಸ ನೌರಸ ಸರಸ ರಂಗ
ಇಬ್ರಾಹೀಮ ಕರನ ಕಹತ ದಂಡವತ ಕರತ ತಬ ಹೋತ ರೋಮ ರೋಮ ಬಹು ಉಮಂಗ

ಶ್ರೀ ಸರಸ್ವತಿಯ ಶುಭನಾಮವನ್ನು ಪಠಿಸು, ಆಗ ದೊರೆಯುತ್ತವೆ ನವರಸ ಸರಸ ಗುಣಗಳು. ಇಬ್ರಾಹಿಮನು ಕರ ಜೋಡಿಸಿ, ದಂಡವತ್ ನಮಸ್ಕಾರ ಮಾಡಿದನು. ಆಗ [ಅವನ] ರೋಮ ರೋಮಗಳೆಲ್ಲವೂ ಪುಳಕಗೊಂಡುವು.

ಗೀತ–೫೦

ಸಿರೀ ಸರಸುತೀ ಸೃಷ್ಟ ನೌರಸ ಗಾ ನಿಸ ಹಾಹಾ ಹೂಹೂ ತ್ರಿಲೋಕ ಜಾಏ

ನವರಸ [ಗೀತೆಗಳು] ಸರಸ್ವತಿಯ ಸೃಷ್ಟಿ. ಆದ್ದರಿಂದ ಹಾಹಾ ಹುಹೂ [ಎಂಬ ಗಂಧರ್ವರು] ಮೂರು ಲೋಕಗಳಲ್ಲೂ ಹೋಗಿ ಹಾಡುತ್ತಾರೆ.

ಅಂತರಾ

ಪಾಖಾಂ ಸಗರೆ ಪಿಗಲಾಏ ವನಚರ ಚೋಂಪ ಧುನಿ ಸುನಿ ರೀಝುತ ಆಏ ಧಾಏ

[ಅದರಿಂದಾಗಿ] ಶಿಲೆಗಳೆಲ್ಲ ಮರುಳಾದುವು, ವನಚರರೆಲ್ಲ ಆಶ್ಚರ್ಯಕರ ದನಿ ಕೇಳಿ ಆಕರ್ಷಣೆಗೊಂಡು ಓಡಿ ಬಂದುವು.

ಅಭೋಗ

ಇಬ್ರಾಹೀಮ ಗಾಯೆ ಬಜಾಏ ಪರಚಂಗ ಜಗತಗುರೂ ನಾದಮೂರತ ಖಿತಾಬ ಪಾಏ
ದಯಾ ಕಧೂಂ ಕಹಾ ಕರೂಂ ಕೂರ ಮನ ಸೋಂ ವಾಕೊಂ ಕಾರೀ ಆಖಿನ ಭಾಏ

ಇಬ್ರಾಹಿಮನು ಹಾಡುತ್ತ, ಬಾರಿಸುತ್ತ ಪ್ರಪಂಚದ ಜಗತ್ ಗುರು, ನಾದ ಮೂರುತಿ ಎಂಬ ಪ್ರಶಸ್ತಿಗಳನ್ನು ಪಡೆದಿದ್ದಾನೆ. ಶೂನ್ಯ ಮನದ ಪಂಡಿತರಿಗೆ ಸರಸ್ವತಿಯ [ಈ} ಕೃಪೆ ಪ್ರಿಯವೆನಿಸುವುದಿಲ್ಲ. ಏನು ಮಾಡಲಿ, ಅಯ್ಯೋ ಎನ್ನುವೆ.

ಗೀತ – ೫೧

ದರ ಮಕಾಮ ಕಾನಡಾ

ಉದೂತ ಸಕಲ ಕಲಾ ಸಂಪೂರನ ಜೋಂ ತಿಪುರ ಚಾಂದ ಸುಲತಾನ

ಸಕಲ ಕಲಾ ವಲ್ಲಭೆ, ತ್ರಿಲೋಕಗಳ ಬೆಳಕು, ಚಾಂದ ಸುಲ್ತಾನ ಉದಯಿಸಿದಳು [ಬಂದಳು]

ಅಂತರಾ

ಚಿರಂಜೀವೊ ನೀಕೆಂ ನಿತ ಆನಂದ ಸದಾ ಸರಫ ಸೂರ ಮನೋ ನೌರಸ ಮಹಲ ಕಲ್ಯಾನ

ಅವಳು ಚಿರಂಜೀವಿಯಾಗಿರಲಿ, ದೇವರು ಅವಳಿಗೆ ನಿತ್ಯವೂ ಆನಂದ ಗೌರವಗಳನ್ನು ಕರುಣಿಸಲಿ. ನವರಸ ಮಹಲಿಗೆ [ಅವಳ ಆಗಮನ] ಕಲ್ಯಾಣಕಾರಕವಾದುದು

ಅಭೋಗ

ಗಗನ ಕೊ ಕಲಂಕೀ ಬರನ್ಹೆಂ ಹಮ ನಾಮ ಭಯೊ ಯಾ ಕಾರನ ಖೋಯೋ ಮಾನ
ಇಬ್ರಾಹೀಮ ಅಚರಜ ಬೇಸ ತೇಸ ಚಾಂದ ಕಹತ ಜನ ಬಹುರ ಜನಾಯೊ ಝೂಟ ಕೆ ನಿಶಾನ

ಚಂದ್ರನಲ್ಲಿ ಕಲೆ ಇರುವ ಕಾರಣ ಗಗನವನ್ನು ಕಲಂಕಿ ಎನ್ನುತ್ತಾರೆ. ಅದರ ಹೋಲಿಕೆಯಿಂದಾಗಿ ಅದರಲ್ಲಿ [ಗಗನ ಮಹಲ] ಇಪ್ಪತ್ತು ಮೂವತ್ತು ಚಂದ್ರರಿದ್ದುದರಿಂದ ಅದರ ಗೌರವ ಕಡಿಮೆಯಾಗಿದೆ ಎಂದು ಜನರು ಹೇಳುವುದನ್ನು ಕಂಡು [ನನಗೆ] ಆಶ್ಚರ್ಯವಾಗುತ್ತದೆ. ಬಹಳಷ್ಟು ಜನರು ಸುಳ್ಳಿನ ಧ್ವಜಗಳಾಗಿದ್ದಾರೆ [ನಿಶಾನೆಯಾಗಿದ್ದಾರೆ].

ಗೀತ –೫೨

ದರ ಮಕಾಮ ಕಾನಡಾ

ಸಿಫತ ಕ್ಯಾ ಕರೂಂ ತೇರಾ ಸೌ ಜೀಬ ಹೋವೆ ತೊ ಥೋಡಾ

ನಿನ್ನನ್ನು ಹೇಗೆ ಹೊಗಳಲಿ, ನೂರು ನಾಲಿಗೆಗಳಿದ್ದರೂ ಸಾಲದು.

ಬೈನ

ಜ್ಯೂಂ ತಾರೆ ಚಾಂದ ಕೋಂ ಜಪೆಂ ಅಜೀತ ನಿಕಲ್ಯಾ ಸಬ ಛ ಪೆಂ
ತ್ಯೂಂ ಸಬ ಪರ ಗಾಲಿಬ ಸಯ್ಯಿದ ಮುಹಮ್ಮದ ಆಪೆಂ

ಹೇಗೆ ಚಂದ್ರನನ್ನು ತಾರೆಗಳು ಹೊಗಳುತ್ತವೆ [ಆದರೆ] ಸೂರ್ಯ ಬರುತ್ತಿದ್ದಂತೆ ಎಲ್ಲವೂ ಕಣ್ಮರೆಯಾಗುತ್ತವೆ. ಹಾಗೆಯೇ ನೀವು ಸಯ್ಯದ ಮುಹಮ್ಮದರು ಎಲ್ಲರಿಗಿಂತ ಶ್ರೇಷ್ಠರಾಗಿದ್ದೀರಿ [ಉಳಿದವರೆಲ್ಲರೂ ಕಣ್ಮರೆಯಾಗಿದ್ದಾರೆ]

ಬೈನ

ಹುಸ್ನ ತುಮ್ಹಾರಾ ಯೂಂ ಭರೇಃ ದಾಯಮ ಸೂರ ಉಪ ದೇಖನೆ ಫಿರೆ
ಚಾಂದ್ ಸೂನ್ ಲಾಜೋಂ ಝೋರೆ.

ನಿಮ್ಮ ಸೌಂದರ್ಯ ಇಷ್ಟೊಂದು ಉನ್ನತವಾಗಿದೆಯಲ್ಲ, ಅದಕ್ಕೆಂದೇ ಸೂರ್ಯನು ನಿಮ್ಮನ್ನು ನೋಡಲು ನಿತ್ಯ [ನಿಮ್ಮ ಸುತ್ತಲೂ] ತಿರುಗುತ್ತಾನೆ, ಚಂದ್ರನು ನಾಚಿ ಕ್ಷೀಣಿಸುತ್ತಾನೆ.

ಅಭೋಗ

ಇಬ್ರಾಹೀಮ ಪಕಡ್ಯಾ ಹೈ ಆಸ ಅಬ ಆವೆ ಸಯ್ಯದ ಮುಹಮ್ಮದ ಕೀ ಬಾಸ ತಬ ತುಜ ಹೋವೆಗಾ ಉಲಾಸ

ಇಬ್ರಾಹಿಮನು ಭರವಸೆಯನ್ನು ಹಿಡಿದಿದ್ದಾನೆ, ಯಾವಾಗ ಸಯ್ಯದ ಮುಹಮ್ಮದರ ಸುವಾಸನೆ ಬರುತ್ತದೋ, ಆಗ [ಅವನು] ಉಲ್ಲಸಿತನಾಗುತ್ತಾನೆ.

ಗೀತ–೫೩

ದರ ಮಕಾಮ ಕಾನಡಾ

ಸರಸುತೀ ಮಹಾ ಸುಂದರೀ ಆಛೆ ಗೋರೀ ಸೀತ ವಸ್ತ್ರ ಭೂಜ ಚತುರ

ಗೌರ ವರ್ಣದ ಸರಸ್ವತಿಯು ಮಹಾ ಸುಂದರಿಯಾಗಿದ್ದಾಳೆ. ಅವಳು ಶ್ವೇತ ವಸ್ತ್ರಗಳನ್ನು ಧರಿಸಿದ್ದಾಳೆ. ಅವಳಿಗೆ ನಾಲ್ಕು ಭುಜಗಳಿವೆ.

ಅಂತರಾ

ಏಕ ಹಸ್ತ ಸಂಗತ ಪುಸ್ತಕ ದೂಜೆ ಪಾಂಡೀ ಫಟಕ ಸುಮರನ
ತೀಜೆ ಶಯಾ ಸೀತ್ ಸ್ವಾ ಚೌಥೆ ಅಂಬುಜ ಕರ

ಒಂದು ಕೈಯಲ್ಲಿ ಸಂಗೀತ ಪುಸ್ತಕ, ಎರಡನೆಯದ್ದರಲ್ಲಿ ಸ್ಫಟಿಕದ ಜಪಮಾಲೆ. ಮೂರನೆಯದ್ದರಲ್ಲಿ ಬಿಳಿ ಗಿಳಿ, ನಾಲ್ಕನೆಯ ಕೈಯಲ್ಲಿ ಕಮಲವಿದೆ.

ಅಭೋಗ

ತನ ಮಂಝುನ ನೈನ ಅಂಜನ ಮೋತಿನ ಅಭರನ
ಕಂಚನ ಪೈಂಜನ್ ಚಂಕ್ರಂಗ ಬಾಹನ
ಸುಮನ ಸುಹಾಸನ ವಸಂತೀ(ವಿಧಾಪೀ) ಕುಮುದ ತರ

ಇಬ್ರಾಹೀಮ ಸರ್ವದೇವ್ ದೇವಿ ಥಾಡೆ ಭಗತ ಕರತ
ನಗರ್ ಕೋಟ್ ರಾಂಣಿ ಸೀಸ್ ಛತರ್

ಅಭಿಷೇಕ [ಸ್ನಾನ] ಮಾಡಿದ ದೇಹ, ನಯನದಲ್ಲಿ ಕಾಡಿಗೆ,ಮುತ್ತಿನ ಆಭರಣಗಳು, ಚಿನ್ನದ ರ್ಪಜಣಗಳು, ಹಂಸ ವಾಹನ, ಹೂವುಗಳಿಂದ ಭೂಷಿತ ಸಿಂಹಾಸನ, ಕಮಲದಲ್ಲಿ ಪ್ರತಷ್ಠಾಪಿತಳು. ಇಬ್ರಾಹಿಮನು ಎಲ್ಲ ದೇವ ದೇವತೆಗಳೊಂದಿಗೆ ನಿಂತು [ಅವಳನ್ನು] ಪೂಜಿಸುತ್ತಿದ್ದಾನೆ.

ಗೀತ–೫೪

ದರ ಮಕಾಮ ಕಾನಡಾ

ನೀಕೀ ರಿಝಾಯೇ ಚಾತುರ ಕಾಯೆ ಲಾಲ ರಸಾಲ ಸಂಗ
ಪೀರತ ಸಂಚೂಕ ಸುಖ ಪಾಏ

ಉತ್ತಮ ಮಾವಿನ ಹಣ್ಣುಗಳನ್ನು ಪ್ರೀತಿಸುವ ಚತುರ ವ್ಯಕ್ತಿಯು ಅವುಗಳಿಂದ ಆಕರ್ಷಿತನಾಗಿ ಸವಿದು ತೃಪ್ತನಾಗುತ್ತಾನೆ.

ಬೈನ

ಏಕ ಮನ ಲುಜ ಲಜಾನ ಸೂಮನ ಚೂಮನ ಕರತ ಬಾಲೀ
ಅಲಬೇಲೀ ಅಲಗನ ಕರತ ಧಾಯೆ ಧಾಯೆ

ಒಂದು ಮನಸ್ಸು ನಾಚಿ ನೀರಾದರೆ, ನೂರು ಮನಸ್ಸುಗಳು ಚೆಲುವೆ ಬಾಲೆಯನ್ನು ಚುಂಬಿಸ ಬಯಸುತ್ತವೆ. ಆದರೆ ತುಂಟ ಮನಸ್ಸು ಡವಗುಟ್ಟುತ್ತಿದೆ.

ಅಭೋಗ

ಚಂಚಲ ಚಪಲ ನೈನ ಭಿನ ಭಿನ ಅಂಗನ ಸೈನ ಆಛೆ ತುತರಾಂತ
ನೈನ ಚಿತವತ ಟೇರ ಟೇರ ಮುಸ್ಕಾಈ
ಇಬ್ರಾಹೀಮ ಸಾತ ಐತಕೀ ಬಿಗಸೀ ಬಿಗಸೀ ಸೂಬಾಸ.... ಪತಿ ಡರಕಾಈ

ಚಂಚಲ ಚಪಲ ಕಣ್ಣುಗಳು [ಚೆಲುವೆ] ಭಿರ ಭಿರನೆ ಅಂಗಳ ದಾಟಿ ಬಂದಳು. ಮುಗುಳು ನಗುತ್ತಿರುವ ಅವಳ ಹಣೆಯ ಕೆಳಗಿನ ಕಣ್ಣುಗಳ ನೋಟ ಬಾಣಗಳಂತಿವೆ. ಇಬ್ರಾಹಿಮನು ಹತ್ತಿರ ಇರುವಾಗ ಸುವಾಸನೆಯು ಅದರಿಹುದು, ನಿನಗೆ ಪತಿಯ ಭಯವೇಕೆ ?

ಗೀತ–೫೫

ದರ ಮಕಾಮ ಕೇದಾರ

ಕೇದಾರೀ ಬಾಲೀ ಬಿರಹನೀ ಅತಿ ಸುಂದರ ಕಪೋಲ ಕರ ಧರ

ಅತಿ ಸುಂದರಿಯಾದ ಕೇದಾರಿ ತರುಣಿಯು ವಿರಹಿಣಿಯು, ಅವಳು ಗಲ್ಲಕ್ಕೆ ಕೈ ಇಟ್ಟುಕೊಂಡಿದ್ದಾಳೆ.

ಅಂತರಾ
ಕೃಷಾಂಗೀ ಕುಟಿಲ ಕೇಸ ಪಾಂಡು ಗಾಲ ಚಮರ ಸೇತ ವಸ್ತ್ರರ

ಅವಳು ಕೃಷಾಂಗಿ, [ಬಡಕಲು ದೇಹದವಳು] ಗುಂಗುರು ಕೂದಲು, ಶ್ವೇತ ಗಲ್ಲಗಳು, ಗೌರವರ್ಣದವಳಿದ್ದರು ಬಿಳಿಯ ವಸ್ತ್ರಗಳನ್ನು ಧರಿಸಿದ್ದಾಳೆ.

ಅಭೋಗ

ಚಂದನ ರಸ ಪೂರ ಸಂಚ ಮಾನಾ ನಿವಿಷ್ಟಾ ಕುಮುದ ಪತರ ಗೌರೀ ಹಿಮಕರ
ಇಬ್ರಾಹೀಮ ಉಖತ ಲಿಖಂತೀ ನಖ ಸೇಮತ ಚಿತರ ಮಹೀ ತದೋಪರ

ಮೈಮೇಲೆ ಗಂಧದ ಹುಡಿಯನ್ನು ಚಿಮುಕಿಸಿಕೊಳ್ಳುತ್ತಿದ್ದಾಳೆ. ಕಮಲದಂತೆ ಕೋಮಲವಾಗಿದ್ದ ಅವಳು ಚಂದ್ರನಂತೆ ಗೌರವರ್ಣದವಳು. ಇಬ್ರಾಹಿಮ ಹೇಳಿದ, ಅವಳು ತನ್ನ ಉಗುರಿನಿಂದ ನೆಲದ ಮೇಲೆ ಚಿತ್ರವನ್ನು ಬರೆಯುತ್ತಿದ್ದಾಳೆ

ದೋಹಾ–೧೬

ಕಲ್ಯಾಣೀ ರಮನೀ ಪೀವರ ಕುಚಾ ತನ್ವಾಂಬರೀ ಮೃಗ ನಯನೀ
ಬಾಹಾಂತನವೀ ಸ್ಯಾಮ ಕೇಸ ಬದನ ಹಿಮಕರ
ಕಾಂತಾನಕಮ ವಸಂತೀ ಬಾಲೀ ಲಜ್ಜಾ ಡರ
ಪುರೂಷಾ ಪಶಂತೀ ರೋಮಾವಲೀ ನೀಲ ಕಂಚುಕೀ ಚಿತ್ರ ವಸ್ತರ

ಕಲ್ಯಾಣಿ ಸುಂದರಿಯ ಉಬ್ಬಿದ ಕುಚಗಳು, ತೆಳು ತನುವು, ಮೃಗನಯನಿ, ಸಪೂರ ಭುಜಗಳು. ಕಪ್ಪುವರ್ಣದ ಕೇಶಗಳು, ಚಂದ್ರನಂತೆ ಉಜ್ವಲ ಕಾಂತಿಯನ್ನು ಹೊಂದಿದ, ನೀಲೀ ಕುಪ್ಪುಸವನ್ನು ತೊಟ್ಟ, ಚಿತ್ರವಿಚಿತ್ರವಾದ ವಸ್ತ್ರಗಳನ್ನು ತೊಟ್ಟ ಮನೋಹರಿಯು, ರೋಮ ಭರಿತ ಪುರುಷನನ್ನು ಕಂಡು ಲಜ್ಜೆಯಿಂದ ಭಯಭೀತಳಾಗಿದ್ದಾಳೆ.

ಗೀತ–೫೬

ದರ ಮಕಾಮ ಕೇದಾರ
ಏಕ ಕರ ದಂಡೀ ವಾದನ ದೂಜೆ ಪಾನೀ ಪುಸ್ತಕ ಪೇಖತ ನೌರಸ ಗಾವತ ಉತಪತಿ

[ಇಬ್ರಾಹಿಮನು] ಒಂದು ಕೈಯಲ್ಲಿ ವಾದ್ಯವನ್ನು ಹಿಡಿದುಕೊಂಡು, ಇನ್ನೊಂದು ಕೈಯಲ್ಲಿದ್ದ ಪುಸ್ತಕವನ್ನು ನೋಡುತ್ತ ನವರಸ ಗೀತೆಗಳನ್ನು ಹಾಡುತ್ತಿದ್ದಾನೆ..

ಅಂತರಾ
ಕೇಸರೀ ವಸ್ತರೀ ದಸನ ಸ್ಯಾಮ ನಖ ಲಲಾಈ ಮಿಹಿಂದೀ ಗುನೀ ಪಿರತೀ

ಕೇಸರಿಯ ವಸ್ತ್ರಗಳನ್ನು ತೊಟ್ಟಿದ್ದಾನೆ, ದಂತಗಳು ಶ್ಯಾಮ ವರ್ಣದವುಗಳು, ಉಗುರುಗಳಿಗೆ ಕೆಂಪು ಬಣ್ಣದ ಮದರಂಗಿ, ಗುಣೀ ಜನರು [ಅವನನ್ನು] ಪ್ರೀತಿಸುತ್ತಾರೆ.

ಅಭೋಗ

ಕಂಠ ಥಾಲ ಫಟಿಕ ಜಪಮಾಲ ನಗರ ವಿದ್ಯಾಪುರೀ ವಾಹನ ಹತೀ
ಇಬ್ರಾಹೀಮ ಕೊ ಗೋತ ಪಿತಾ ದೇವ ಗುರು ಗನಪತಿ ಮಾತಾ ಪವಿತ್ತರ ಸರಸುತೀ

ಕಂಠದಲ್ಲಿ ಸ್ಫಟಿಕದ ಜಪಮಾಲೆ ಇದೆ. [ಅವನ] ನಗರ ವಿದ್ಯಾಪುರಿ, ವಾಹನವು ಆನೆ, ಇಬ್ರಾಹಿಮನ ತಂದೆ ಗುರು ಗಣಪತಿಯಾದರೆ, ಮಾತೆಯು ಪವಿತ್ರ ಸರಸ್ವತಿಯಾಗಿದ್ದಾಳೆ.

ಗೀತ-೫೭

ದರ ಮಕಾಮ ಕೇದಾರ

ಪೂನಮ ನಿಸ ಬಿರಹೀ ಲಾಗತ ಸೋಮ ಆವತ ಮೊ ಮನಾವನ
ಮೊ ಬಿರಹೀ ಅಗನ ಜಲ ದೇಖತ ಆವತ ಮೊ ಹೀಮಕರನ

ಹುಣ್ಣಿಮೆಯ ರಾತ್ರಿ ವಿರಹ ವೇದನೆ ಹೆಚ್ಚಾಗುತ್ತಿದ್ದಂತೆ ಚಂದ್ರನು ನನ್ನನ್ನು ಸಂತೈಸಲು ಬಂದ, ನನ್ನ ವಿರಹಾಗ್ನಿಯನ್ನು ಆರಿಸಲು [ಅವನು] ತನ್ನ ತಂಪು ಕಿರಣಗಳನ್ನು ತಂದ.

ಬೈನ

ಅಬ ಗರಮೀ ಭೇದೀ ಇಂದು ಗಯಾ ರೂಪ ಲಚ್ಛನ
ರವಿ ಹೊ ಪರಗಟ ದಿಸೆ ಸಾರ್‍ಯಾಂ ಕೇರೇ ಲೋಚನ

ನನ್ನ [ವಿರಹಾಗ್ನಿಯ] ಕಾವು ಚಂದ್ರನ ಮೇಲೆ ಆಗಿ ಅವನ ರೂಪವೇ ಬದಲಾಯಿತು. [ಅದೇ ಕಾವು ಬೆಳಿಗ್ಗೆ] ಸೂರ್ಯನಾಗಿ ಪ್ರಕಟವಾಯಿತು. ಅದು ಎಲ್ಲರ ಕಣ್ಣಿಗೆ ಕಾಣಿಸಿತು.

ಅಭೋಗ

ಇಬ್ರಾಹೀಮ ಸೊ ಉಸ ಲಗಿನ ಭೂಲ ಪರೆ ಬಹು ಪರಾನ
ಸೂರ ಪೂಜ ಸೇವಾ ಕೀಜೆ ಆವತ ಜಗಾ ಜೋತ ಪತಿ ಭಾನ

ಅದನ್ನು ನೋಡಿದ ಆ ಗಳಿಗೆಯಿಂದ ಬಹು ಜನರು ಭ್ರಾಂತಿಗೊಳಗಾದರು. [ಆದ್ದರಿಂದ] ಇಬ್ರಾಹಿಮನು ಹೇಳಿದ] ಅಂದಿನಿಂದ ಅಪಾರ ಬೆಳಕಿನ ಸೂರ್ಯನನ್ನು ಆರಾಧಿಸ ಹತ್ತಿದರು.

ಗೀತ-೫೮

ದರ ಮಕಾಮ ಕೇದಾರ
ದೋಈ ದರದ ಉಸೆ ದರೂ ಹೈ ದೂರ
ಅಮೃತ ಸೊ ಹೈ ಮುಂಜ ಪ್ಯಾರೇ ದೇಖೆ ಘೂರ

[ಅವನು] ವಿರಹದಿಂದ ಬಳಲುತ್ತಿದ್ದಾನೆ. ಅದಕ್ಕೆ ಪರಿಹಾರ ಹತ್ತಿರದಲ್ಲಿಲ್ಲ. ಅಮೃತವು ಇದೆ ಆದರೆ ಅದು ನನ್ನನ್ನು ದುರುಗುಟ್ಟಿ ನೋಡುತ್ತಿದೆ.

ಬೈನ
ಇಶ್ಕ ತೇರಾ ಕೀತಾ ಕಾಬಿಜ ಮುಜ
ಕಾಂ ತಈಂ ಫಿರೆ ಮರಗ ದರಜ ನಹೀಂ ತುಜ

ನಿನ್ನ ಪ್ರೇಮವು ನನ್ನನ್ನು ಹಿಡಿದು ವಶದಲ್ಲಿಟ್ಟುಕೊಂಡುಬಿಟ್ಟಿದೆ. [ನಿನ್ನ] ಪ್ರೇಮಿ ಮರಣ ಶಯ್ಯೆಯಲ್ಲಿದ್ದಾನೆ. ಆದರೂ ನಿನಗೆ ದಯ ಬರಲೊಲ್ಲದು.

ಅಭೋಗ

ಧ್ಯಾನ ತೇರಾ ಸಬ ತನ ಜ್ಯೂಂ ಮುಜ ಜಾಲೆ ಹಣಮಂತ ಲಂಕಾ ರೀ
ಇಬ್ರಾಹೀಮ ರಾಮ ಬಿಛೂರ್‍ಯಾ ಜ್ಯೂಂ ಸೀತಾ ರೀ

ಲಂಕೆಯಲ್ಲಿ ಹನುಮಂತ ದಹಿಸಿದಂತೆ, ನಿನ್ನ ಧ್ಯಾನದಲ್ಲಿ ನನ್ನ ದೇಹ ದಹಿಸುತ್ತಿದೆ. ಸೀತೆಯಿಂದ ಅಗಲಿದ ರಾಮನಂತಾಗಿದೆ ಇಬ್ರಾಹಿಮನ ಸ್ಥಿತಿ.

ಗೀತ-೫೯

ದರ ಮಕಾಮ ನೌರೋಜ
ಸಯ್ಯದ ಮುಹಮ್ಮದ ಪತೀ ಪೀರಾ ಜ್ಯೂಂ ರತನ ಮೆ ಉತ್ತಮ ಹೀರಾ

ಸಯ್ಯದ ಮುಹಮ್ಮದರು ಸಂತರ [ಪೀರಾ-ಗುರುಗಳು, ಹಿರಿಯರು] ಪತಿಗಳು. ಹೇಗೆ ರತ್ನಗಳಲ್ಲಿ ಉತ್ತಮ ವಜ್ರವಿದ್ದಂತೆ.

ಬೈನ

ಮಹಲ ಮಹಲ ಸದರ ಸಂವಾರೆ ಇಸ ನಮೂನೆ ಬಹಿಶ್ತ ಉತಾರೆ
ಆನಂದ ಹೋತಾ ಹೈ ಸದಾ ಪಹಾರೆ ಆರತೀ ಲ್ಯಾಏ ಅಂಬರ ಭರ ತಾರೆ

ಶೃಂಗಾರಗೊಂಡ ಮಹಲುಗಳು ಸ್ವರ್ಗವನ್ನೇ ಭೂಮಿಗೆ ಇಳಿದು ಬಂದಂತಿದೆ. ಸದಾಕಾಲವೂ [ಎಲ್ಲ ಪ್ರಹರಗಳಲ್ಲಿ] ನನಗೆ ಆನಂದವಾಗುತ್ತಿದೆ. ಆಗಸದ ತುಂಬ ತಾರೆಗಳು ಆರತಿಯನ್ನು ತಂದಿವೆ.

ಬೈನ

ಕದಮ ಕಸ್ತೂರೀ ಚವಾ ಚಂದನ ಲಾಏ
ಬಾದಲ ಕಾಸೆ ಹರ ರಂಗ ದಿಸ ಬರ ಸಾಏ
ಶಮಾಮೆ ಅಂಬರ ಪಟಿಯಾಂ ಫಿರಾಏ
ಶರ್ಬತ ಘೋಲ ಅಮೃತ ಪಿಲಾಏ

ಕರ್ದಮ್, ಕಸ್ತೂರಿ, ಚಂದನ ಮೊದಲಾದ ಸುಗಂಧಗಳನ್ನು ತಂದಿದ್ದಾರೆ. ಮೋಡವು ಬಣ್ಣಗಳ ಬಹುರೂಪವನ್ನು ಸುರಿಸುತ್ತಿದೆ. [ಈ] ಉತ್ಸವದಲ್ಲಿ ಗಗನವು ತಾಂಬೂಲವನ್ನು ಹಂಚುತ್ತಿದೆ. ಅಮೃತದಂಥ ಶರಬತ್ತನ್ನು ಕುಡಿಸಲಾಗುತ್ತಿದೆ.

ಅಭೋಗ

ಬಾದಲ ದಮಾಮೆಂ ಬಿಜಲ್ಯಾ ಬಜಾವೆ
ಬಾಜೆ ಖಾಲೂ ಶನಾಈ ನಯ ಪಾವೆ
ಸೋಹಲಾ ನೌರಸ ಕಲ್ಯಾಣ ಬಘಾವೆ
ಇಬ್ರಾಹೀಮ ಗುರಗುನೀ ಗಾವೆ

ಮೋಡಗಳ ಗುಡುಗುಡಿಕೆಯಲ್ಲಿ ಮಿಂಚುಗಳು ಮಿನುಗುತ್ತಿವೆ. ಖಾಲೂ, ಶಹನಾಯಿ, ಕೊಳಲು [ಮುಂತಾದ] ವಾದ್ಯಗಳು ದನಿ ಮಾಡುತ್ತಿವೆ.ಗುಣಿಗಳ ಮಧ್ಯೆ ಇಬ್ರಾಹಿಮ ಗುರುವು ನವರಸ ರಾಗಗಳ ಮೊಗ್ಗುಗಳನ್ನು ಅರಳಿಸುತ್ತಿದ್ದಾನೆ.

ದೋಹಾ–೧೭

ಸರಸುತೀ ಸ್ವಚ್ಛ ಸುಂದರೀ ಮಹಾ ಉತ್ತಮ ಜಾತ ನಿರಮಲ
ಏಕ ಹಸ್ತ ಪುಸ್ತಕ ದೂಜೆ ಪಾಣಿ ಸುಮಿರನ ತೀಜೆ ಶೇಹ ಸುಖ ಚೌಥೆ ಕರ ಕಮಲ

ಸರಸ್ವತಿಯು ನಿರ್ಮಲ, ಪವಿತ್ರ, ಹಾಗೂ ಮಹಾ ಸುಂದರಿಯು. ಒಂದು ಕೈಯಲ್ಲಿ ಸಂಗೀತ ಪುಸ್ತಕ, ಎರಡನೆಯದ್ದರಲ್ಲಿ ಸ್ಫಟಿಕದ ಜಪಮಾಲೆ. ಮೂರನೆಯದ್ದರಲ್ಲಿ ಬಿಳಿ ಗಿಳಿ, ನಾಲ್ಕನೆಯ ಕೈಯಲ್ಲಿ ಕಮಲವಿದೆ.

******

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಎಂ. ಬಿ. ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ವಿಜಯಪುರ

ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359